Sanctioning of an Agricultural College to Tumkur District.

**Q.*—700. Smt. G. C. BHAGEERATHAMMA (Tumkur).—

Will the Government be pleased to state :—

whether they have sanctioned an Agricultural College to Tumkur District during 1964-65 ?

A.— Sri H. C. BORAIAH (Parliamentary Secretary to Minister for Agriculture).—

No.

PAPERS LAID ON THE TABLE.

Sri B. D. JATTI (Minister for Finance).—I beg to lay on the Table of the House the Annual Report and Accounts of the Mysore State Financial Corporation for the year ended 31st March 1964 as required under sub-section (3) of Section 38 of the State Financial Corporations Act, 1951, and on behalf of the Minister for Education, I also lay the information as promised in reply to Starred Question No. 537 from the 38th List.

MYSORE PANCHAYAT RAJ BILL, 1964.

Motion to consider

(Debate contd.)

†ಶ್ರೀ ಕೆ.ಎಸ್.ಗೌಡಯ್ಯ(ಕೃಷ್ಣರಾಜನಗರ).—ಮಾನ್ಯ ಸಭಾಪತಿಗಳೇ, 1964ನೇ ಮೈಸೂರು ಪಂಚಾಯಿತ್ತಿ ರಾಜ್ಯ ವಿಧೇಯಕವನ್ನು ಪರಿಶೀಲಿಸುವಾಗ, ನಾನು ಈ ವಿಧೇಯಕವನ್ನು ವಿರೋಧಿಸುತ್ತೇನೆ ಎಂದು ವಿಷಾದದಿಂದ ಹೇಳಬೇಕಾಗಿದೆ. ಇದನ್ನು ವಿರೋಧಿಸುತ್ತೇನೆ ಎಂಬುದಾಗಿ ಕೆಲವರು ನನ್ನನ್ನು ಮಂದಗಾಮಿ ಅಥವಾ ಪ್ರತಿಗಾಮಿ ಎಂಬುದಾಗಿ ಕರೆಯಬಹುದು. ಆದರೆ ಈ ವಿಧೇಯಕವನ್ನು ಶಾಸನವನ್ನಾಗಿ ಮಾಡಲಿಕ್ಕೆ ಕಾಲ ಸನ್ನಿಹಿತವಾಗಿಲ್ಲ ಎಂದು ಹೇಳಬೇಕಾಗಿದೆ. ಇದಕ್ಕೆ ಕಾರಣ ನಮ್ಮ ದೇಶದ ಹಣಕಾಸಿನ ಪರಿಸ್ಥಿತಿ ಈಗ ಸರಿಯಾಗಿಲ್ಲ. ಈ ಶಾಸನವನ್ನು ಜಾರಿಗೆ ತರಬೇಕಾಗಿ ಬಂದಾಗ ಎಷ್ಟು ಹಣಕಾಸನ್ನು ಒದಗಿಸಬೇಕೋ ಅದನ್ನು ಒದಗಿಸುವುದಕ್ಕೆ ಸಾಧ್ಯವಿಲ್ಲದೇ ಇರುವುದರಿಂದ ಈ ಶಾಸನ ಪರಿಣಾಮಕಾರಿಯಾಗಿ ಕೆಲಸ ಮಾಡಲಿಕ್ಕೆ ಸಾಧ್ಯವಿಲ್ಲ ಎಂಬುದಾಗಿ ನಾನು ಭಾವಿಸುತ್ತೇನೆ. ಎರಡನೆಯದಾಗಿ 1959ನೆಯ ಇಸವಿ ವಿಲೇಜ್ ಪಂಚಾಯಿತ್ತಿ ಮತ್ತು ತಾಲ್ಲೂಕು ಬೋರ್ಡು ಶಾಸನದ ಪ್ರಕಾರ ಏನು ಪಂಚಾಯಿತ್ತಿಗಳು ಮತ್ತು ತಾಲ್ಲೂಕು ಬೋರ್ಡುಗಳನ್ನು ಸೃಷ್ಟಿಸಿದ್ದೇವೆ ಆ ಸ್ಥಳೀಯ ಸಂಸ್ಥೆಗಳು ಇನ್ನೂ ಸರಿಯಾಗಿ ಕೆಲಸ ಮಾಡುತ್ತಿಲ್ಲ. ಆ ಶಾಸನದಲ್ಲಿ ಹೇಳಿರುವ ಏನೇನು ಕಾರ್ಯಕರ್ತರು ಸಿಬ್ಬಂದಿಯನ್ನು ಒದಗಿಸಬೇಕಾಗಿತ್ತೋ ಅದನ್ನು ಇನ್ನೂ ಒದಗಿಸಿಲ್ಲ, ಅವರಿಗೆ ಸರಿಯಾಗಿ ಹಣವನ್ನೂ ಒದಗಿಸಿಲ್ಲ. ಹೀಗೆ ಪಂಚಾಯಿತ್ತಿ ಸೆಕ್ರೆಟರಿಗಳು ಮತ್ತು ತಾಲ್ಲೂಕು ಬೋರ್ಡಿನ ಸಿಬ್ಬಂದಿಯನ್ನು ಸರಿಯಾಗಿ ಒದಗಿಸದೇ ಈ 5 ವರ್ಷಗಳಲ್ಲಿ ಆ ಸಂಸ್ಥೆಗಳು ಏನೇನು ಕೆಲಸ ಮಾಡಬೇಕಾಗಿದ್ದುವೋ ಅದನ್ನು ಮಾಡಲಿಕ್ಕೆ ಸಾಧ್ಯವಿಲ್ಲದೇ ಹೋಗಿದೆ. ಹೀಗೆ ಹಿಂದೆ ಇದ್ದ ಒಂದು ಶಾಸನದ ಪ್ರಕಾರ ನಿಯಮಿತವಾಗಿರತಕ್ಕ ಸಂಸ್ಥೆಗಳು ಸರಿಯಾಗಿ ಕೆಲಸ ಮಾಡದೇ ಇರುವಾಗ, ಏನು ಸಿಬ್ಬಂದಿ ಕೊಡಬೇಕಾಗಿತ್ತೋ, ಏನು ಹಣಕಾಸನ್ನು ಕೊಡಬೇಕಾಗಿತ್ತೋ ಅದನ್ನು ಒದಗಿಸದೇ ಆ ಸಂಸ್ಥೆಗಳು ಚೆನ್ನಾಗಿ ಕೆಲಸ ಮಾಡಲಿಲ್ಲ ಎಂಬುದು ಸರ್ವ

ವಿದಿತವಾದ ವಿಷಯ. ಈಗಿರುವ ಸಂಸ್ಥೆಗಳಿಗೆ ಸರ್ಕಾರ ಸರಿಯಾದಂತಹ ವ್ಯವಸ್ಥೆಯನ್ನು ಮಾಡಲಿಕ್ಕೆ ಸಾಧ್ಯವಿಲ್ಲದೇ ಇರುವಾಗ ಹಣಕಾಸಿನ ವ್ಯವಸ್ಥೆಯನ್ನು ಉತ್ತಮಪಡಿಸದೇ ಇರುವಾಗ ಬೇರೆ ಒಂದು ಶಾಸನವನ್ನು ತಂದು ಅದಕ್ಕೆ ಇನ್ನೂ ಹೆಚ್ಚಿನ ಕರ್ತವ್ಯಗಳನ್ನು ವಹಿಸಿದ್ದೇ ಆದರೆ ಅದು ಹೇಗೆ ಕೆಲಸ ಮಾಡುತ್ತದೆ ಎಂದು ನಾನು ಪ್ರಶ್ನಿಸುತ್ತೇನೆ. ಈ ವಿಧೇಯಕದಲ್ಲಿ ಸೂಚಿಸಿರುವಂತೆ ಈ ಸ್ಥಳೀಯ ಸಂಸ್ಥೆಗಳ ಕಾರ್ಯ ಕ್ಷೇತ್ರ ಬೇಕಾದಷ್ಟು ವಿಸ್ತರಿಸಲ್ಪಟ್ಟಿದೆ, ಜವಾಬ್ದಾರಿ ಮತ್ತು ಕರ್ತವ್ಯಗಳನ್ನು ವಿಪರೀತವಾಗಿ ಅವುಗಳ ಮೇಲೆ ಹೇರಿದ್ದೀರಿ. ಅದಕ್ಕನುಗುಣವಾಗಿ ಆರ್ಥಿಕ ವ್ಯವಸ್ಥೆ ಅಥವಾ ಹಣಕಾಸಿನ ಬೆಂಬಲ ಇಲ್ಲ ಮತ್ತು ಕಾರ್ಯಕರ್ತರ ಬೆಂಬಲ ಇಲ್ಲ. ಈ ಮೂರು ಕಾರಣಗಳಿಂದ ಈ ವಿಧೇಯಕ ಶಾಸನವಾಗಿ ಜಾರಿಗೆ ಬರಲಿಕ್ಕೆ ಕಾಲ ಸನ್ನಿಹಿತವಾಗಿಲ್ಲ, ಇನ್ನೂ ಕೊಂಚ ಕಾಲ ತಾಳ್ಮೆ ಮಾಡಿ ಕನಿಷ್ಟ 5 ವರುಷಗಳಾದರೂ ನಿಧಾನವಾಗಿ ಈ ಶಾಸನವನ್ನು ಜಾರಿಗೆ ತರಬಹುದು ಎಂಬುದಾಗಿ ಹೇಳುತ್ತೇನೆ. ಹಣಕಾಸಿನ ವಿಷಯದಲ್ಲಿ ಹೇಳಬೇಕಾದರೆ ತಾವು ಈ ವಿಧೇಯಕದಲ್ಲಿ 100 ಕ್ಕೆ 100 ರಷ್ಟು ಸೆಸ್ ಹಾಕಲಿಕ್ಕೆ ಅವಕಾಶ ಮಾಡಿಕೊಟ್ಟಿದ್ದೀರಿ. ಈಗಾಗಲೇ ಪ್ರತಿಯೊಂದು ಗ್ರಾಮದಲ್ಲೂ ಸರ್ಕಾರದವರು ಪ್ರಕಟಣೆ ಹೊರಡಿಸಿದ್ದಾರೆ, ಈಗಿನ ಕಂದಾಯ ಮಾರ್ಪಾಡಾಗುತ್ತದೆ ಆ ಮಾರ್ಪಾಡು ಹಿಂದೆ ಇದ್ದದ್ದಕ್ಕಿಂತ ನಾಲ್ಕು ಐದರಷ್ಟು ಎಂದು. ಅದಕ್ಕೆ ಆಕ್ಷೇಪಣೆಗಳನ್ನು ಕರೆದಿದ್ದಾರೆ, ಅದು ಬಂದಮೇಲೆ ಕಂದಾಯ ಎಷ್ಟಕ್ಕೆ ನಿಗದಿ ಮಾಡುತ್ತಾರೆಂಬುದು ಗೊತ್ತಿಲ್ಲ. ಇಂದು ಆಡಳಿತ ಪಕ್ಷಕ್ಕೆ ಕಂದಾಯ ಹೆಚ್ಚಿಸಬೇಕೆಂಬ ಭಾವನೆಯಿರುವಂತೆ ತೋರುತ್ತದೆ. ಆದರ ಪ್ರಕಾರ ಹಿಂದಿನ ಕಂದಾಯಕ್ಕಿಂತ ಎರಡು ಮೂರರಷ್ಟು ಹೆಚ್ಚು ಮಾಡುವಂತೆ ಕಂಡುಬರುತ್ತದೆ. ಜೊತೆಗೆ ಈ ವಿಧೇಯಕದಲ್ಲಿರುವ ಪ್ರಕಾರ ಸೆಸ್ ಕೂಡ ಎರಡರಷ್ಟು ಹೆಚ್ಚುತ್ತದೆ. ಹೀಗಾಗಿ ರೈತ ಹಿಂದೆ ಕಂದಾಯ ಕೊಡುತ್ತಿದ್ದುದಕ್ಕಿಂತ ಕೆಲವು ಕಡೆ 3-4 ರಷ್ಟು ಮತ್ತೆ ಕೆಲವು ಕಡೆ 8ರಷ್ಟು ಹೆಚ್ಚಿಗೆ ಕೊಡಬೇಕಾಗುತ್ತದೆ. ಇಷ್ಟು ಭಾರ ರೈತರ ಮೇಲೆ ಹೇರುವುದು ನಿಜವಾಗಿಯು ಕೂಡ ಈಗಿನ ಕಾಲದಲ್ಲಿ ಪದಾರ್ಥಗಳ ಬೆಲೆ ಬಹಳವಾಗಿ ಹೆಚ್ಚಿರುವಾಗ ಸರಿಯಾದ ಮಾರ್ಗವಲ್ಲ. ಆದುದರಿಂದ ರೈತರಿಗೆ ಜನಸಾಮಾನ್ಯರಿಗೆ ಈ ಶಾಸನ ಹಿಡಿಸುವುದಿಲ್ಲ ಎಂದು ನಾನು ಭಾವಿಸುತ್ತೇನೆ. ಹಣಕಾಸಿನ ಕೊರತೆಯಿರುವಾಗ ಸರ್ಕಾರ ಹೀಗೆ ಪ್ರಯೋಗ ಮಾಡುವುದು ಒಂದು ಸಾಹಸದ ಕೆಲಸ. ಈ ದೃಷ್ಟಿಯಿಂದ ಈ ವಿಧೇಯಕವನ್ನು ಶಾಸನಮಾಡದೆ ಕನಿಷ್ಠಪಕ್ಷ 5 ವರ್ಷಗಳವರೆಗಾದರೂ ಮುಂದೂಡುವುದು ಒಳ್ಳೆಯದು. ಹಾಗೆ ಮಾಡಿ ಈಗಿರುವ ಸಂಸ್ಥೆಗಳನ್ನು ಸರಿಯಾಗಿ ಬಲಪಡಿಸಿ ಬೇಕಾದ ಸಿಬ್ಬಂದಿ ಹಣಕಾಸು ಮುಂತಾದುವಕ್ಕೆ ವ್ಯವಸ್ಥೆಮಾಡಿ ಅವು ಚೆನ್ನಾಗಿ ಕೆಲಸ ಮಾಡಲು ಅವಕಾಶಮಾಡಬೇಕು.

ಈಗ ಪಂಚಾಯಿತಿಗಳಲ್ಲಿ ಸರಿಯಾದ ಕಾರ್ಯದರ್ಶಿಯಿಲ್ಲ, ಲೆಕ್ಕಪತ್ರವಿಡುವ ಸರಿಯಾದ ವಿಧಾನ ಕೂಡ ಇಲ್ಲ, ಲೆಕ್ಕಪತ್ರವಿಡುವ ಪುಸ್ತಕವಿಲ್ಲ, ತನಿಖೆಮಾಡುವ ಸಿಬ್ಬಂದಿ ಇಲ್ಲ, ಎಷ್ಟೋ ಕಡೆ ತನಿಖೆಯಾಗಿರುವುದಿಲ್ಲ, ತಾಲ್ಲೂಕು ಬೋರ್ಡ್ ಲೆಕ್ಕಪತ್ರ ಸರಿಯಾಗಿ ಇಟ್ಟಿದ್ದಾರೆಯ ಇಲ್ಲವೆ ಎಂದು ಯಾರು ತನಿಖೆಮಾಡಬೇಕೋ ತಿಳಿಯದು; ಇದರಿಂದಾಗಿ ತಾಲ್ಲೂಕುಬೋರ್ಡ್ ಲೆಕ್ಕದ ತನಿಖೆಯಾಗಿಲ್ಲ. 5 ವರ್ಷಗಳಿಂದ ಇಲ್ಲಿಯವರೆಗೂ ಪುಸ್ತಕದಲ್ಲಿ ಲೆಕ್ಕ ಬರೆದೇ ಇಲ್ಲ. ಆದುದರಿಂದ ಈ ವಿಧೇಯಕ ಒಂದು ಪಕ್ಷ ಶಾಸನವಾದರೂ ಕೂಡ ಅದು ಕೇವಲ ಕಡಿತದಲ್ಲಿರುತ್ತದೆಯೇ ಹೊರತು ಅದನ್ನು ಜಾರಿಗೆ ಕೊಟ್ಟರೂ ಕೂಡ ಉದ್ದೇಶ ಮತ್ತು ಗುರಿಯೇನಿದೆ ಅದನ್ನು ಸಾಧಿಸುವುದಕಾಗುವುದಿಲ್ಲ; ಇಷ್ಟು ನಿಷ್ಪ್ರಪ್ರಯೋಜಕವಾದ ಶಾಸನವಾಗುತ್ತದೆ. ಚುನಾವಣೆಗಳು ಮಾತ್ರ ಇದರ ಪ್ರಕಾರ ನಡೆಯುತ್ತವೆ, ಪಂಚಾಯಿತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾಪರಿಷತ್ತು ಅಸ್ತಿತ್ವಕ್ಕೆ ಬರುತ್ತವೆ. ಆದರೆ ಎಲ್ಲವೂ ಕೂಡ ಚುನಾವಣೆಯಲ್ಲೇ ಪರ್ಯವಸಾನವಾಗುತ್ತವೆ. ಟಿ. ಎ., ಡಿ ಎ. ಮತ್ತು ಅಧ್ಯಕ್ಷ ಉಪಾಧ್ಯಕ್ಷರ ಸಂಭಾವನೆ ಕೊಡುವುದಕ್ಕೆ ಅವಕಾಶವಿದೆ. ಈ ರೂಪದಲ್ಲಿ ಹಣ ಖರ್ಚಾಗುವುದಕ್ಕೆ ಅವಕಾಶವಿದೆ. ಆದರೆ ವ್ಯವಸಾಯ, ವಿದ್ಯಾಭ್ಯಾಸ ಮುಂತಾದ ಕ್ಷೇತ್ರಗಳಲ್ಲಿ ಪ್ರಗತಿಯೇನಾಗಬೇಕೋ ಅದಾಗದೆ ಹಾಗೆಯೇ ಇರುತ್ತದೆ ಎಂದು ಭಾವಿಸುತ್ತೇನೆ. ಈ ದೃಷ್ಟಿಯಿಂದ ಈ ಶಾಸನಕ್ಕೆ ಅಂಗೀಕಾರ ಪಡೆದು ಈಗ ಜಾರಿಗೆ ತರದೆ ಇದನ್ನು 5 ವರ್ಷವಾದರೂ ಮುಂದೂಡಬೇಕೆಂದು ಬೇಡಿಕೊಳ್ಳುತ್ತೇನೆ.

[MR. DEPUTY SPEAKER in the Chair.]

ಇನ್ನು ತಾಲ್ಲೂಕುಬೋರ್ಡಿನ ಸದಸ್ಯತ್ವಕ್ಕೆ ಪರೋಕ್ಷ ಚುನಾವಣೆ ಇರಬೇಕೆಂದು ಈ ವಿಧೇಯಕದಲ್ಲಿ ನಮೂದುಮಾಡಲಾಗಿದೆ. ಈ ಪರೋಕ್ಷ ಚುನಾವಣೆ ಇರಬೇಕೇ, ಬೇಡವೆ, ಎಂಬ ವಿಷಯ ವಿವಾದಾಸ್ಪದವಾಗಿದೆ. ಮಾನ್ಯ ಸದಸ್ಯರನೇಕರು ಪರೋಕ್ಷ ಚುನಾವಣೆ ಬೇಡವೆಂದು ಅಭಿಪ್ರಾಯಪಟ್ಟಿದ್ದಾರೆ. ನಾನೂ ಕೂಡ ಪರೋಕ್ಷ ಚುನಾವಣೆ ಬೇಡವೆಂದು ಹೇಳಲಿಚ್ಛಿಸುತ್ತೇನೆ. ಏಕೆಂದರೆ 15 ಜನ ಸದಸ್ಯರು ಒಂದು ತಾಲ್ಲೂಕು ಬೋರ್ಡಿನಲ್ಲಿದ್ದರೆ ಅದರಲ್ಲಿ 8 ಜನ ಪ್ರತ್ಯಕ್ಷ ಚುನಾವಣೆ

(ಶ್ರೀ ಕೆ. ಎಸ್. ಗೌಡಯ್ಯ)

ಮೂಲಕ ಮತ್ತು 7 ಜನ ಪರೋಕ್ಷ ಚುನಾವಣೆಮೂಲಕ ಬರುವಂತೆ ಮಾಡುವುದು ಅಷ್ಟು ಚೆನ್ನಾಗಿರುವುದಿಲ್ಲ. ಪರೋಕ್ಷದಲ್ಲಿ ನಡೆಸುವವರು ಯಾರು? ಪಂಚಾಯಿತಿ ಸದಸ್ಯರುಗಳು 7 ಜನರನ್ನು ಚುನಾಯಿಸುವ ಹಕ್ಕನ್ನು ಪಡೆಯುತ್ತಾರೆ. ಈ ಪರೋಕ್ಷ ಚುನಾವಣೆ ನಡೆಸುವುದು ಪಂಚಾಯಿತಿಗಳಿಗೆ ಸ್ಥಾನ ಕಲ್ಪಿಸುವುದಕ್ಕೆ ಎಂದು ಮಂತ್ರಿಗಳು ಹೇಳಿದರು. ಆದರೆ ಸುಮಾರು 50 ಪಂಚಾಯಿತಿಗಳೇನಿವೆ, ಅವುಗಳಿಂದ ಕೇವಲ 7 ಸದಸ್ಯರು ಬಂದರೆ ಅವರು ಪಂಚಾಯಿತಿಗಳ ಹಿತದೃಷ್ಟಿಯನ್ನು ಹೇಗೆ ನೋಡಲು ಸಾಧ್ಯ? ಪ್ರತಿ ಪಂಚಾಯಿತಿಯ ಛೇರ್ಮನ್ ತಾಲ್ಲೂಕು ಬೋರ್ಡ್ ಸದಸ್ಯನಾಗಿದ್ದರೆ ಆಗ ಆತ ತನಗೆ ಸಂಬಂಧಪಟ್ಟ ಪಂಚಾಯಿತಿಯ ಹಿತದೃಷ್ಟಿಯನ್ನು ಕಾಯುವ ಶಕ್ತಿ ಪಡೆಯುತ್ತಾನೆ, ಅದಕ್ಕೆ ಅವಕಾಶವಿರುತ್ತದೆ. ಆದರೆ 50 ಪಂಚಾಯಿತಿಗಳ ಹಿತವನ್ನು 7 ಜನ ಸದಸ್ಯರು ಕಾಪಾಡುತ್ತಾರೆಂಬುದು ನಂಬಲಾರದ ವಿಷಯ, ಮತ್ತು ಚುನಾವಣೆಯ ಮೂಲಕ ಅವರು ಬರುವುದರಿಂದ ಈ ಪಂಚಾಯಿತಿ ನಮಗೆ ಓಟು ಕೊಟ್ಟಿಲ್ಲ, ಆ ಪಂಚಾಯಿತಿ ಓಟು ಕೊಟ್ಟಿಲ್ಲ ಎಂದು ಮನಸ್ಸಿನಲ್ಲಿಟ್ಟುಕೊಂಡು ಓಟು ಕೊಡದೆ ಪಂಚಾಯಿತಿಗಳಿಗೆ ಅನುಕೂಲಮಾಡಬಾರದೆಂಬ ಭಾವನೆ ತಾಳುವುದರಿಂದ ಆದಷ್ಟೂ ಪರೋಕ್ಷ ಚುನಾವಣೆಯನ್ನು ತಪ್ಪಿಸಿ ಈಗಿರುವಂತೆ ಪ್ರತ್ಯಕ್ಷ ಚುನಾವಣೆಯನ್ನೇ ನಡೆಸಬೇಕೆಂದು ಕೇಳಿಕೊಳ್ಳುತ್ತೇನೆ. ಅಲ್ಲದೆ ಪರೋಕ್ಷ ಚುನಾವಣೆ ಮಾಡುವುದರಿಂದ ತಾಲ್ಲೂಕು ಬೋರ್ಡನ್ನು ಪುನರ್‌ರಚನೆ ಮಾಡುವಾಗ ಎರಡು ಸಲ ಚುನಾವಣೆ ನಡೆಸಬೇಕಾಗುತ್ತದೆ; ಒಂದು ಪ್ರತ್ಯಕ್ಷ ಚುನಾವಣೆ, ಇನ್ನೊಂದು ಪರೋಕ್ಷ ಚುನಾವಣೆ. ಹೀಗೆ ನಮ್ಮ ದೇಶದಲ್ಲಿ ಚುನಾವಣೆ ನಡೆಯುವುದು ಬೇಕಾಗಿಲ್ಲ. ಪ್ರತಿ ಆರು ತಿಂಗಳಿಗೆ ಅಥವ ವರ್ಷಕ್ಕೆ ಚುನಾವಣೆ ಮಾಡಿದರೆ ಜನರ ಮನಸ್ಸು ಕಲಕಿಹೋಗುತ್ತದೆ. ಅದು ಸರಿ ಹೋಗಬೇಕಾದರೆ ಬಹಳ ದಿವಸ ಬೇಕಾಗುತ್ತದೆ. ಆ ದೃಷ್ಟಿಯಿಂದ ಹೆಚ್ಚು ಚುನಾವಣೆಗಳಾಗದ ಹಾಗೆ ಅವಕಾಶ ಮಾಡಬೇಕೆಂದು ಹೇಳುತ್ತೇನೆ.

ಇನ್ನು ನ್ಯಾಯ ಪಂಚಾಯಿತಿಗಳು. ಅವು ನಮ್ಮ ದೇಶದಲ್ಲಿ ಹಿಂದಿನ ಕಾಲದಿಂದಲೂ ನಡೆದುಕೊಂಡು ಬಂದಿದ್ದರೂ ಕೂಡ ಈಗ ಸಾಧಿಸಿರುವ ನ್ಯಾಯ ಪಂಚಾಯಿತಿಗಳು ತೀರಾ ಹೊಸವು. ಅಲ್ಲಿ ಅಧ್ಯಕ್ಷರು ಮತ್ತು ಸದಸ್ಯರು ಚುನಾಯಿತರಾದವರಿರಬೇಕೆಂದು ವಿಧೇಯಕ ಮಾಡಿದ್ದೀರಿ. ಅವರನ್ನು ಚುನಾಯಿಸುವವರು ಪಂಚಾಯಿತಿಯವರು. ಪಂಚಾಯಿತಿ ಸದಸ್ಯರಲ್ಲಿ ಬಹುಮತವಿರುವವರನ್ನು ಚುನಾವಣೆ ಮಾಡಿದ ಮೇಲೆ ಅವರು ಪಂಚಾಯಿತಿ ಸದಸ್ಯರ ಮಾತನ್ನು ಕೇಳಬೇಕಾಗುತ್ತದೆ. ಮತ್ತು ಕೋಆಪ್ಟ್ ಮಾಡಿಕೊಳ್ಳಬಹುದೆಂದಿದೆ. ಯಾರನ್ನು ಮಾಡಿಕೊಳ್ಳುವುದು ? ತಮ್ಮನ್ನು ಚುನಾಯಿಸಿದವರನ್ನು ತೆಗೆದುಕೊಳ್ಳಬೇಕಾಗುತ್ತದೆ. ನ್ಯಾಯ ಪಂಚಾಯಿತಿ ಕ್ಷೇತ್ರದಲ್ಲಿ ಒಂದು ಗುಂಪಿನ ಸದಸ್ಯರು ಮಾತ್ರ ಇರುವುದಕ್ಕೆ ಅವಕಾಶವಾಗುತ್ತದೆ. ಎರಡು ರಾಜಕೀಯ ಗುಂಪುಗಳಿದ್ದರೆ ಪಂಚಾಯಿತಿಯಲ್ಲಿ ಒಂದು ಗುಂಪಿಗೆ ನ್ಯಾಯ ದೊರೆಯುತ್ತದೆಂದು ಹೇಳುವುದಕ್ಕಾಗುವುದಿಲ್ಲ, ಆದುದರಿಂದ ಪಂಚಾಯಿತಿ ರಚಿಸುವಾಗ ಈ ಚುನಾವಣೆ ಅಂಶವನ್ನು ತೆಗೆಯಬೇಕೆಂದು ಹೇಳುತ್ತೇನೆ. ಗುರುತರವಾದ ಜವಾಬ್ದಾರಿಯನ್ನೇನು ನ್ಯಾಯ ಪಂಚಾಯಿತಿಯ ಮೇಲೆ ಈ ವಿಧೇಯಕದಲ್ಲಿ ಹೊರಿಸಲಾಗಿದೆ. ಅದನ್ನು ನಿರ್ವಾಹ ಮಾಡಲು ಅದಕ್ಕೆ ದಕ್ಷತೆಯಿದೆಯೇ, ಅವಕಾಶವಿದೆಯೆ ಎಂಬುದು ಮಹತ್ತರವಾದ ಪ್ರಶ್ನೆ. ಈಗಿನ ಎಲೆಕ್ಷಂಗ್ ವಾತಾವರಣದಲ್ಲಿ ದಕ್ಷತೆ ಮತ್ತು ನಿಷ್ಪಕ್ಷಪಾತ ಮನೋಭಾವನೆಗೆ ಅವಕಾಶವಿಲ್ಲ. ಆದುದರಿಂದ ಈ ನ್ಯಾಯ ಪಂಚಾಯಿತಿಗಳ ರಚನೆಮಾಡುವ ಭಾಗವನ್ನು ಪೂರ್ಣವಾಗಿ ಕೈಬಿಡಬೇಕೆಂದು ಕೇಳಿಕೊಳ್ಳುತ್ತೇನೆ.

ಒಟ್ಟಿನಲ್ಲಿ ಈ ವಿಧೇಯಕ ಈಗಿನ ಸಂದರ್ಭದಲ್ಲಿ ಶಾಸನವಾಗಲಿಕ್ಕೆ ಅರ್ಹವಾಗಿಲ್ಲ. ಇನ್ನು 5-10 ವರ್ಷಗಳ ನಂತರ ಇದನ್ನು ತರುವುದು ಚೆನ್ನಾಗಿ ಕಾಣುತ್ತದೆ. ನಮ್ಮಲ್ಲಿ ಈಗಿನ ಹಣಕಾಸಿನ ಪರಿಸ್ಥಿತಿ ಉತ್ತಮವಾಗಿಲ್ಲ. ಹಳ್ಳಿಗಾಡಿನ ಪ್ರದೇಶದಲ್ಲಿರುವ ಜನಗಳು ಇನ್ನೂ ಅಷ್ಟು ವಿದ್ಯಾವಂತರಾಗಿಲ್ಲ ಮತ್ತು ಇಷ್ಟು ಹೆಚ್ಚಿನ ಜವಾಬುದಾರಿಗಳನ್ನೂ ಹೊರಲು ಶಕ್ತರಾಗಿಲ್ಲ ಮತ್ತು ಕೆಲಸ ಕಾರ್ಯಗಳನ್ನು ಮಾಡಲು ಅವರಿಂದ ಆಗುವುದಿಲ್ಲ. ಅದರಿಂದ ನಾನು ಈ ಮಸೂದೆಯನ್ನು ವಿರೋಧಿಸುತ್ತೇನೆ.

† ಶ್ರೀ ಸಿ. ಎಂ. ರೇವಣಸಿದ್ದಯ್ಯ (ಸಿರಗುಪ್ಪ).—ಸ್ವಾಮಿ, ನಮ್ಮ ಮುಂದೆ ಇಟ್ಟಿರುವ ಈ ಪಂಚಾಯಿತಿ ಮಸೂದೆಯನ್ನು ನಾನು ಸ್ವಾಗತಿಸುತ್ತೇನೆ. ಆದರೆ ಈಗ ಈ ಪಂಚಾಯಿತಿ ಬಿಲ್ಲನ್ನು ಮಂಜೂರು ಮಾಡುವುದರಿಂದ ಪಂಚಾಯಿತಿಗಳಿಗೆ ಹಾಗೂ ತಾಲ್ಲೂಕ್ ಬೋರ್ಡುಗಳಿಗೆ ಇದುವರೆಗೆ ಕೊಟ್ಟಿದುದಕ್ಕಿಂತ ಹೆಚ್ಚು ಪ್ರಾಶಸ್ತ್ಯವನ್ನೇನೂ ಕೊಟ್ಟಿಲ್ಲ ಎನ್ನುವುದು ಈ ಬಿಲ್ಲಿನಿಂದ ಕಂಡುಬರು

ತ್ತದೆ. ಡಿಸ್ಟ್ರಿಕ್ಟ್ ಕೌನ್ಸಿಲ್, ಸ್ಟೇಟ್ ಕೌನ್ಸಿಲ್ ಇವೆರಡು ಮಾತ್ರ ಇಲ್ಲಿನ ಹೆಚ್ಚು ವೈಶಿಷ್ಟ್ಯಗಳು ಎಂದು ತೋರುತ್ತದೆ. ಆದರೆ ಪಂಚಾಯತಿಗಳಲ್ಲಿ ಈಗ ಕೆಲಸಗಳು ಸುರಕ್ಷಿತವಾಗಿ ನಡೆಯುತ್ತಿವೆಯೋ ಇಲ್ಲವೋ ಮತ್ತು ಈ ಅಧಿಕಾರಗಳನ್ನು ಕೊಟ್ಟರೆ ಜನತೆಗೆ ಇದರಿಂದ ಹೆಚ್ಚಿನ ಅನ್ಯಾಯವಾಗುತ್ತದೆಯೇನೋ ಎನ್ನುವ ಶಂಕೆಯನ್ನು ಇಲ್ಲಿ ವ್ಯಕ್ತಪಡಿಸಿದರು. ನನಗೇನೋ ಇಲ್ಲಿ ಅಂತಹ ಶಂಕೆಯನ್ನು ವ್ಯಕ್ತಪಡಿಸಲಿಕ್ಕೆ ಕಾರಣವೇನೂ ಇಲ್ಲ ಎಂದು ತೋರುತ್ತದೆ. ಏಕೆಂದರೆ ಈಗ ಸುಮಾರು ಇಪ್ಪತ್ತು ವರ್ಷಗಳಿಂದಲೂ ಪಂಚಾಯತಿಗಳು ನಡೆದುಕೊಂಡು ಬರುತ್ತಿವೆ. ಎಲ್ಲ ಕೆಲಸಕಾರ್ಯಗಳನ್ನೂ ಸುರಕ್ಷಿತವಾಗಿ ನಡೆಸಿಕೊಂಡು ಬರುತ್ತಿದ್ದಾರೆ. ಅದರಂತೆ ಇನ್ನು ಮುಂದೆಯೂ ಈ ಕಾನೂನಿನಂತೆ ಕೆಲಸಗಳನ್ನು ನಡೆಸಿಕೊಂಡು ಹೋಗುವುದರಲ್ಲಿ ಏನೂ ಸಂಶಯವಿಲ್ಲ ಎಂದು ನನಗನಿಸುತ್ತದೆ.

ಈಗ ತಂದಿರುವ ಆಕ್ಟನ್ನು ನೋಡುವುದಾದರೆ ಇದರಲ್ಲಿ ರೈತರಿಗೆ ಕರಭಾರವನ್ನು ಹೆಚ್ಚು ಮಾಡಿದ್ದಾರೆ ಎನ್ನುವುದು ಕಂಡುಬರುತ್ತಿದೆ. ಡಿಸ್ಟ್ರಿಕ್ಟ್ ಕೌನ್ಸಿಲ್ ಮತ್ತು ಸ್ಟೇಟ್ ಕೌನ್ಸಿಲ್ ಸೇರಿ ಒಟ್ಟು ಅರವತ್ತು ಪರ್ಸೆಂಟಿನಷ್ಟು ಸೆಸ್ಸನ್ನು ಹಾಕಬೇಕು ಎಂದು ಮಾಡಿದರೆ ರೈತರಿಗೆ ಬಹಳ ಕಷ್ಟವಾಗುತ್ತದೆ. ಈಗಾಗಲೇ ರೈತರು ಕೊಡತಕ್ಕ ತೆರಿಗೆಗಳು ಬಹಳ ಹೆಚ್ಚು, ಇನ್ನು ಮುಂದೆ ಭೂಕಂದಾಯವನ್ನು ಬೇರೆ ಹೆಚ್ಚು ಮಾಡಬೇಕೆಂದಿದ್ದಾರೆ. ಅದರಿಂದ ಇಂತಹ ಸೆಸ್ಸುಗಳನ್ನು ಹಾಕತಕ್ಕದ್ದು ಎಂದರೆ ಬಹಳ ಭಾರವಾಗುತ್ತದೆ. ಆದ್ದರಿಂದ ಇಲ್ಲಿ ಕರಗಳನ್ನು ಹಾಕಬೇಕೆಂದು ತಂದಿರುವ ಕಲಮನ್ನು ಪೂರ್ತಿಯಾಗಿ ತೆಗೆದು ಹಾಕಬೇಕೆಂದು ಸೂಚನೆ ಮಾಡುತ್ತೇನೆ.

ಇದುವರೆಗೆ ಪಂಚಾಯತಿಗಳು ಸರಿಯಾಗಿ ಕೆಲಸಕಾರ್ಯಗಳನ್ನು ನಡೆಸುವುದಕ್ಕಾಗದೇ ಇರಲು ಕಾರಣ ಸರಕಾರ ಅವರಿಗೆ ಬಂದ ಅಡ್ಡಿಗಳನ್ನು ನಿವಾರಣೆ ಮಾಡುವುದಕ್ಕಾಗಲಿಲ್ಲ. ಅನೇಕ ಪಂಚಾಯತಿಗಳಿಗೆ ಸೆಕ್ರೆಟರಿಗಳೇ ಬರಲಿಲ್ಲ. ಸುಮಾರು ಶೇಕಡಾ ಹತ್ತರಷ್ಟು ಪಂಚಾಯತಿಗಳಲ್ಲಿ ಇದುವರೆಗೆ ಸೆಕ್ರೆಟರಿಗಳೇ ಬಂದಿಲ್ಲ. ಅದರಿಂದಾಗಿ ಅಲ್ಲಿನ ಕೆಲಸಕಾರ್ಯಗಳನ್ನು ಮಾಡಲು ಇದುವರೆಗೆ ಆಗಲಿಲ್ಲ. ಈಗ ಇದರಲ್ಲಿ ಹೇಳಿರುವಂತೆ ನಾಲ್ಕೈದು ಹಳ್ಳಿಗಳನ್ನು ಸೇರಿಸಿ ಎಲ್ಲಿ 1,500 ರವರೆಗೆ ಜನಸಂಖ್ಯೆ ಬರುತ್ತದೋ ಅಲ್ಲಿಗೆ ಒಂದು ಪಂಚಾಯತಿ ಮಾಡಬೇಕೆಂದು ಇದೆ. ಇದು ಸರಿಯಲ್ಲ. ಏಕೆಂದರೆ ಮೂರು-ನಾಲ್ಕು ಹಳ್ಳಿಗಳ ಸದಸ್ಯರುಗಳು ಸೇರಿಕೊಂಡು ಒಂದು ಕಡೆ ಸೇರಿಕೊಂಡು ವಿಚಾರ ವಿನಿಮಯಗಳನ್ನು ಮಾಡಲಿಕ್ಕೆ ಹೋದರೆ ಗುಂಪುಗಾರಿಕೆಗಳು ಬೆಳೆದು ಅಲ್ಲಿನ ಕೆಲಸಗಳು ಚೆನ್ನಾಗಿ ನಡೆಯುವುದಕ್ಕಾಗುವುದಿಲ್ಲ. ಅದರಿಂದಾಗಿ ಇವೊತ್ತು ಎಷ್ಟೋ ಕಡೆಗಳಲ್ಲಿರುವ ಹಳ್ಳಿಗಳಲ್ಲಿ ಕೆಲಸಕಾರ್ಯಗಳು ಆಗದೇ ನಿಂತುಹೋಗಿವೆ. ಈ ಆಕ್ಟಿನ ಕಲಮು ಮೂರರಲ್ಲಿ ಒಂದು ಪಂಚಾಯತಿ ಮಾಡಬೇಕಾದರೆ ಜನಸಂಖ್ಯೆ 1,500 ಕ್ಕಿಂತ ಕಡಿಮೆ ಇರಕೂಡದು ಎಂದು ಮಾಡಿದ್ದಾರೆ. ಒಂದು ಹಳ್ಳಿಯಲ್ಲಿ ಇಷ್ಟು ಜನಗಳು ಇರುವುದು ಕಷ್ಟ. ಅದರಿಂದ ಮೂರು-ನಾಲ್ಕು ಹಳ್ಳಿಗಳು ಸೇರಬೇಕಾಗುತ್ತದೆ. ಅಲ್ಲಿ ಗುಂಪುಗಾರಿಕೆ ಬೆಳೆಯಲವಕಾಶವಾಗುತ್ತದೆ. ಆದ್ದರಿಂದ ನಾನು ಸಲಹೆ ಮಾಡುವುದು 1,500 ಜನಸಂಖ್ಯೆ ಎಂದಿರುವುದನ್ನು 500ರವರೆಗೆ ಎಂದು ಮಾಡುವುದು ಉಚಿತವಾಗಿರುತ್ತದೆ ಎಂದು ನನಗನಿಸುತ್ತದೆ. ಈಗಾಗಲೇ ತಾಲ್ಲೂಕು ಬೋರ್ಡುಗಳಿಗೆ ಹಳ್ಳಿಗಳಿಂದ ದೂರುಗಳು ಇದರ ಬಗ್ಗೆ ಬಂದಿವೆ. ಎಲ್ಲ ಹಳ್ಳಿಗಳವರೂ ಪಂಚಾಯತಿಗಳು ಬೇಕೆಂದು ಕೇಳುತ್ತಿದ್ದಾರೆ. ಪಂಚಾಯತಿಗಳು ತಾಲ್ಲೂಕು ಬೋರ್ಡುಗಳ ಒಂದು ಅಂಗವಾಗಿ ಕೆಲಸಮಾಡಬೇಕಾಗಿದೆ. ಆದುದರಿಂದ 1500 ಜನಸಂಖ್ಯೆ ಇರುವ ಕಡೆಗಳಲ್ಲಿ ಒಂದು ಪಂಚಾಯತಿ ಎಂದು ಮಾಡುವುದು ಅನುಚಿತ. ಆದ್ದರಿಂದ 500 ಕ್ಕಿಂತ ಕಡಿಮೆ ಜನಸಂಖ್ಯೆ ಇಲ್ಲದಂತೆ ಎಂದು ಇದರಲ್ಲಿ ತಿದ್ದುಪಡಿ ಮಾಡಬೇಕೆಂದು ನಾನು ಇಲ್ಲಿ ಸೂಚಿಸುತ್ತೇನೆ. ತಾಲ್ಲೂಕಾ ಬೋರ್ಡಿನಲ್ಲಿ ಮಾರ್ಕೆಟಿಂಗ್ ಕೋ-ಆಪರೇಟೀವ್ ಸೊಸೈಟಿಯ ಅಧ್ಯಕ್ಷರು ಅಸೋಸಿಯೇಟ್ ಮೆಂಬರಾಗಿರಬೇಕೆಂದೂ, ಜಿಲ್ಲಾ ಪರಿಷತ್ತುಗಳಲ್ಲಿ ಜಿಲ್ಲಾ ಸೊಸೈಟಿಗಳ ಅಧ್ಯಕ್ಷರು ಅಸೋಸಿಯೇಟ್ ಮೆಂಬರುಗಳಾಗಿರಬೇಕೆಂದೂ ಇದೆ. ಹೀಗಿರುವಾಗ ಹಳ್ಳಿಗಳಲ್ಲಿರುವ ಪಂಚಾಯತಿಗಳಲ್ಲಿ ವಿಲೇಜು ಸೊಸೈಟಿಯ ಅಧ್ಯಕ್ಷರು ಅಸೋಸಿಯೇಟ್ ಮೆಂಬರಾಗಿರತಕ್ಕದ್ದು ಯುಕ್ತವಾಗಿರುತ್ತದೆ. ಅವರನ್ನೂ ಅಸೋಸಿಯೇಟ್ ಮೆಂಬರುಗಳಾಗಿ ಸೇರಿಸಬೇಕೆಂದು ನಾನು ಸರಕಾರಕ್ಕೆ ಸಲಹೆ ಮಾಡುತ್ತೇನೆ. ಹಳ್ಳಿಗಳಲ್ಲಿ ಪ್ರೊಡಕ್ಷನ್ ಪ್ರೋಗ್ರಾಂಗಳನ್ನು ಮಾಡಬೇಕಾದರೆ ಪಂಚಾಯತಿ ಅಧ್ಯಕ್ಷರಿಂದೊಬ್ಬರಿಂದಲೇ ಮಾಡುವುದಕ್ಕಾಗುವುದಿಲ್ಲ. ಅವರ ಜೊತೆಗೆ ಕೋ-ಆಪರೇಟೀವ್ ಮೂವ್‌ಮೆಂಟಿನಲ್ಲಿ ಕೆಲಸ ಮಾಡುವ ಅಧ್ಯಕ್ಷರೂ ಇದರಲ್ಲಿ ಸೇರಿ ಕೆಲಸ ಮಾಡಬೇಕು. ಆದುದರಿಂದ ಪಂಚಾಯತಿಗಳಲ್ಲಿ ಕೋ-ಆಪರೇಟೀವ್ ಸೊಸೈಟಿಯ ಅಧ್ಯಕ್ಷರನ್ನೂ ಅಸೋಸಿಯೇಟ್ ಮೆಂಬರಾಗಿ ತೆಗೆದುಕೊಳ್ಳತಕ್ಕದ್ದು ಒಳ್ಳೆಯದು ಎಂದು ನನಗನಿಸುತ್ತದೆ.

ತಾಲ್ಲೂಕು ಬೋರ್ಡು ಕಾನ್‌ಸ್ಟಿಟ್ಯೂಷನ್ ವಿಚಾರದಲ್ಲಿ ಅರ್ಧ ಭಾಗ ಸದಸ್ಯರು ಪ್ರತ್ಯಕ್ಷವಾಗಿ ಚುನಾವಣೆಯಲ್ಲಿ ಆರಿಸಿ ಬರುತ್ತಾರೆ. ಇನ್ನು ಅರ್ಧ ಭಾಗ ಸದಸ್ಯರು ಪಂಚಾಯತಿಗಳಿಂದ ಆರಿಸಿ

(ಶ್ರೀ ಸಿ. ಎಂ. ರೇವಣಸಿದ್ದಯ್ಯ)

ಬರುತ್ತಾರೆ, ಎಂದರೆ ಅದರಲ್ಲಿ ಯಾವ ಸದಸ್ಯರು ಬರುತ್ತಾರೆ? ಕ್ಯಾಂಡಿಡೇಟುಗಳಾಗಿರುವವರು ಬರುತ್ತಾರೆಯೇ ಎನ್ನುವುದು ಸ್ಪಷ್ಟವಾಗಿಲ್ಲ. ಪಂಚಾಯತಿಗಳ ದ್ವಾರಾ ಬರುವ ಸದಸ್ಯರುಗಳು ಪಂಚಾಯತಿಯ ಸದಸ್ಯರೇ ಆಗಿರುವುದೊಳ್ಳೆಯದು. ಪಂಚಾಯತಿಗಳಿಗೂ ತಾಲ್ಲೂಕ್ ಬೋರ್ಡುಗಳಿಗೂ ಸಂಬಂಧವಿರುವುದರಿಂದ ಪಂಚಾಯತಿ ಸದಸ್ಯರುಗಳಾಗಿರುವವರು ಬಂದರೆ ಇದರಲ್ಲಿ ಅನುಕೂಲವಾಗಿರುತ್ತದೆ.

ಇನ್ನು 128ನೇ ಸೆಕ್ಷನ್ನಿನಲ್ಲಿ ಹೇಳಿರುವಂತೆ ಪಂಚಾಯತಿಯಿಂದ ಬರುವ ಸದಸ್ಯರು ಎಂದರೆ ಯಾರು ಬರಬೇಕು? ಪಂಚಾಯತಿ ಮೆಂಬರುಗಳಾಗಿರುವವರು ಬರಬೇಕೇ? ಅಥವಾ ಅಲ್ಲಿನ ವೋಟುದಾರುಗಳಿಂದ ಆರಿಸಿದವರು ಬರಬೇಕೇ ಎನ್ನುವುದನ್ನು ಸ್ಪಷ್ಟವಾಗಿ ಇದರಲ್ಲಿ ಸೇರಿಸಬೇಕು. ಹಾಗೆ ಮಾಡಿದರೆ ಇಲ್ಲಿನ ಕೆಲಸಕಾರ್ಯಗಳು ಯೋಗ್ಯ ರೀತಿಯಿಂದ ನಡೆಯಲು ಅನುಕೂಲವಾಗುತ್ತದೆ ಎಂದು ನಾನು ಇಲ್ಲಿ ಸರಕಾರಕ್ಕೆ ಸಲಹೆ ಮಾಡುತ್ತಿದ್ದೇನೆ.

ಇನ್ನು 234ನೇ ಕ್ಲಾಜಿನಲ್ಲಿ ಜಿಲ್ಲಾ ಪರಿಷತ್ತಿನ ಸದಸ್ಯರುಗಳನ್ನು ತೆಗೆಯಬೇಕಾದರೆ ಮೂರನೇ ಎರಡರಷ್ಟು ಜನ ಮೆಜಾರಿಟಿಯಲ್ಲಿದ್ದು ಒಂದು ನಿರ್ಣಯ ಮಾಡಿ ಕಳುಹಿಸಿದರೆ ಅಂತಹವರನ್ನು ತೆಗೆದುಹಾಕಬೇಕೆಂದು ಇದೆ. ಮೆಜಾರಿಟಿ ಅಭಿಪ್ರಾಯದ ಮೇಲೆ ಇವರನ್ನು ಕಿತ್ತುಹಾಕಲಿಕ್ಕೆ ಹೋದರೆ ಸರಿಯಾಗಿರುವುದಿಲ್ಲ. ಬೇಕೆಂತಲೇ ಒಬ್ಬರು ಸದಸ್ಯರು ಅಲ್ಲಿನ ಇತರ ಮೆಂಬರುಗಳಿಗೆ ಆಗದವರು ಎಂದು ತಿಳಿದು ಅವರ ಮೇಲೆ ನಿರ್ಣಯ ಮಾಡಿ ಅವರನ್ನು ತೆಗೆಯಲು ಅವಕಾಶವಾಗುತ್ತದೆ. ಯಾರಾದರೂ ಬೇಕಿಲ್ಲದವರು ಎಂದು ಅವರನ್ನು ತೆಗೆಯುವುದು ಅನ್ ಕಾನ್ಸ್‌ಟಿಟ್ಯೂಷನಲ್ ಆಗುತ್ತದೆ, ಆ ರೀತಿ ಮಾಡಬಾರದು. ಆದಕಾರಣ ಈ ಕಲಮನ್ನು ಇಲ್ಲಿಂದ ತೆಗೆದು ಹಾಕುವುದು ಉಚಿತವಾಗಿರುತ್ತದೆ. ಇದು ಇಲ್ಲಿರುವುದು ಅನುಚಿತವೆಂದು ನನಗನಿಸುತ್ತದೆ.

ಇನ್ನು 356 ನೇ ಕ್ಲಾಜಿನಲ್ಲಿ ಪಂಚಾಯತಿಯಲ್ಲಿ ಮತ್ತು ತಾಲ್ಲೂಕು ಬೋರ್ಡುಗಳಲ್ಲಿ ಕೆಲಸಗಳು ಸರಿಯಾಗಿ ನಡೆಯದಿದ್ದ ಪಕ್ಷದಲ್ಲಿ ಅದನ್ನು ಸೂಪರ್‌ಸೀಡ್ ಮಾಡಬೇಕೆಂದು ಇದರಲ್ಲಿದೆ. ಈ ರೀತಿ ಇದರಲ್ಲಿ ಸೇರಿಸಿರುವುದು ಅನ್ಯಾಯ ಎಂದು ನನಗನಿಸುತ್ತದೆ. ಅಲ್ಲದೆ ಸೂಪರ್‌ಸೆಷನ್ ಇಷ್ಟು ದಿನಗಳ ಕಾಲ ಎಂದು ಇದರಲ್ಲಿ ಸೇರಿಸುವುದು ಯೋಗ್ಯವಾಗಿರುತ್ತದೆ. ಯಾವುದಾದರೂ ಬೋರ್ಡನ್ನು ಸೂಪರ್‌ಸೀಡ್ ಮಾಡಿದರೆ ಎಷ್ಟರವರೆಗೆ ಎಂದು ಮಾಡಿದರೆ ಅದು ಸರಿಯಾಗಿರುತ್ತದೆ.

ಇದರಲ್ಲಿ ನ್ಯಾಯಪಂಚಾಯತಿಗಳನ್ನು ಮಾಡಬೇಕೆಂದು ಇದೆ. ಇದೇನೂ ಹೊಸದಲ್ಲ. ಮದರಾಸಿನಲ್ಲಿತ್ತು. ಆಗ ಅಲ್ಲಿ ಇದರ ಅಧ್ಯಕ್ಷರಿಗೆ ಮೂರನೇ ವರ್ಗದ ಮ್ಯಾಜಿಸ್ಟ್ರೇಟರುಗಳ ಪವರನ್ನು ಕೊಟ್ಟಿದ್ದರು, ಅಂತಹ ಪಂಚಾಯತಿ ಬೋರ್ಡುಗಳಿದ್ದವು. ಆದರೆ ಇದರಲ್ಲಿ ನೋಡುವಾಗ ಇಲ್ಲಿ ಕೊಟ್ಟಿರುವ ಅಧಿಕಾರ ಕಡಿಮೆಯಾಗಿದೆ ಎನ್ನುವುದು ಕಂಡುಬರುತ್ತದೆ. ಹಿಂದೆ ಅಲ್ಲಿದ್ದ ಆಕ್ಟಿನಂತೆ ಒಬ್ಬ ಮನುಷ್ಯನನ್ನು ವಾರಂಟಿನ ಮೇಲೆ ಆರೆಸ್ಟು ಮಾಡಿ ಮ್ಯಾಜಿಸ್ಟ್ರೇಟರು ರಿಮ್ಯಾಂಡು ಮಾಡುತ್ತಿದ್ದರು. ಈಗ ಇದರಲ್ಲಿ ಅಂತಹ ಅಧಿಕಾರವನ್ನು ಕೊಡುತ್ತಿಲ್ಲ. ಹಾಗೆ ಮಾಡಿರುವುದು ಯುಕ್ತವಲ್ಲ. ಯಾವಾಗ ಇಲ್ಲಿಗೆ ನಮ್ಮ ಜನಗಳನ್ನು ಆರಿಸಿ ಕಳುಹಿಸಿದರೋ ಅವರುಗಳು ತಮ್ಮ ಕೆಲಸವನ್ನು ಚೆನ್ನಾಗಿ ಮಾಡುತ್ತಾರೆ. ಇದರಲ್ಲಿ ಅಂತಹ ಭಿನ್ನ ಭಾವಗಳನ್ನು ತರುವುದು ಸರಿಯಲ್ಲ. ಅಧಿಕಾರಗಳನ್ನು ದುರುಪಯೋಗಪಡಿಸಿಕೊಳ್ಳುತ್ತಾರೆ ಎನ್ನುವ ಶಂಕೆಯನ್ನು ಇದರಲ್ಲಿ ತರಬಾರದು ಎಂದು ನನಗನಿಸುತ್ತದೆ.

10-00 P.M.

ಇನ್ನು 312 ನೇ ಸೆಕ್ಷನ್ನಿನಲ್ಲಿ ನ್ಯಾಯ ಪಂಚಾಯತಿಯು 50 ರೂಪಾಯಿಗಳಿಗೆ ಮೇಲ್ಪಟ್ಟು ಜುಲ್ಮಾನೆಯನ್ನು ಹಾಕಬೇಕು ಎಂದರೆ ಅದನ್ನು ವಸೂಲು ಮಾಡುವವರು ಯಾರು ಎನ್ನುವುದನ್ನು ಇದರಲ್ಲಿ ಹೇಳಲಿಲ್ಲ. ಆದುದರಿಂದ 50 ರೂಪಾಯಿಗಳ ಜುಲ್ಮಾನೆ ಎಂದು ಹಾಕಿ ಅದನ್ನು ಕೊಡದೇ ತಪ್ಪಿದಲ್ಲಿ 8 ದಿನಗಳ ಜೈಲು ವಾಸ ಎಂದು ಇದರಲ್ಲಿ ಸೇರಿಸತಕ್ಕದ್ದು ಸೂಕ್ತವಾಗಿ ಕಾಣುತ್ತದೆ. ಇದರಲ್ಲಿ ಯಾರು ವಸೂಲು ಮಾಡುವುದು ಎನ್ನುವುದರ ಬಗ್ಗೆ ಏನನ್ನೂ ಹೇಳಿಲ್ಲ. ಈ ರೀತಿ ಇದರಲ್ಲಿ ಸೇರಿಸುವುದು ಯೋಗ್ಯವೆಂದು ನನಗನಿಸುತ್ತದೆ. ಅವರು ಚರಾಸ್ತಿಯನ್ನು ಜಫ್ತಿಮಾಡಬಹುದು. ಹಾಗೆ ಜಫ್ತಿಮಾಡುವುದಕ್ಕೆ ಹೋಗಿದ್ದಾಗ ಯಾರಾದರೂ ಹೊಡೆಯುವುದಕ್ಕೆ ಬಂದರೂ ಬರಬಹುದು. ಅದನ್ನ ನಿವಾರಣೆಮಾಡಲು ಅವರಿಗೇನು ಅಧಿಕಾರವನ್ನು ಕೊಟ್ಟಿದ್ದಾರೆ? ಅವರಿಗೆ ಅಂಥಾ ಸಮಯದಲ್ಲಿ ಪೋಲೀಸ್ ಸಹಾಯವನ್ನು ಪಡೆಯುವುದಕ್ಕೆಲ್ಲಿ ಅವಕಾಶಮಾಡಿದ್ದಾರೆ? ಆದ್ದರಿಂದ ಇದರಲ್ಲಿ ಇಂಥ ಸಹಾಯ ಪಡೆಯತಕ್ಕ ಒಂದು ಕ್ಲಾಜನ್ನು ಅಡಕಮಾಡಬೇಕೆಂದು ಸಲಹೆಮಾಡುತ್ತೇನೆ.

ಇನ್ನು ಷೆಡ್ಯೂಲ್ (7) ರಲ್ಲಿ ಅಪರಾಧಿಯನ್ನು ಕರೆಸಿಕೊಳ್ಳುವುದಕ್ಕೆ ಅಧಿಕಾರವನ್ನು ಕೊಟ್ಟಿದ್ದಾರೆ. ಆದರೆ ಆತನು ಬರುವುದಕ್ಕೆ ಉದಾಸೀನಮಾಡಿದರೆ ಅಂಥಾ ಸಂದರ್ಭದಲ್ಲಿ ಒಂದು ವಾರಂಟನ್ನು ಪೋಲಿಸ್ ಮುಖಾಂತರ ಕೊಟ್ಟು ಕರೆಸುವುದಕ್ಕೆ ಈಗ ಅವಕಾಶವಿಲ್ಲ. ಇದಕ್ಕೂ ಕೂಡ ಒಂದು ವ್ಯವಸ್ಥಿತವಾದ ಕ್ಲಾಜನ್ನು ಇದರಲ್ಲಿ ಅಡಕಮಾಡಬೇಕೆಂದು ಸಲಹೆ ಮಾಡುತ್ತೇನೆ.

ಇನ್ನು ಜಿಲ್ಲಾಪರಿಷತ್ತಿನಲ್ಲೂ, ತಾಲ್ಲೂಕ್ ಬೋರ್ಡುಗಳಲ್ಲೂ ಮತ್ತು ಪಂಚಾಯತಿಗಳಲ್ಲೂ ಶಾಸನಸಭೆಯ ಹಾಗೂ ಪಾರ್ಲಿಯಮೆಂಟಿನ ಸದಸ್ಯರುಗಳು ಭಾಗವಹಿಸುವುದಕ್ಕಾದರೂ ಒಂದು ಅವಕಾಶವಿರಬೇಕಾದ್ದು ಅಗತ್ಯವೆಂದು ನಾನು ಅಭಿಪ್ರಾಯಪಡುತ್ತೇನೆ. ಅವರಿಗೆ ಅಲ್ಲಿ ಓಟು ಮಾಡತಕ್ಕ ಅಧಿಕಾರ ಇಲ್ಲದಿದ್ದರೂ ಅವರಿಗೆ ಅಲ್ಲಿ ಪ್ರಾತಿನಿಧ್ಯವಿರಬೇಕೆಂದು ನಾನು ಹೇಳುತ್ತೇನೆ. ನನಗೆ ಇಷ್ಟು ಮಾತನಾಡುವುದಕ್ಕೆ ಅವಕಾಶ ಮಾಡಿಕೊಟ್ಟ ಅಧ್ಯಕ್ಷರಿಗೆ ನನ್ನ ವಂದನೆಗಳನ್ನರ್ಪಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

Mr. DEPUTY SPEAKER.—The House will now rise and meet after half an hour.

The House adjourned for Recess at Five Minutes past Ten of the Clock and reassembled at Thirty Minutes past Ten of the Clock.

[MR. DEPUTY SPEAKER in the Chair.]

Sri R. S. HEGDE (Honnavar).—Sir, the present Bill is a bold step in the process of decentralisation of power. The Bill has assimilated the good points of almost all the progressive States in the country. Further, the Bill is based on the recommendations of the Balawantray Mehta Report, Kondajji Basappa Committee Report and the Report of Santanam Committee appointed by the Central Government. Then, Sir, there is a little difference between the present Bill and the Act of Maharastra. Whereas the Maharastra Act proposes centralisation of power in the district, the present Bill proposes distribution of power in all the three tiers, namely, the Panchayat, the taluk Board and the zila parishad. Sir, before commenting upon the various sections of the present Bill, wt must try to appreciate the experiences we have gained at the differene levels of the organisation working under the present Act. I may submit that the experience I have obtained as Chairman of a Taluk Board shows that they are working satisfactorily. But, they have not got financial resources.

Sir, the attack on the present Bill has been on three grounds. Firstly, Nyaya Panchayats are opposed tooth and nail; secondly, the financial set up under the Act is opposed and also the distribution of finances by Government to the various tiers.

Coming to Nyaya Panchayats, the apprehensions expressed are that it is premature and the capacity of the people to administer justice in the sphere assigned to Nyaya Panchayat under the Bill is doubted. Secondly, the apprehension is that there will be likelihood of abuse of power by the Committee appointed for this purpose. Thirdly, the personnel constituted by the panchayat may become hencemen of

(SRI R. S. HEGDE)

the panchayats and it may not be possible to administer justice by those bodies. Sir, the apprehensions are misconceived. On the other hand, there will be speedy and ready justice by those bodies. Secondly, the heavy files now before the courts will be lessened. Thirdly, justice will be cheap. Sir, we all know the well-known principle that justice delayed is justice denied. We know, on account of the heavy files in the civil courts, judges are not able to dispose of the cases as speedily as possible. The Panchayats were considered as petty courts even during the time of Moghuls and the local affairs were not regulated from above and the local officers were primarily answerable to the panchayats. If you see historical evolution, even prior to the times of Moghuls, panchayats were functioning as a judicial tribunal both civil and criminal. The panchayats had a glorious past. If we think of the past the panchayats had worked well and worked effieiently, I do not see anything in the argument that this would not be successful now. As a Lawyer for the last fifteen years, I know many of the village elders act as panchas and dispose of so many cases. We appoint arbitration to dispose of cases. So, what we have been doing already in our practical life is, being guide a legal shape and there should be absolutely no objection for the establishment of Gram Panchayats. Even if we take the system prevailing in Punjab, the Panchyats were so successful that even the neighbouring villages came there with grievances for being redressed. My submission is, even if we take into considera-tion the system prevailing in England, it is said that even during the time of the normans, they were entrusted with judicial powers, criminal powers and also developmental activities. So, this system of Gram Panchayats and the powers to the Panchayats is not something fresh to the Indian culture and Indian method of administration. From that point of view and if you have got any belief in the past History, my submission is that there will be nobody here who will be opposing this Bill. The second consideration is regarding the distribution of finances as per clauses 110, 194 and 266. Sri B. R. Sunthankar objected to the distribution of the finances on the population basis. My submission is that this method of argument will be directly opposed to the report of Santhanam Committee, who have said that the Government should guarantee the minimum per capita per individual and that guaranttee can be given only if the distribution is on the basis of popolation. I will read a paragraph from the report :

> " In Mysore each panchayat is to get a certain fixed percent-age of its land revenue, but there is no per capita minimum guarantee. But such a minimum guarantee is very essential; for it results in an automatic minimum equalisation. Other-wise a mere percentage of land revenue will result in consider-able variation in the per capita income of panchayati Raj bodies and will be heavily in favour of the rich irrigated areas and militate against the poorer areas. It will be a case of the

rich getting richer and the poor poorer. Both the Balwantrai Mehta and Santhanam reports have indicated the possibility of this danger of inequalities and unequal growth."

So, even the Balvantrai Mehta Committee have said that there must be a per capita distribution, not on the basis of income, but on the basis of population, *i.e.*, on each individual some amount should be spent. Take for instance, Mysore State is giving a lot of income-tax to the Central Government. Can we ask the Central Government that all the income-tax got from Mysore should be spent in Mysore only? North Kanara is giving nearly Rs. 4 crores as forest income. Can we ask that the amount of Rs. 4 crores collected in North Kanara must be spent in North Kanara only? That will not help alround development of the State. In one district there will be very poor people and in another district there will be very rich people, and one district will be developed very soundly and another district will not be developed at all.

Coming to the question of indirect elections, my submission is, in the Balvantrai Mehta Committee's report they have suggested that even for Assembly there must be indirect elections. By indirect election, we save a lot of money and the only apprehension is that politics will be introduced at the lowest level. Even now politics is there at the lowest level. Let us give a chance to this system. This system has not been given a chance from a long time. Let us see how it will work under the Panchayat Raj system. In Maharastra, as far as the Taluk Boards are concerned, they have got indirect elections. Is it not working successfully there? In the same way, as far as the District Development Council is concerned, they have got the system of direct elections. Therefore, my submission is that the apprehension that there will be corruption if there is indirect election, is unfounded. We have electoral colleges of direct elected bodies for the council. Even for the Council, we have got indirect elections; we have got elections of the Teachers' constituency. Are they not working successfully? Is that indirect election system not working successfully? If indirect election could work successfully at the Council and State level, my submission is, there should be no reason why it should fail at the Taluk Board level. After having finished my observations, I want to give certain suggestions. There must be establishment of Finance Corporation. This is suggested even by the Santhanam Committee. This is necessary to increase the remunerative assets of the Panchayats. To increase the remunerative assets, there must be a Finance Corporation which can supply lot of money to the Panchayats. There must not be duplicate control, *i.e.*, control of the department and control by the Panchayatraj Bodies. We have got for example the Extension Officer in the Blocks at the Taluk Board level, and at the same time, we have got the Agriculture Department at the District level. They say that duplicate control is still maintained and it should go. Let the Government consider about it.

Thank you very much, Sir, for giving me so much of time.

† ಶ್ರೀ ಬಿ. ಬೈರಪ್ಪಾಜಿ (ತುರುವೇಕೆರೆ).—ಮಾನ್ಯ ಅಧ್ಯಕ್ಷರೇ, 1964ನೇ ಇಸವಿಯ ಮೈಸೂರು ರಾಜ್ಯದ ಪಂಚಾಯಿತಿ ರಾಜ್ಯಕ್ಕೆ ಸಂಬಂಧಪಟ್ಟ ವಿಧೇಯಕವನ್ನು ನಾನು ವಿರೋಧಿಸುತ್ತಾ ಇದರಲ್ಲಿ ರತಕ್ಕ ಕೆಲವು ನ್ಯೂನತೆಗಳನ್ನು ಸರ್ಕಾರಕ್ಕೆ ತಿಳಿಸುವುದಕ್ಕೆ ಇಚ್ಛೆಪಡುತ್ತೇನೆ. ಸ್ವಾಮಿ, ಇದರಲ್ಲಿ ವಿಲೇಜ್ ಪಂಚಾಯಿತಿ, ತಾಲ್ಲೂಕು ಬೋರ್ಡ್ ಮತ್ತು ಜಿಲ್ಲಾ ಪರಿಷತ್ತು ಇವುಗಳ ರಚನೆ, ಅವುಗಳ ಆರ್ಥಿಕ ವ್ಯವಸ್ಥೆ, ಅದರ ಹಕ್ಕು ಮತ್ತು ಅವುಗಳ ಕೆಲಸಕಾರ್ಯಗಳು ಇವುಗಳನ್ನೆಲ್ಲಾ ಇದರಲ್ಲಿ ಅಳವಡಿಸಿ ಈ ಒಂದು ತಿದ್ದುಪಡಿಯನ್ನು ಈ ಸಭೆಯ ಮುಂದೆ ತಂದಿದ್ದಾರೆ. ಈಗಿನ ಒಂದು ನಿಯಮದ ಪ್ರಕಾರ 1,500 ಜನಸಂಖ್ಯೆಯಿಂದ ಹಿಡಿದು 5 ಸಾವಿರ ಜನಸಂಖ್ಯೆಯವರೆಗೆ ಒಂದು ಪಂಚಾಯಿತಿ ಇರಬೇಕೆಂದು ಮಾಡಿದ್ದಾರೆ. ಈ ಒಂದು ನಿಯಮದ ಪ್ರಕಾರ ಹಿಂದೆ ಹಳ್ಳಿಯಲ್ಲಿ ಪಂಚಾಯಿತಿಯನ್ನು ರಚನೆಮಾಡಿದಾಗ ಜನಗಳಲ್ಲಿ ವ್ಯಾಜ್ಯಗಳು, ಪಾರ್ಟಿವೈಷಮ್ಯಗಳು ಉಂಟಾಗಿವೆ. ಒಂದು ಹಳ್ಳಿಗೂ ಇನ್ನೊಂದು ಹಳ್ಳಿಗೂ ಪಾರ್ಟಿಮನೋಭಾವ ಭಿನ್ನಾಭಿಪ್ರಾಯ ಇವುಗಳು ತಲೆದೋರಿವೆ. ಇವುಗಳನ್ನೆಲ್ಲಾ ಸರ್ಕಾರದವರು ಈಗಾಗಲೇ ಮನವರಿಕೆ ಮಾಡಿಕೊಂಡಿರಬಹುದೆಂದು ನಾನು ಭಾವಿಸುತ್ತೇನೆ. ಆಯಾ ಗ್ರಾಮದಲ್ಲಿ ಇದ್ದಂತಹ ಭಿನ್ನಾಭಿಪ್ರಾಯ ಗ್ರಾಮ ಗ್ರಾಮಕ್ಕೂ ವಿಸ್ತರಿಸಿದೆ ಎಂದು ಹೇಳಿದರೆ ಅತಿಶಯೋಕ್ತಿಯಾಗಲಾರದು ಎಂದು ನಾನಾದರೂ ಭಾವಿಸುತ್ತೇನೆ.

ಇನ್ನು ಎರಡನೆಯದಾಗಿ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್. ಈಗ ಹಾಲಿ ಇದ್ದಂತಹ ನಿಯಮದ ಪ್ರಕಾರ ಇದಕ್ಕೆ ನೇರವಾದ ಚುನಾವಣೆ ಇತ್ತು. ಈ ಒಂದು ಚುನಾವಣೆ ಬಹಳ ಸಾಧುವಾಗಿತ್ತು. ಇದರಿಂದ ಒಬ್ಬ ಮನುಷ್ಯ ತನ್ನ ಕಾರ್ಯರಂಗದಲ್ಲಿ ಜನತೆಯ ಒಂದು ಅಭಿಮಾನವನ್ನು, ಜನತೆಯ ಒಂದು ವಿಶ್ವಾಸವನ್ನು ಪಡೆದುಕೊಂಡು ನೇರವಾಗಿ ಇದಕ್ಕೆ ಚುನಾಯಿತರಾಗುತ್ತಿದ್ದರು. ಈಗ ಮಾರ್ಪಾಡು ಮಾಡಿರತಕ್ಕ ಈ ಒಂದು ತಿದ್ದುಪಡಿ ಮಸೂದೆಯಲ್ಲಿ ನೇರವಾದ ಚುನಾವಣೆ ಮತ್ತು ಅಪ್ರತ್ಯಕ್ಷ ಚುನಾವಣೆ ಎರಡೂ ಇರಬೇಕೆಂದು ಹೇಳಿದ್ದಾರೆ. ಇದರಿಂದ ಏನೊಂದು ಗಂಡಾಂತರ ಸಂಭವಿಸುತ್ತದೆ ಎಂದರೆ ಈಗಾಗಲೇ ನೇರವಾದ ಸ್ಪರ್ಧೆಯಲ್ಲಿಯೇ ಭ್ರಷ್ಟಾಚಾರ, ಮತ್ತು ಅನ್ಯಾಯಗಳು ತಾಂಡವವಾಡುವುದಕ್ಕೆ ಪ್ರಾರಂಭವಾಗಿದೆ. ಈ ಅಪ್ರತ್ಯಕ್ಷ ಚುನಾವಣೆಯಲ್ಲಿ, ಉದಾಹರಣೆಗೆ ಹೇಳುವುದಾದರೆ ತಾಲ್ಲೂಕು ಮಟ್ಟದಲ್ಲಿ ಸುಮಾರು 200-300 ಜನ ಪಂಚಾಯಿತಿಯ ಸದಸ್ಯರು ಇರುತ್ತಾರೆ. ಈ ಒಂದು ರಂಗದಲ್ಲಿ ಬಹಳ ಕಡಿಮೆ ಜನ ಇರುತ್ತಾರೆ. ಇದರಿಂದ ಚುನಾವಣೆಗೆ ಸ್ಪರ್ಧಿಸತಕ್ಕ ವ್ಯಕ್ತಿ ಕುಟಿಲತೆಯಿಂದ ಭ್ರಷ್ಟಾಚಾರದ ದೆಶೆಯಿಂದ ವೋಟನ್ನು ಕೊಂಡುಕೊಳ್ಳುವುದಕ್ಕೆ ಪ್ರಯತ್ನ ಪಡುತ್ತಾನೆ. ಈ ಒಂದು ಕಾರ್ಯಕ್ಕೆ ಯಾವಾಗ ಅವನು ಪ್ರಾರಂಭಿಸುತ್ತಾನೆ ಎಂದರೆ ಪಂಚಾಯಿತಿಯ ಚುನಾವಣೆಯು ಪ್ರಾರಂಭವಾದ ದಿನ ಅವನು ಈ ಕಾರ್ಯವನ್ನು ಪ್ರಾರಂಭಿಸುತ್ತಾನೆ. ನನ್ನ ಪರವಾಗಿ ನಾನು ಯಾರನ್ನು ನಿಲ್ಲಿಸಿದರೆ ನನಗೆ ವೋಟು ಬರುತ್ತದೆ. ಪಂಚಾಯಿತಿಗೆ ಸಂಬಂಧಪಟ್ಟ ಯಾವ ಯಾವ ಊರಿನಲ್ಲಿ ನಾನು ಪಾರ್ಟಿಯನ್ನು ಕಟ್ಟಬೇಕು, ಎಂದು ಹೇಳಿ ಆ ಹಳ್ಳಿಯಲ್ಲಿ ಪಾರ್ಟಿ ಇಲ್ಲದಿದ್ದರೂ ಕೂಡ ತಾನಾಗಿಯೇ ಅಲ್ಲಿಗೆ ಹೋಗಿ ಜನಗಳಲ್ಲಿ ಒಂದು ಕೆಟ್ಟ ವಾತಾವರಣವನ್ನುಂಟುಮಾಡಿ ತನ್ನ ಮುಂದಿನ ಕಾರ್ಯವನ್ನು ಸಾಧನೆ ಮಾಡಿಕೊಳ್ಳುವುದಕ್ಕೆ ಅಂಕುರಾರ್ಪಣೆಯನ್ನು ಹಾಕುತ್ತಾನೆ. ಇದರಿಂದ ಏನಾಗುತ್ತದೆ ಎಂದರೆ ಜನತೆಯಲ್ಲಿ ಒಳ್ಳೆಯ ವ್ಯಕ್ತಿತ್ವ, ಒಳ್ಳೆಯ ನೀತಿ ಇವುಗಳೆಲ್ಲವೂ ಕಡಿಮೆಯಾಗುವುದಕ್ಕೆ ಅವಕಾಶವಾಗುತ್ತದೆ. ಈ ದೃಷ್ಟಿಯಿಂದ ಈಗ ತಂದಿರತಕ್ಕ ಒಂದು ತಿದ್ದುಪಡಿ ಏನಿದೆ ಇದರಿಂದ ಜನತೆಯ ನೈತಿಕ ಮಟ್ಟ ಬಹಳ ಕಡಿಮೆಯಾಗುತ್ತದೆ. ಆದ್ದರಿಂದ ಅಪ್ರತ್ಯಕ್ಷ ಚುನಾವಣೆ ಇರಕೂಡದು, ಹಿಂದೆ ಇದ್ದಂತೆಯೇ ನೇರವಾದ ಚುನಾವಣೆ ಇರಬೇಕು ಎಂದು ನಾನು ಸರ್ಕಾರಕ್ಕೆ ಸೂಚನೆ ಮಾಡಬಯಸುತ್ತೇನೆ.

ಇನ್ನು ಮೂರನೆಯದಾಗಿ ಜಿಲ್ಲಾ ಪರಿಷತ್ತಿನ ರಚನೆ ಹೇಗಿದೆ ಎಂದರೆ 25 ಸಾವಿರ ಪ್ರಜಾಸಂಖ್ಯೆಗೆ ಕಡಿಮೆ ಇಲ್ಲದೆ 50 ಸಾವಿರ ಪ್ರಜಾಸಂಖ್ಯೆಗೆ ಹೆಚ್ಚು ಇಲ್ಲದೆ ಇರತಕ್ಕ ಒಂದು ಭಾಗಕ್ಕೆ ಒಬ್ಬ ಸದಸ್ಯರನ್ನು ಜಿಲ್ಲಾ ಪರಿಷತ್ತಿಗೆ ನೇರವಾಗಿ ಚುನಾಯಿಸಬೇಕೆಂದಿದೆ. ಇದು ನೇರವಾದ ಚುನಾವಣೆ, ನೇರವಾದ ಚುನಾವಣೆ ಸ್ವಾಗತಾರ್ಹವಾಗಿದ್ದರೂ, ಈ ಒಂದು ಚುನಾವಣೆಯನ್ನು ನಮ್ಮ ಜನತೆ ಬಹಳವಾಗಿ ವಿರೋಧಿಸುತ್ತಿದ್ದಾರೆ. ಏತಕ್ಕೆಂದರೆ ವರ್ಷವೆಲ್ಲಾ ಚುನಾವಣೆಯನ್ನು ಮಾಡಿ ಜನಗಳು ವೋಟು ಕೊಟ್ಟು ನೊಂದಿದ್ದಾರೆ. ಚುನಾವಣೆಗೆ ಸ್ಪರ್ಧಿಸತಕ್ಕವರು ನಮ್ಮ ಹತ್ತಿರ ಬರುತ್ತಾರೆ; ವರ್ಷವೆಲ್ಲಾ ಚುನಾವಣೆಯಲ್ಲಿಯೇ ಕಾಲವನ್ನು ಕಳೆಯುತ್ತಾರೆ ಎಂದು ಜನರು ಬೇಜಾರು ಮಾಡಿಕೊಳ್ಳತಕ್ಕ ಪ್ರಸಂಗ ಬಂದಿದೆ. ಈಗ ಜಿಲ್ಲಾ ಪರಿಷತ್ತು ಇರಬೇಕೇ ಅಥವಾ ಹಿಂದೆ ಅದು ಇದ್ದಂಥಾ ಸ್ವರೂಪದಲ್ಲಿಯೇ ಮುಂದುವರಿಯಬೇಕೆ ಎನ್ನುವ ಪ್ರಶ್ನೆ ಬೇರೆ ಇದೆ. ಈಗ ಈ ಮಸೂದೆಯಲ್ಲಿ ತಂದಿರುವ ಹಾಗೆ ಜಿಲ್ಲಾ ಪರಿಷತ್ತನ್ನು ರಚನೆ ಮಾಡಿ ಅದಕ್ಕೆ ನೇರವಾದ ಚುನಾವಣೆ ನಡೆದರೂ ಕೂಡ, ಈಗ ಶಾಸನ ಸಭೆಯ ಚುನಾವಣೆ 5 ವರ್ಷಗಳಿಗೊಮ್ಮೆ ನಡೆಯುತ್ತದೆ.

ಅದೇ ಸಂದರ್ಭದಲ್ಲಿ ಈ ಚುನಾವಣೆಯನ್ನು ಕೂಡ ನಡೆಸಬೇಕು ಎಂದು ನಾನು ಸೂಚನೆಯನ್ನು ಕೊಡುತ್ತೇನೆ. ಈ ಸೂಚನೆಗೆ ತಕ್ಕಂತೆ ಆ ಒಂದು ನಿಯಮವನ್ನು ತಿದ್ದುಪಡಿ ಮಾಡಬೇಕೆಂದು ನಾನು ಹೇಳುತ್ತೇನೆ. ಜಿಲ್ಲಾ ಪರಿಷತ್ತು, ವಿಧಾನ ಸಭೆ ಮತ್ತು ಪಾರ್ಲಿಮೆಂಟ್ ಈ ಮೂರು ಚುನಾವಣೆಗಳೂ ಸಹ ಏಕಕಾಲದಲ್ಲಿ ನಡೆಯಬೇಕೆಂದು ನಾನು ಸೂಚನೆ ಕೊಡಬಯಸುತ್ತೇನೆ.

ಪಂಚಾಯಿತಿಯ ಸರಹದ್ದಿನಲ್ಲಿ ನಡೆಯತಕ್ಕ ಕೆಲಸಕಾರ್ಯಗಳು ಅವರ ಮಟ್ಟದಲ್ಲಿಯೇ ನಡೆಯಬೇಕು. ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿನ ಸರಹದ್ದಿನಲ್ಲಿ ನಡೆಯತಕ್ಕ ಕೆಲಸಕಾರ್ಯಗಳು ಮತ್ತು ಜಿಲ್ಲಾ ಮಟ್ಟದಲ್ಲಿ ನಡೆಯತಕ್ಕ ಕೆಲಸಕಾರ್ಯಗಳೂ ಒಂದೇ ಆಗಿರುತ್ತವೆ. ಆದರೆ ಈಗ ಜಿಲ್ಲಾ ಪರಿಷತ್ತಿನ ರಚನೆಯ ಪ್ರಕಾರ ಈಗ ಈ ಮಸೂದೆಯಲ್ಲಿ ಹೇಳಿರುವಹಾಗೆ ಜಿಲ್ಲಾ ಪರಿಷತ್ತಿಗೆ ಬಹಳ ಹೆಚ್ಚಿನ ಜವಾಬ್ದಾರಿಯನ್ನು ವಹಿಸಿಕೊಟ್ಟಿದೆ. ಅದಕ್ಕೆ ಈ ಕೆಲಸ ಕಾರ್ಯಗಳನ್ನು ವಹಿಸಿಕೊಡತಕ್ಕ ಕಾಲದಲ್ಲಿ ಯಾವ ರಾಜಕೀಯ ಬಂದು ಅದನ್ನು ಜಿಲ್ಲಾಪರಿಷತ್ತಿಗೆ ವಹಿಸಿಕೊಡುತ್ತಿದ್ದಾರೆ ಎನ್ನುವ ಒಂದು ಶಂಕೆ ಬಂದಿದೆ. ಈಗ ಈ ವಿಷಯದಲ್ಲಿ ನಾನು ಸೂಚನೆಯನ್ನು ಕೊಡುವುದು ಏನೆಂದರೆ ಪಂಚಾಯಿತಿಗೆ, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡಿಗೆ ಮತ್ತು ಜಿಲ್ಲಾ ಪರಿಷತ್ತಿಗೆ ಏನೊಂದು ಹೆಚ್ಚಿನ ಜವಾಬ್ದಾರಿಯನ್ನು ಕೊಡಬೇಕೆಂದು ಸರ್ಕಾರದವರು ಈ ಒಂದು ಮಸೂದೆಯನ್ನು ತಂದಿದ್ದಾರೆಯೋ ಇದು ಬಹಳ ಹೆಚ್ಚಾಯಿತು. ಇದು ಬಹಳ ತಪ್ಪಾಗುತ್ತದೆ. ಇದರಿಂದ ದೇಶದ ಹಣ, ದೇಶದ ಜನತೆಯ ಹಣ ಹಾಳಾಗುತ್ತದೆಯೇ ವಿನಾ ಇದರಿಂದ ಯಾವ ಪ್ರಯೋಜನ ಕೂಡ ಆಗುವುದಿಲ್ಲ ಎಂದು ನಾನು ಈ ಸಂದರ್ಭದಲ್ಲಿ ಹೇಳಬಯಸುತ್ತೇನೆ.

ಸ್ವಾಮಿ ಈ ಮೂರು ಚಕ್ರದ ಪಂಚಾಯಿತಿ, ತಾಲ್ಲೂಕು ಬೋರ್ಡು ಮತ್ತು ಜಿಲ್ಲಾ ಪರಿಷತ್ತು ಆದರೂ ಕೂಡ ಇವುಗಳ ಕಾರ್ಯವಿಧಾನದಲ್ಲಿ ಒಂದು ಕಡೆ ಹೇಳಿದ್ದಾರೆ ತಾಲ್ಲೂಕು ಬೋರ್ಡಿನ ಜವಾಬ್ದಾರಿಯಲ್ಲಿ ಒಬ್ಬ ಎಗ್ಜಿಕ್ಯುಟೀವ್ ಅಧಿಕಾರಿಯನ್ನು ನೇಮಕಮಾಡಿಕೊಳ್ಳತಕ್ಕದ್ದು, ಅವರು ಅದರ ಎಲ್ಲಾ ಮೇಲ್ವಿಚಾರಣೆಯನ್ನು ನೋಡಿಕೊಳ್ಳತಕ್ಕದ್ದು ಎಂದು ಹೇಳಿದ್ದಾರೆ. ಅಧಿಕಾರಗಳನ್ನು ವಿಕೇಂದ್ರಿಕರಣ ಮಾಡಬೇಕು ಎಂದು ಒಂದು ಕಡೆ ಹೇಳುತ್ತಾರೆ. ಇನ್ನೊಂದು ಕಡೆ ಈ ರೀತಿ ಹೇಳುತ್ತಾರೆ. ಈ ವಿಷಯದಲ್ಲಿ ನನ್ನ ಅಭಿಪ್ರಾಯವನ್ನು ಹೇಳುವುದಾದರೆ ಜನತೆಯಿಂದ ನೇರವಾಗಿ ಚುನಾಯಿತರಾಗಿ ಬಂದಿರತಕ್ಕ ಸದಸ್ಯರು ತಮ್ಮ ಕ್ಷೇತ್ರದ ಜನತೆಯ ಇಂಗಿತವನ್ನು ಅರಿತು ಅವರು ಕೆಲಸಮಾಡುವುದಕ್ಕೆ ಈ ಕಾಯಿದೆಯಿಂದ ಸಾಧ್ಯವಾಗುವುದಿಲ್ಲ ಎಂದು ನಾನು ಹೇಳುತ್ತೇನೆ

11-00 A.M.

ಸ್ವಾಮಿ, ಹಣಕಾಸಿನ ವಿಚಾರದಲ್ಲಿ ಒಂದೆರಡು ವಿಷಯಗಳನ್ನು ಹೇಳುತ್ತೇನೆ. ಜಿಲ್ಲಾ ಪರಿಷತ್ತನ್ನು ರಚನೆ ಮಾಡುವ ಸಂದರ್ಭದಲ್ಲಿ ಸರ್ಕಾರ ಒಂದು ರೂಪಾಯಿಗೆ 40 ಪೈಸೆ ಸೆಸ್ ಹಾಕತಕ್ಕ ಅವಕಾಶವನ್ನು ಈ ಮಸೂದೆಯಲ್ಲಿ ಇಟ್ಟುಕೊಂಡಿದೆ. ತಾಲ್ಲೂಕು ಬೋರ್ಡಿನವರು ರೂಪಾಯಿಗೆ 20ಪೈಸೆ ಸೆಸ್ ಹಾಕುವುದಕ್ಕೆ ಅವಕಾಶ ಇದೆ. ಒಟ್ಟಿನಲ್ಲಿ ಒಂದು ರೂಪಾಯಿಗೆ 60 ಪೈಸೆಯವರೆಗೂ ಸೆಸ್‌ರೂಪದಲ್ಲಿ ವಸೂಲು ಮಾಡುವುದಕ್ಕೆ ಇದರಲ್ಲಿ ಅವಕಾಶವನ್ನು ಇಟ್ಟಿದ್ದಾರೆ. ಈ ರೀತಿ ತೆರಿಗೆಯನ್ನು ಹಾಕುತ್ತ ಹೋದರೆ ರೈತನ ಗತಿ ಏನು ? ಇನ್ನೊಂದು ಕಡೆ ಅಧಿಕಾರಿಗಳ ಸಂಖ್ಯೆಯನ್ನೂ ಹೆಚ್ಚು ಮಾಡುತ್ತಾರೆ. ಇದರಿಂದ ಜನತೆಯ ಮೇಲೆ ಹೆಚ್ಚು ತೆರಿಗೆ ಬೀಳುವುದಕ್ಕೆ ಅವಕಾಶವಾಗುತ್ತಿದೆ. ಇದರಿಂದ ಏನೂ ಸಾರ್ಥಕವಾಗುವುದಿಲ್ಲ. ಹಿಂದೆ ತಾಲ್ಲೂಕು ಬೋರ್ಡಿನವರು ಸ್ಟಾಂಪ್ ಡ್ಯೂಟಿ ಮೇಲೆ ನೂರಕ್ಕೆ ಮೂರು ರೂಪಾಯಿ ಸರಚಾರ್ಜ ಹಾಕಬಹುದು ಎಂದು ಮಾಡಿದರು. ಆ ಒಂದು ಉದಾಹರಣೆಯನ್ನು ತೆಗೆದುಕೊಳ್ಳುವುದಾದರೆ ಈ ದಿವಸ ನೂರು ರೂಪಾಯಿಗೆ ಒಂದು ಜಮೀನನ್ನು ಖರೀದಿ ಮಾಡಿದರೆ ಏಳೂವರೆ ರೂಪಾಯಿ ಸ್ಟಾಂಪ್ ಡ್ಯೂಟಿ ಬೀಳುತ್ತದೆ. ರೈತ ಕೊಂಡುಕೊಳ್ಳುವವನಾಗಲೀ, ಮಾರುವವನಾಗಲೀ ಈ ಕರಭಾರವನ್ನು ಹೊರತಕ್ಕದ್ದು ಬಹಳ ಕಷ್ಟವಾಗಿದೆ, ಇದು ಅತಿರೇಕಕ್ಕೆ ಬಂದಿದೆ, ಎಲ್ಲೆ ಮೀರದಂಥ ಒಂದು ನಿಯಮವಾಗಿದೆ. ಇಷ್ಟು ಭಾರವನ್ನು ಹೊರತಕ್ಕ ಶಕ್ತಿ ನಮ್ಮ ರೈತರಿಗೆ ಇಲ್ಲ. ಆದರೂ ಕೂಡ ಅವರ ಮೇಲೆ ಮತ್ತಷ್ಟು ತೆರಿಗೆಯನ್ನು ಹೊರಿಸುತ್ತಿದ್ದಾರೆ. ಇದು ಸರಿಯಲ್ಲ. ಸರ್ಕಾರ ಈ ನೀತಿಯನ್ನು ಬಿಡಬೇಕು.

ತಾಲ್ಲೂಕು ಬೋರ್ಡುಗಳಲ್ಲಿ ಆಯಾ ತಾಲ್ಲೂಕಿನ ಶಾಸನ ಸಭಾ ಸದಸ್ಯರು ಎಕ್ಸ್‌ಅಫಿಷಿಯೋ ಸದಸ್ಯರಾಗಿರುತ್ತಿದ್ದರು ಈಗ ನಮ್ಮ ಮುಂದಿರುವ ಮಸೂದೆಯಲ್ಲಿ ಆ ತರಹ ಸದಸ್ಯತ್ವವನ್ನು ಕಿತ್ತುಹಾಕಿದ್ದಾರೆ. ತಾಲ್ಲೂಕಿನ ಒಂದು ಲಕ್ಷ ಜನತೆಯ ಪ್ರತಿನಿಧಿಯಾಗಿ ಆರಿಸಿ ಬಂದಿರುವಂಥವರಿಗೆಲ್ಲ ಅವರ ತಾಲ್ಲೂಕಿನಲ್ಲಿ ಏನು ಕಾರ್ಯ ನಡೆಯುತ್ತದೆ, ಅಲ್ಲಿಯ ಆಡಳಿತ ವೈಖರಿ ಏನು, ಜನತೆಗೆ ತನ್ಮೂಲಕ ಅನುಕೂಲವಾಗುತ್ತದೆಯೇ ಅನಾನುಕೂಲವಾಗುತ್ತದೆಯೇ, ಈ ಸಭೆಯಲ್ಲಿ ಮಾಡಿದಂಥ ತೀರ್ಮಾನಗಳು ಕಾರ್ಯಗತವಾಗುತ್ತಿವೆಯೇ, ಪಂಚಾಯಿತಿಯ ಮಟ್ಟದಲ್ಲಿ, ತಾಲ್ಲೂಕು ಬೋರ್ಡ್ ಮಟ್ಟದಲ್ಲಿ ಮತ್ತು ಜಿಲ್ಲಾ ಪರಿಷತ್ತು ಮಟ್ಟದಲ್ಲಿ ಕಾರ್ಯಗಳು ಆಗುತ್ತಿವೆಯೇ ಎನ್ನುವ ಅಂಶವನ್ನು

(ಶ್ರೀ ಬಿ. ಬೈರಪ್ಪಾಜಿ)

ತಿಳಿದುಕೊಳ್ಳುವುದಕ್ಕೆ ಅವಕಾಶವಿಲ್ಲದಂತೆ ಮಾಡಿದ್ದಾರೆ. ಜಿಲ್ಲಾ ಪರಿಷತ್ತಿನಲ್ಲಿ ಕೂಡ ಇಂಥ ಅವಕಾಶವನ್ನು ಕಿತ್ತು ಹಾಕಿದ್ದಾರೆ. ಈ ನಲಹೆ ಸಾಧುವಾದುದಲ್ಲ. ದಯವಿಟ್ಟು ಆಯಾ ತಾಲ್ಲೂಕು ಮತ್ತು ಜಿಲ್ಲೆಗೆ ಸಂಬಂಧಪಟ್ಟಂಥ ಶಾಸನಸಭಾ ಸದಸ್ಯರು ಮತ್ತು ಪಾರ್ಲಿಮೆಂಟ್ ಸದಸ್ಯರು ಎಕ್ಸ್-ಅಫಿಷಿಯೋ ಸದಸ್ಯರಾಗಿರವುದಕ್ಕೆ ಅವಕಾಶವನ್ನು ಕಲ್ಪಿಸಬೇಕು ಎಂದು ನಾನಾದರೂ ಹೇಳುತ್ತೇನೆ.

ನ್ಯಾಯ ಪಂಚಾಯಿತಿಯ ವಿಚಾರ ತೆಗೆದುಕೊಂಡರೆ ನಾವು ಇನ್ನೂ ನ್ಯಾಯ ಪಂಚಾಯಿತಿಗಳನ್ನು ನೇಮಿಸಿಕೊಳ್ಳುವ ಮಟ್ಟಕ್ಕೆ ಬಂದಿಲ್ಲ. ಇದರಿಂದ ಅನಾಹುತಗಳು ಸಂಭವಿಸಬಹುದು. ಮಸೂದೆಯ ಈ ಭಾಗವನ್ನು ತಡೆ ಹಿಡಿಯುವುದು ಬಹಳ ಸೂಕ್ತವೆಂದು ನಾನಾದರೂ ಸರ್ಕಾರಕ್ಕೆ ತಿಳಿಸಲು ಇಚ್ಛಿಪಡುತ್ತೇನೆ. ನಮ್ಮ ಮಟ್ಟ ಅಥವಾ ನಮ್ಮ ಜನತೆಯ ಮಟ್ಟ ಇನ್ನೂ ಅಲ್ಲಿಗೆ ಬಂದಿಲ್ಲ, ನಾವು ಆ ದಿಕ್ಕಿನಲ್ಲಿ ಬಹಳ ಹಿಂದೆ ಇದ್ದೇವೆ. ಇದನ್ನು ಕೆಲವು ನ್ಯಾಯ ಪಂಚಾಯಿತಿಗಳ ದುರುಪಯೋಗ ಪಡಿಸಿಕೊಳ್ಳುವುದಕ್ಕೂ ಅವಕಾಶವಿದೆ. ನಮ್ಮಲ್ಲಿ ಅನಕ್ಷರತೆ ಹೆಚ್ಚಾಗಿದೆ. ಜನತೆಯಲ್ಲಿ ಅಕ್ಷರತೆ ಶೇಕಡ 80 ಭಾಗ ಅದಾಗ, ಹೆಚ್ಚು ಜನ ವಿದ್ಯಾವಂತರಾದಾಗ ಇಂಥ ಕಾಯಿದೆಯನ್ನು, ನ್ಯಾಯ ಪಂಚಾಯಿತಿಯನ್ನು ನೇಮಿಸುವ ಅಧಿಕಾರವನ್ನು ಪಡೆಯಬಹುದು. ಹಾಗಿಲ್ಲದೆ ಈಗಿರುವ ಮಟ್ಟದಲ್ಲಿಯೇ ನ್ಯಾಯ ಪಂಚಾಯಿತಿಗಳನ್ನು ನೇಮಿಸುವ ಕಾರ್ಯಕ್ಕೆ ಕೈಹಾಕುವುದು ಬಹಳ ಅಪಾಯಕಾರಿಯಾಗುತ್ತದೆ ಎಂದು ಈ ಸಂದರ್ಭದಲ್ಲಿ ಸರ್ಕಾರಕ್ಕೆ ಸೂಚನೆಯನ್ನು ಕೊಟ್ಟು ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

† ಶ್ರೀ ಕಡಿದಾಳ್ ಮಂಜಪ್ಪ (ಶೃಂಗೇರಿ).—ಮಾನ್ಯ ಅಧ್ಯಕ್ಷರೇ, ಸ್ಥಳೀಯ ಸಂಸ್ಥೆಗಳಿಗೆ ಸಂಬಂಧಪಟ್ಟಂತೆ ಇದುವರೆಗೂ ಈ ರಾಜ್ಯದಲ್ಲಿ ಸಾಕಾದಷ್ಟು ಪ್ರಯೋಗ ನಡೆದಿದೆ ಎಂದು ನನ್ನ ಅಭಿಪ್ರಾಯ. ಹಳೇ ಮೈಸೂರು ರಾಜ್ಯಕ್ಕೆ ಸೇರಿದ ಪ್ರದೇಶಗಳಲ್ಲಿ ಈ ಶತಮಾನದ ಆದಿಯಿಂದಲೂ ಕೂಡ ಸಾಕಾದಷ್ಟು ಪ್ರಯೋಗಗಳು ನಡೆದಿವೆ. ಸ್ವಾತಂತ್ರ್ಯ ಲಭಿಸಿದ ನಂತರವೂ ಕೂಡ ಅಲ್ಪ ಸ್ವಲ್ಪ ಪ್ರಯೋಗಗಳನ್ನು ನಾವು ಮಾಡಿದ್ದೇವೆ. ಆದಾಗ್ಗೂ ಕೂಡ ಕೆಲವು ಪ್ರಾಮುಖ್ಯ ವಿಷಯಗಳಲ್ಲಿ ಇನ್ನೂ ಒಂದು ನಿರ್ದಿಷ್ಟ ಅಭಿಪ್ರಾಯಕ್ಕೆ ನಾವು ಬಂದಹಾಗೆ ತೋರಲಿಲ್ಲ. ಹಲವು ಸಮಿತಿಗಳನ್ನೂ ರಚನೆ ಮಾಡಿ ಅವುಗಳ ಅಭಿಪ್ರಾಯವನ್ನು ಪಡೆದಿದ್ದೇವೆ. ಆನಂತರ ಶಾಸನ ಸಭೆಗಳಲ್ಲಿ ಮತ್ತು ಸಾರ್ವಜನಿಕ ವೇದಿಕೆಗಳಲ್ಲಿ ಮತ್ತು ವೃತ್ತಪತ್ರಿಕೆಗಳಲ್ಲಿ ಕೆಲವು ಪ್ರಾಮುಖ್ಯ ವಿಚಾರಗಳ ಸಂಬಂಧ ವಿಪುಲವಾದ ಚರ್ಚೆ ನಡೆದಿದೆ. ಆದರೂ ಕೂಡ ಇನ್ನೂ ಡೋಲಾಯಮಾನ ಸ್ಥಿತಿಯಲ್ಲಿಯೇ ಇದ್ದೇವೆ. ಏಕೆಂದರೆ ಸ್ಥಳೀಯ ಸಂಸ್ಥೆಗಳಿಗೆ ನಾವು ಎಷ್ಟು ಅಧಿಕಾರವನ್ನು ಕೊಡಬೇಕು, ಅವರು ಯಾವ ರೀತಿ ಅಧಿಕಾರಗಳನ್ನು ಚಲಾವಣೆ ಮಾಡಬೇಕು, ಅವರಿಗೆ ವರಮಾನದ ಅವಕಾಶವನ್ನು ಎಷ್ಟರಮಟ್ಟಿಗೆ ಕಲ್ಪಿಸಿಕೊಡಬೇಕೆಂಬ ವಿಚಾರದಲ್ಲಿ ನಾವು ನಿರ್ದಿಷ್ಟವಾದ ಮನೋಭಾವವನ್ನು ಇದುವರೆಗೂ ತಾಳಿಲ್ಲ; ತಾಳುವುದಕ್ಕೆ ಅನೇಕ ಅಡ್ಡಿ ಆತಂಕಗಳಿವೆ. ಮೊದಲನೆಯ ಕಾರಣ ಪ್ರಜಾಪ್ರಭುತ್ವದಲ್ಲಿ ನಮಗೆ ಎಷ್ಟೇ ನಂಬಿಕೆ ಇದ್ದರೂ ಕೂಡ ವಾಸ್ತವಿಕ ವಾತಾವರಣವನ್ನು ಗಮನಕ್ಕೆ ತೆಗೆದುಕೊಳ್ಳಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯಬೇಕಾದರೆ ನಮ್ಮ ಸಾರ್ವಭೌಮರಾದ ಪ್ರಜೆಗಳಿಗೆ ಸರಿಯಾದ ತರಪೇತಿಯನ್ನು ನೀಡಬೇಕಾಗಿದೆ. ಈ ತರಪೇತಿಯನ್ನು ನಾವು ನೀಡಿದ್ದೇವೆಯೇ ಸರಿಯಾದ ವಾತಾವರಣವನ್ನು ಕಲ್ಪಿಸಿದ್ದೇವೆಯೇ ಎನ್ನುವುದನ್ನು ನಾವು ವಿಚಾರ ಮಾಡಬೇಕಾಗಿದೆ. ಆ ವಿಚಾರಕ್ಕೆ ನಂತರ ಬರುತ್ತೇನೆ. ನ್ಯಾಯ ಪಂಚಾಯಿತಿಗಳ ವಿಮರ್ಶೆ ಮಾಡುವಾಗ ಅದನ್ನು ಪ್ರಸ್ತಾಪಿಸುತ್ತೇನೆ.

ಸ್ಥಳೀಯ ಸಂಸ್ಥೆಗಳಿಗೆ ಅಧಿಕಾರವನ್ನು ಕೊಡುವಾಗ ಮತ್ತು ಅವುಗಳ ಅಂಗರಚನೆಯನ್ನು ಮಾಡುವಾಗ ಕೆಲವು ಪ್ರಾಮುಖ್ಯವಾದ ವಿಚಾರಗಳನ್ನು ನಮ್ಮ ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಯಾವುದು ಜನತೆಯ ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟಿರುತ್ತದೆಯೋ ಅಥವಾ ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಯಾವ ವಿಚಾರಗಳು ಜನತೆಯ ನಿತ್ಯಜೀವನಕ್ಕೆ ಸಂಬಂಧಪಟ್ಟಿರುತ್ತವೆಯೋ ಅಂಥವುಗಳನ್ನು ಈ ಸ್ಥಳೀಯ ಸಂಸ್ಥೆಗಳಿಗೆ ಕೊಡತಕ್ಕದ್ದು ಇಂದಿನ ವಾತಾವರಣದಲ್ಲಿ, ಯುಗದಲ್ಲಿ ಅವಶ್ಯಕ ಎಂದು ನಾನು ಸ್ಪಷ್ಟವಾಗಿ ಹೇಳಬೇಕಾಗುತ್ತದೆ. ಯಾವುದು ಜನಸಾಮಾನ್ಯರಿಗೆ ಪ್ರಯೋಜನವಾಗಿ ಕಂಡುಬರುತ್ತದೆಯೋ ಅವುಗಳನ್ನು ಕೊಡಬೇಕಾದುದು ಅವಶ್ಯಕ.

ಈ ವಿಧೇಯಕವನ್ನು ನಾನು ಸ್ವಲ್ಪಮಟ್ಟಿಗೆ ಪರಿಶೀಲನೆ ಮಾಡಿದ್ದೇನೆ. ಸಂಬಂಧಪಟ್ಟ ಮಂತ್ರಿಗಳು, ಅವರ ಸಹಸಚಿವರು ಬಹಳ ಕಷ್ಟಪಟ್ಟು ಬಹಳ ಉತ್ಸುಕತೆಯಿಂದ ಈ ವಿಧೇಯಕವನ್ನು ನಮ್ಮ ಮುಂದೆ ಇಟ್ಟಿದ್ದಾರೆ.

ಇದಕ್ಕಾಗಿ ಅವರಿಗೆ ನನ್ನ ಅಭಿನಂದನೆಗಳು. ಆದರೆ ಕೆಲವು ವಿಚಾರಗಳಲ್ಲಿ ನನ್ನ ಸ್ಪಷ್ಟ ಅಭಿಪ್ರಾಯವನ್ನು ನಾನು ವ್ಯಕ್ತಪಡಿಸಬೇಕಾಗಿದೆ. ಈ ವಿಧೇಯಕವನ್ನು ವಿಮರ್ಶೆ ಮಾಡುವಾಗ ಕೆಲವು ಪ್ರಮುಖ ಪ್ರಶ್ನೆಗಳು ಉದ್ಭವವಾಗುತ್ತವೆ. ಇವು ಯಾವುವೆಂದರೆ, ತಾಲ್ಲೂಕು ಬೋರ್ಡುಗಳಿಗೆ ಪ್ರತ್ಯಕ್ಷ ಚುನಾವಣೆ ಇರಬೇಕೆ ಅಥವಾ ಅಪ್ರತ್ಯಕ್ಷ ಚುನಾವಣೆ ಇರಬೇಕೆ ಎಂಬುದೊಂದು. ಎರಡನೆಯದು, ಅಧಿಕಾರ ಹೊಂದಿರತಕ್ಕ ಒಂದು ಸಂಸ್ಥೆ ತಾಲ್ಲೂಕು ಮಟ್ಟದಲ್ಲಿ ಮತ್ತು ಅದೇ ರೀತಿಯ ಇನ್ನೊಂದು ಸಂಸ್ಥೆ ಜಿಲ್ಲಾಮಟ್ಟದಲ್ಲಿ ಇರಬೇಕೆ ಎನ್ನುವುದು. ಮೂರನೆಯ ಪ್ರಶ್ನೆ ಈ ಕಾನೂನಿನಲ್ಲಿ ನಮೂದಾಗಿರುವಂತ ತೆರಿಗೆಗಳನ್ನು ಹಾಕುವುದಕ್ಕೆ ಅವಕಾಶವನ್ನು ಕಲ್ಪಿಸಿಕೊಡಬೇಕೆಂಬುದು. ನಾಲ್ಕನೆಯ ಪ್ರಶ್ನೆ, ಯಾವ ಯಾವ ಸಂಸ್ಥೆಗೆ ಎಷ್ಟೆಷ್ಟು ಅಧಿಕಾರವನ್ನು ಕಲ್ಪಿಸಿಕೊಡಬೇಕೆಂಬುದು. ಹೀಗೆ ಸ್ಥೂಲವಾಗಿ ನಾಲ್ಕೈದು ಪ್ರಶ್ನೆಗಳು ಉದ್ಭವಿಸುತ್ತವೆ. ಮೊದಲನೆಯ ಪ್ರಶ್ನೆಯನ್ನು ವಿಮರ್ಶೆ ಮಾಡುವಾಗ ನಾವು ವಾಸ್ತವಿಕ ವಿಚಾರಗಳನ್ನು ಗಮನದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇಂದು ನಾವು ಎಷ್ಟು ಪ್ರಾಮಾಣಿಕತೆಯಿಂದ ಪರಿಶುದ್ಧವಾಗಿ ಚುನಾವಣೆ ನಡೆಸುತ್ತೇವೆ ಎನ್ನುವುದನ್ನು ಮಾತನಾಡುವುದಕ್ಕಾಗುವುದಿಲ್ಲ. ದೇಶದಲ್ಲಿ ದುಡ್ಡನ್ನು ಕೊಟ್ಟು ಓಟನ್ನು ಕೊಂಡುಕೊಳ್ಳುವ ಜನರಿದ್ದಾರೆ. ಆದುದರಿಂದ ಅಪ್ರತ್ಯಕ್ಷ ಚುನಾವಣೆಗೆ ಅವಕಾಶವನ್ನು ಕಲ್ಪಿಸಿಕೊಟ್ಟು ದುಡ್ಡು ಇದ್ದವರು ಬಡವರ ಅಸಹಾಯಕತೆಯನ್ನು ಉಪಯೋಗ ಮಾಡಿಕೊಂಡು ಓಟುಗಳನ್ನು ಕೊಂಡುಕೊಳ್ಳುವುದಕ್ಕೆ ಅವಕಾಶವನ್ನು ಕಲ್ಪಿಸಿದ ಹಾಗಾಗುತ್ತದೆಂದು ನನ್ನ ಅಭಿಪ್ರಾಯ. ಅಪ್ರತ್ಯಕ್ಷ ಅಥವಾ ಪ್ರತ್ಯಕ್ಷ ಚುನಾವಣೆ ಇರಬೇಕೆ ಎನ್ನುವ ವಿಷಯದಲ್ಲಿ ಮೈಸೂರು ದೇಶದಲ್ಲಿ ಸಾಕಷ್ಟು ವಿವಾದಗಳು ನಡೆದಿವೆ. ರಾತ್ರಿ ಹಗಲು ನಮ್ಮ ಕಾಂಗ್ರೆಸ್ ಪಕ್ಷದ ಸಭೆಗಳಲ್ಲಿ ಈ ಬಗ್ಗೆ ಚರ್ಚೆಗಳು ನಡೆದಿವೆ. ಎರಡಕ್ಕೂ ಸಮರ್ಥನೆ ಮಾಡುವ ಅಂಶಗಳೂ ಇವೆ. ಪರವಾಗಿಯೂ, ವಿರೋಧವಾಗಿಯೂ ಇವೆ. ಆದರೆ ಈ ಸನ್ನಿವೇಶವನ್ನು ಗಮನದಲ್ಲಿಟ್ಟುಕೊಂಡರೆ ಪ್ರತ್ಯಕ್ಷ ಚುನಾವಣೆ ಬೇಡವೆಂದು ನನ್ನ ನಮ್ರ ಅಭಿಪ್ರಾಯ. ಖಚಿತವಾದ ಅಭಿಪ್ರಾಯ. ನೇರವಾದ ಚುನಾವಣೆ ನಡೆದರೆ ಅದಕ್ಕೆ ಅವಕಾಶ ಕಡಮೆ, ಎಲ್ಲರನ್ನೂ ಹಣ ಕೊಟ್ಟು ಕೊಂಡುಕೊಳ್ಳುವುದಕ್ಕಾಗುವುದಿಲ್ಲ.

ಎರಡನೆಯ ವಿಚಾರ, ತಾಲ್ಲೂಕು ಬೋರ್ಡುಗಳೂ ಜಿಲ್ಲಾಪರಿಷತ್ತುಗಳೂ ಇರಬೇಕೆ ಈ ಎರಡು ಸಂಸ್ಥೆಗಳಿಗೂ ಆಡಳಿತ ನಿರ್ವಹಣೆಯ ಅಧಿಕಾರವನ್ನು ಕೊಡಬೇಕೆ, ಈ ಎರಡು ಸಂಸ್ಥೆಗಳಿಗೂ ಸಿಬ್ಬಂದಿಗಾಗಿ ಈ ವಿಧೇಯಕದಲ್ಲಿ ನಮೂದಾಗಿರುವಂತೆ ಹಣವನ್ನು ಖರ್ಚುಮಾಡಬೇಕೆ ಎನ್ನುವುದು. ಆಡಳಿತ ನಿರ್ವಹಣೆಗೆ ಯಾವುದಾದರೂ ಒಂದು ಸಂಸ್ಥೆ ಇದ್ದರೆ ಸಾಕೆಂದು ನನ್ನ ಅಭಿಪ್ರಾಯ. ನಮ್ಮ ಹಣಕಾಸಿನ ಪರಿಸ್ಥಿತಿಯನ್ನು ಗಮನಕ್ಕೆ ತೆಗೆದುಕೊಂಡರೆ, ಸಹಕಾರ, ಕೈಗಾರಿಕೆ, ಪಶುಸಂಗೋಪನ ಇತ್ಯಾದಿ ವಿಷಯಗಳಲ್ಲಿ ಅವರಿಗೂ ಅಧಿಕಾರ, ಇವರಿಗೂ ಅಧಿಕಾರ, ಇದರ ಜೊತೆಗೆ ಸಂಬಂಧಪಟ್ಟ ಇಲಾಖೆಗಳೂ ಇವೆ, ಅವಕ್ಕೂ ಅಧಿಕಾರವಿರುತ್ತದೆ. ಉಳಿದ ವಿಷಯಗಳಲ್ಲಿ, ಉದಾಹರಣೆಗೆ ಹರಿಜನಾಭಿವೃದ್ಧಿ, ಇದನ್ನು ಪಂಚಾಯಿತಿಗಳಿಗೆ ಕೊಟ್ಟಿದ್ದೇವೆಂದಿದೆ. ಇದಕ್ಕಾಗಿ ಪಂಚಾಯಿತಿಯವರು ಏನು ಹಣ ಖರ್ಚು ಮಾಡುವುದಕ್ಕಾಗುತ್ತದೆ ? ತಾಲ್ಲೂಕು ಬೋರ್ಡುಗಳಿಗೆ ಮತ್ತು ಜಿಲ್ಲಾ ಪರಿಷತ್ತುಗಳಿಗೆ ಅಧಿಕಾರಗಳನ್ನು ಕೊಡಲಾಗಿದೆ. ಈ ವಿಚಾರದಲ್ಲಿ ತಾಲ್ಲೂಕು ಮಟ್ಟದಲ್ಲಿ ಅಥವಾ ಜಿಲ್ಲಾ ಮಟ್ಟದಲ್ಲಿ ಅಧಿಕಾರವನ್ನು ಚಲಾಯಿಸಬೇಕೆ ಎನ್ನುವುದನ್ನು ಸ್ಪಷ್ಟವಾಗಿ ಹೇಳಬೇಕು. ಈಗ ಇದರಲ್ಲಿರುವುದನ್ನು ನೋಡಿದರೆ, ನಾವು ಅಧಿಕಾರವನ್ನು ಕೊಟ್ಟರೆ ಹೇಗಾಗುತ್ತದೆಯೋ ಎಂದು ಡೋಲಾಯಮಾನವಾಗಿರುವಂತೆ ಕಾಣುತ್ತದೆ. ತಪ್ಪೆಂದು ಹೇಳುವುದಕ್ಕಾಗುವುದಿಲ್ಲ; ಅಧಿಕಾರ ಕೊಟ್ಟರೆ ಅದು ದುರುಪಯೋಗುತ್ತದೆಯೋ ಇಲ್ಲವೋ ಎನ್ನುವ ಸಂಶಯ ಸ್ವಾಭಾವಿಕವಾಗಿ ಬರುತ್ತದೆ. ಆದುದರಿಂದ ನಿರ್ದಿಷ್ಟವಾಗಿ ಕೆಲವು ಬಾಬುಗಳನ್ನು ಅವರಿಗೆ ವಹಿಸುವುದು ಆವಶ್ಯಕ. ಈಗ ಪಂಚಾಯಿತಿಗಳ ವಿಚಾರವನ್ನು ಮಾತನಾಡುವುದಾದರೆ, ಪಂಚಾಯಿತಿಗಳಿಗೆ ಹಲವು ವಿಚಾರಗಳನ್ನು ಕೊಟ್ಟರೆ ಅದರಿಂದ ಪ್ರಯೋಜನವಾಗುವುದಿಲ್ಲ. ಅವರಿಗೆ ರಸ್ತೆಗಳನ್ನು ಮಾಡುವುದು, ಚರಂಡಿಗಳನ್ನು ಮಾಡುವುದು, ಮರಗಳನ್ನು ನೆಡಿಸುವುದು, ನೀರು ಸರಬರಾಯಿ, ಶಾಲೆಗಳನ್ನು ಕಟ್ಟಿಸುವುದು, ಇಷ್ಟು ವಿಚಾರಗಳನ್ನು ಕೊಟ್ಟರೆ ಸಾಕು. ಇನ್ನು ಬಾಕಿ ವಿಚಾರಗಳನ್ನು ಕೊಟ್ಟರೆ ನಿತ್ಯಗಟ್ಟಲೆ ವ್ಯಾಜ್ಯಗಳು ಪ್ರಾರಂಭವಾಗುತ್ತವೆ. ಹೀಗೆಯೇ ತಾಲ್ಲೂಕು ಬೋರ್ಡು ಅಥವಾ ಜಿಲ್ಲಾ ಪರಿಷತ್ತುಗಳಿಗೆ ಯಾವುದಾದರೂ ನಿರ್ದಿಷ್ಟ ಬಾಬುಗಳಲ್ಲಿ ನಿರ್ದಿಷ್ಟ ಅಧಿಕಾರವನ್ನು ಕೊಡುವುದಕ್ಕೆ ಮನಸ್ಸು ಮಾಡಬೇಕು. ಇದರಲ್ಲಿ ಚೌಕಾಶಿ ಮಾಡಬಾರದು. ಸರಿಯಾದ ವ್ಯವಸ್ಥೆಯನ್ನು ಕಲ್ಪಿಸಿಕೊಡಬೇಕು. ಕೊನೆಯದಾಗಿ ಎರಡು ಮಟ್ಟದಲ್ಲಿ ಎರಡು ಸಂಸ್ಥೆಗಳಿರುವುದು ಅನಾವಶ್ಯಕ, ಯಾವುದಾದರೂ ಒಂದು ಮಟ್ಟದಲ್ಲಿ ಒಂದು ಸಂಸ್ಥೆಯಿದ್ದರೆ ಸಾಕೆಂದು ನನಗನಿಸುತ್ತದೆ. ನನಗಿರತಕ್ಕ ಅಲ್ಪ ಕಾಲಾವಕಾಶದಲ್ಲಿ ಒಂದೆರಡು ವಿಚಾರಗಳನ್ನು ಹೇಳಿದ್ದೇನೆ.

(ಶ್ರೀ ಕಡಿದಾಳ ಮಂಜಪ್ಪ)

ಇನ್ನು ನ್ಯಾಯ ಪಂಚಾಯಿತಿ ವಿಚಾರ. ಇದು ಹೊಸದಾದ ಅಮೂಲ್ಯವಾದ ವಿಚಾರವೇನೋ ನಿಜ. ಆದರೆ ಇಂದಿನ ಪರಿಸ್ಥಿತಿ ಹಳ್ಳಿಗಾಡಿನಲ್ಲಿ ಹೇಗಿದೆ ಎಂಬುದನ್ನು ಗಮನಿಸಬೇಕು. ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಹಳ್ಳಿಯಿಂದ ಬಂದಿರುವವರು, ನಾನೂ ಹಳ್ಳಿಯಿಂದ ಬಂದವನು. ಕೆಲವು ಹಳ್ಳಿಗಳಲ್ಲಿ, ಸದ್ಯ ರಾಜಕಾರ್ಯಗಳ ತಂಟೆ ಇಲ್ಲದಿದ್ದರೆ ಸಾಕೆಂದು ಎನಿಸುತ್ತದೆ, ಕೆಲವು ರಾಜಕಾರಣಿಗಳು ತಮ್ಮ ಸೇವೆಯಿಂದ ಜನರ ಮನಸ್ಸನ್ನು ಒಲಿಸಿಕೊಳ್ಳುವುದಕ್ಕೆ ಬದಲು ಇಲ್ಲದ ಕಿರುಕುಳಗಳನ್ನು ಜನರಿಗೆ ಕೊಟ್ಟು ಅವರನ್ನು ನಿರ್ಮೂಲ ಮಾಡಬೇಕೆಂಬ ಉದ್ದೇಶದಿಂದ ಕಾರ್ಯಗಳನ್ನು ನಡೆಸುತ್ತಾರೆ. ಸಾಕಷ್ಟು ಕಿರುಕುಳ ಕೊಟ್ಟು, ಅವರನ್ನು ಹೆದರಿಸಿ ಅವರನ್ನು ತಮ್ಮ ಶರಣಾಗತರನ್ನಾಗಿ ಮಾಡಿಕೊಳ್ಳುವ ವಿಧಾನಗಳನ್ನನುಸರಿಸುತ್ತಾರೆ. ಎದುರಾಳಿಯನ್ನು ನಿರ್ನಾಮ ಮಾಡುವುದು ಇನ್ನೊಂದು ವಿಧಾನವಾಗಿದೆ. ಈ ರೀತಿ ಕಾರ್ಯಚಟುವಟಿಕೆಗಳನ್ನು ರಾಜಕಾರಣಿಗಳು ನಡೆಸುತ್ತಿದ್ದಾರೆ. ನ್ಯಾಯ ಪಂಚಾಯಿತಿ ವಿಚಾರದಲ್ಲಿ ಸರಕಾರದ ಉದ್ದೇಶವನ್ನು ನಾನು ಪ್ರಶ್ನಿಸುವುದಿಲ್ಲ. ಅವರು ಸದುದ್ದೇಶದಿಂದ ಈ ವಿಚಾರವನ್ನು ವಿಧೇಯಕದಲ್ಲಿ ಅಡಕ ಮಾಡಿದ್ದಾರೆ. ಆದರೆ ಈಗಿರತಕ್ಕ ಪರಿಸ್ಥಿತಿಯಲ್ಲಿ ನ್ಯಾಯ ಪಂಚಾಯಿತಿಗಳು ನಾನು ಹೇಳಿದ ರಾಜಕೀಯ ದುರಂಧರರ ಕೈಗೆ ಸಿಕ್ಕಿದರೆ ಅವರ ಎದುರಾಳಿಗಳು ಮತ್ತು ಶತ್ರುಗಳು ಸುಖವಾಗಿ ಶಾಂತಿಯಿಂದಿರಲು ಸಾಧ್ಯವೆ ಎನ್ನುವುದನ್ನು ಮಾನ್ಯ ಸಚಿವರು ಯೋಚನೆ ಮಾಡಬೇಕು. ರಾಜ್ಯದ ಅನೇಕ ಕಡೆಗಳಲ್ಲಿ ರಾಜಕೀಯ ವಿರೋಧಿಗಳು ಉಳಿಯಲೇಬಾರದು ಎನ್ನುವ ತತ್ವವನ್ನು ಮುಂದಿಟ್ಟು ಕೊಂಡು ಕೆಲಸ ಮಾಡತಕ್ಕ ಜನರಿದ್ದಾರೆ. ಆದುದರಿಂದ ನಾನು ಬಹಳ ಕಳಕಳಿಯಿಂದ ಮಾನ್ಯ ಮಂತ್ರಿಗಳಿಗೂ ಮತ್ತು ಸಭೆಗೂ ವಿನಂತಿ ಮಾಡಿಕೊಳ್ಳುತ್ತೇನೆ, ಈ ನ್ಯಾಯ ಪಂಚಾಯಿತಿಗಳ ವಿಚಾರವನ್ನು ಸಭೆ ಕೈಬಿಡಬೇಕೆಂದು. ಒಳ್ಳೇ ಪರಿಸ್ಥಿತಿ ಉಂಟಾಗಬೇಕಾದರೆ ಒಳ್ಳೇ ವಾತಾವರಣ ನಾವು ಕಲ್ಪಿಸಬೇಕು. ಪ್ರಜಾಪ್ರಭುತ್ವ ಯಶಸ್ವಿಯಾಗಿ ನಡೆಯುವ ರೀತಿಯಲ್ಲಿ ಆದರ್ಶ ವಾತಾವರಣ ಕಲ್ಪಿಸಬೇಕಾಗಿದೆ. ಪ್ರಜಾಪ್ರಭುತ್ವ ಯಶಸ್ವಿಯಾಗಬೇಕಾದರೆ ಇಂಥ ಸಂಸ್ಥೆಗಳ ಕೈಯಲ್ಲಿ ಸಮಗ್ರ ಅಧಿಕಾರ ಇರಬೇಕು. ಅಂಥ ವಾತಾವರಣ ಇಂದು ನಾವು ಹಳ್ಳಿಯಲ್ಲಿ ಕಲ್ಪಿಸಿದ್ದೇವೆಯೇ? ನಮ್ಮ ಹಳ್ಳಿಗಳ ಸುಧಾರಣೆಗೆ ಅಷ್ಟಾಗಿ ಮನಸ್ಸು ಮಾಡಿಲ್ಲ. ಆದುದರಿಂದ ಇಂಥ ಸನ್ನಿವೇಶದಲ್ಲಿ ನ್ಯಾಯ ಪಂಚಾಯಿತಿ ಸ್ಥಾಪನೆ ಮಾಡುವ ಗೋಜಿಗೆ ಹೋಗಬಾರದು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ.

ಇನ್ನು ತೆರಿಗೆಯ ಬಗ್ಗೆ ಒಂದು ಹೇಳುತ್ತೇನೆ. ಈ ಕಾನೂನು ಪ್ರಕಾರ ಒಂದು ರೂಪಾಯಿ ಕಂದಾಯ ಇದ್ದರೆ ಒಂದು ರೂಪಾಯಿ ಸೆಸ್ಸ್ ಹಾಕತಕ್ಕಂಥ ಅಧಿಕಾರ ಕೊಟ್ಟಿದೆ. ಈ ಸೆಸ್ಸ್ ಹಾಕತಕ್ಕದ್ದು ಬಹಳ ಜಾಸ್ತಿಯಾಗುತ್ತದೆ. ಇದನ್ನು ಪರಿಶೀಲನೆ ಮಾಡಬೇಕು. ಆ ಮೇಲೆ ಷೆಡ್ಯೂಲ್ ಒಂದರಲ್ಲಿ ನಮೂದು ಆಗಿರತಕ್ಕಂಥ ತೆರಿಗೆಗಳ ದರ ಸ್ವಲ್ಪ ಜಾಸ್ತಿ ಇದೆ ಎಂದು ನನ್ನ ಅಭಿಪ್ರಾಯ. ಕೆಲವು ಐಟೆಮ್ಸ್ ಬಗ್ಗೆ ಕಡಿಮೆ ಮಾಡಬೇಕಾದುದು ಆವಶ್ಯಕವಾಗಿದೆ. ಆ ಮೇಲೆ ಪಂಚಾಯಿತಿಗಳಿಗೆ ಹೆಚ್ಚಿನ ಅಧಿಕಾರ ಮತ್ತು ಹೆಚ್ಚಿನ ವರಮಾನ ಬರುವ ಮಾರ್ಗವನ್ನು ನಾವು ಕಲ್ಪಿಸಿ ಕೊಡಬೇಕಾದುದು ಬಹಳ ಅಗತ್ಯ. ಪಂಚಾಯಿತಿಗಳ ವಿಚಾರದಲ್ಲಿ ಗಾಂಧೀಜಿಯವರು ಬಹಳ ಆಸಕ್ತಿ ವಹಿಸಿದ್ದರು. ನಾನು ಮೊದಲೇ ಹೇಳಿದ ಹಾಗೆ ಪಂಚಾಯಿತಿಗಳಿಗೆ ಹಲವು ವಿಷಯಗಳ ಅಧಿಕಾರ ವ್ಯಾಪ್ತಿ ಕೊಡುವುದರ ಬದಲು ರಸ್ತೆ ಮಾಡುವುದು, ಗ್ರಾಮ ನೈರ್ಮಲ್ಯ ಕಾಪಾಡುವುದು, ನೀರು ಸರಬರಾಜು ಮಾಡುವುದು ಶಾಲಾ ಕಟ್ಟಡ ಕಟ್ಟಿಸುವುದು ಇವುಗಳನ್ನು ಮಾತ್ರ ಕೊಟ್ಟು ಹೆಚ್ಚು ಹಣ ಕೊಡುವುದಕೆ ವ್ಯವಸ್ಥೆ ಮಾಡಬೇಕು ಎಂದು ನಾನು ವಿನಂತಿ ಮಾಡಿಕೊಳ್ಳುತ್ತೇನೆ. ಇನ್ನು ಪ್ರೌಢ ಶಾಲೆಗಳ ಬಗ್ಗೆ ಹಣ ಕೊಡತಕ್ಕಂಥ ಅಧಿಕಾರವನ್ನು ಈ ವಿಧೇಯಕದ ಪ್ರಕಾರ ಕೊಟ್ಟಿಲ್ಲ. ಕೆಲವು ಕಡೆ ತಾಲ್ಲೂಕ್ ಬೋರ್ಡುಗಳು ಪ್ರೌಢ ಶಾಲೆಗಳನ್ನು ಸ್ಥಾಪನೆ ಮಾಡುತ್ತಾ ಇದ್ದಾರೆ. ಕೆಲವು ಕಡೆ ಇಂಥ ಶಾಲೆಗಳನ್ನು ಸ್ಥಾಪನೆ ಮಾಡಲು ಖಾಸಗಿ ಜನ ಮುಂದೆ ಬಂದಿದ್ದಾರೆ. ಇಂಥ ಸಂದರ್ಭದಲ್ಲಿ ಪಂಚಾಯಿತಿಗಳಿಗೆ ದ್ರವ್ಯ ಸಹಾಯ ಮಾಡುವ ಅನುಕೂಲತೆ ಕಲ್ಪಿಸಿ ಕೊಡುವುದು ಅಗತ್ಯ.

ಇಷ್ಟು ಹೇಳಿ ಮತ್ತೊಮ್ಮೆ ಮಂತ್ರಿಗಳಲ್ಲಿ ವಿನಂತಿ ಮಾಡಿಕೊಳ್ಳುವುದು ಏನೆಂದರೆ ತಾಲ್ಲೂಕು ಮಟ್ಟದಲ್ಲಿ ಜಿಲ್ಲಾ ಮಟ್ಟದಲ್ಲಿ ಹೀಗೆ ಎರಡು ಕಡೆಗಳಲ್ಲಿ ಆಡಳಿತ ನಿರ್ವಹಣೆ ಅಧಿಕಾರ ಹೊಂದಿರತಕ್ಕಂಥ ಸಂಸ್ಥೆಗಳು ಇರಬೇಕೇ? ಈ ಸಂಸ್ಥೆಗಳು ವಿಧೇಯಕದಲ್ಲಿ ನಮೂದು ಆಗಿರುವಂಥ ಸಿಬ್ಬಂದಿ ಹೊಂದಿರಬೇಕೇ? ಈ ವಿಚಾರಗಳನ್ನು ಪುನರ್ವಿಮರ್ಶೆ ಮಾಡಿ ಪರಿಶೀಲನೆ ಮಾಡಬೇಕೆಂದು ವಿನಂತಿ ಮಾಡಿಕೊಳ್ಳುತ್ತೇನೆ.

†ಶ್ರೀ ಸಿ. ಜೆ. ಮುಕ್ಕಣ್ಣಪ್ಪ (ಸಿರಾ).—ಮಾನ್ಯ ಅಧ್ಯಕ್ಷರೇ, ಈ ಪಂಚಾಯಿತಿ ರಾಜ್ಯ ಕರಡು ಮಸೂದೆ ಸಭೆಯ ಮುಂದೆ ಚರ್ಚೆಗೆ ಬಂದಾಗ್ಗೆ ಇದು ಪಂಚಾಯತಿ ರಾಜ್ಯ ಅಲ್ಲ ಇದು ಫಜೀತಿ ರಾಜ್ಯ ಎಂದು ನನ್ನ ಸ್ನೇಹಿತರಾದ ಮಾನ್ಯ ಶ್ರೀ ಶಿವಪ್ಪನವರು ಹೇಳಿದರು. ಹೀಗೆ ಹೇಳುವುದರಲ್ಲಿ ಸ್ವಲ್ಪ ಅರ್ಥ ಇದೆ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಮಾತನಾಡಿದ ಮೇಲೆ ನಾನು ಮಾತನಾಡಬಾರದು ಎಂದು ಅಂದುಕೊಂಡಿದ್ದೆ. ಅವರ ವಾದಕೆ ಪುಷ್ಟಿ ಕೊಡುವುದಕ್ಕೆ ಈಗ ನಾನು ನಿಂತಿದ್ದೇನೆ. ಮೈಸೂರು ಸಂಸ್ಥಾನದಲ್ಲಿ ಪಂಚಾಯತಿ ರಾಜ್ಯ ಸ್ಥಾಪನೆಯಾಗಬೇಕು, ಗ್ರಾಮ ಪಂಚಾಯಿತಿ, ತಾಲ್ಲೂಕ್ ಬೋರ್ಡ್ ಜಿಲ್ಲಾ ಪರಿಷತ್ತು ಇವುಗಳಿಗೆ ಹೆಚ್ಚು ಅಧಿಕಾರ ಕೊಡಬೇಕು, ಆಡಳಿತದ ಅಧಿಕಾರ ಜನತೆಯ ಕೈಯಲ್ಲಿ ಇರಬೇಕು ಆಡಳಿತ ನಡೆಸತಕ್ಕಂಥ ಶಕ್ತಿ ಜನ ಪಡೆಯಬೇಕು ಹಾಗೂ ಸ್ಥಳೀಯ ಸಂಸ್ಥೆಗಳು ದೇಶದ ಮುಖಂಡರನ್ನು ತಯಾರಿಸುವ ಪ್ರಯೋಗ ಶಾಲೆಗಳಾಗಬೇಕು ಎಂಬ ಉದ್ದೇಶ ಈ ಮಸೂದೆಯಲ್ಲಿದೆ. ಆದರೆ ಇದರ ಹಿನ್ನೆಲೆ ಬೇರ ಇದೆ ಎಂಬ ಅರ್ಥ ಬರುತ್ತದೆ. ಎನ್ ಈ ಎಸ್, ಸೀ ಡಿ ಮಾಡಬೇಕೆಂದು ಕೇಂದ್ರ ಸರಕಾರ ಒಂದು ತೀರ್ಮಾನ ತೆಗೆದುಕೊಂಡು 12 ಲಕ್ಷ ರೂಪಾಯಿ ಖರ್ಚು ಮಾಡುವವರೆಗೆ ಕೇಂದ್ರ ಸರಕಾರ ಹಣ ಒದಗಿಸಬೇಕು ಎಂದು ಒಂದು ಯೋಜನೆ ಮಾಡಿದರು. ಕೆರೆಕಟ್ಟೆ ಕಟ್ಟುವುದು ಶಾಲಾ ಕಟ್ಟಡ ನಿರ್ಮಿಸುವುದು, ಮಣ್ಣು ರಸ್ತೆ ರಚನೆ ಮಾಡುವುದು ಇಂಥ ಕೆಲಸ ಕಾರ್ಯಗಳನ್ನು ಮಾಡಿ ಹಣ ಒದಗಿಸುವ ಶಕ್ತಿ ಇಲ್ಲದೆ ಬೇರೆಯವರ ಕಡೆಯಿಂದ ಸಾಲ ತರಲು ಹೊರಟಿದ್ದಾರೆ. ಯೋಜನೆಯ ಈ ಶಿಶು ಅನಾಥ ಶಿಶುವಾಗಿದೆ. ಗ್ರಾಮ ಪಂಚಾಯಿತಿ ಜಿಲ್ಲಾ ಬೋರ್ಡು ತಾಲ್ಲೂಕ್ ಬೋರ್ಡು ಎಂದು ಬಣ್ಣ ಬಳಿದು ಈ ಗ್ರಾಮ ಪಂಚಾಯತಿ ಬಿಲ್ ಎಂದು ತಯಾರು ಮಾಡಿದರು. ಕಾನೂನು ನೆರಳಿನಲ್ಲಿ ಈ ಅನಾಥ ಶಿಶು ಬೆಳೆಯಬೇಕು ಎಂದು ಮಾಡಿದರು. ಕೇಂದ್ರ ಸರಕಾರ ಸ್ವಲ್ಪ ವಟ್ಟಿಗೆ ಹಣ ಕೊಡುತ್ತಾರೆ. ಆದರೆ ಈ ಅನಾಥ ಶಿಶುವನ್ನು ಸಂರಕ್ಷಣೆ ಮಾಡುವವರು ಯಾರು? ಪ್ರಜೆಗಳಿಗೆ ಹೆಚ್ಚು ಅಧಿಕಾರ ಕೊಡಬೇಕು ಪ್ರಜಾಪ್ರಭುತ್ವ ಬೆಳೆಯಬೇಕು ಎಂಬುದನ್ನು ಎಲ್ಲರೂ ಒಪ್ಪುತ್ತಾರೆ. ಆದರೆ ಇದರಲ್ಲಿ ರಾಜಕೀಯ ತುಂಬಿಬಿಟ್ಟಿದೆ. ಇದನ್ನು ಶ್ರೀಮಾನ್ ಆರ್. ಎಸ್. ಹೆಗ್ಗಡೆಯವರು ಮಾತನಾಡುತ್ತಾ ಹೇಳಿದರು. ಬಳವಂತರಾಯ ಮೆಹತಾ ಸಮಿತಿ ವರದಿ, ಕೊಂಡಜ್ಜಿ ಬಸಪ್ಪ ನವರ ರಿಪೋರ್ಟ್ ಆಧಾರದ ಮೇಲೆ ಈ ಮಸೂದೆ ರಚನೆ ಮಾಡಿದ್ದಾರೆ. ಇದೇ ಅಧಿವೇಶನದಲ್ಲಿ ಎರಡೂ ಶಾಸನ ಸಭೆಗಳ ಒಪ್ಪಿಗೆ ಪಡೆದು ಈ ಶಾಸನ ಜಾರಿಗೆ ತಂದು ಪ್ರಜೆಗಳ ಕೈಯಲ್ಲಿ ಅಧಿಕಾರ ಕೊಡುತ್ತೇವೆ ಎಂದು ಹೇಳಿದರು.

11-30 A. M.

ನಾನಾದರೂ ಒಂದು ಮಾತು ಹೇಳುತ್ತೇನೆ: ಯಾವ ರಾಜ್ಯದಲ್ಲ ಒಂದು ಕಮಿಟಿಯನ್ನು ಪಂಚಾಯತ್ ರಾಜ್ ಸ್ಥಾಪನೆ ಮಾಡುವುದಕ್ಕೋಸ್ಕರ ನೇಮಿಸಿದ್ದರೂ ಆ ಸಮಿತಿಯ ರಿಪೋರ್ಟ್ ನಮಗೆ ಕೊಡ ಬೇಕಾಗಿತ್ತು. ಆ ಕಮಿಟಿ ಮೇಲೆ 3 ಲಕ್ಷ ರೂಪಾಯಿ ಖರ್ಚು ಮಾಡಿ, ಆ ಕಮಿಟಿ ರಿಪೋರ್ಟ್ ಈ ಸಭೆಯಲ್ಲಿ ಚರ್ಚೆ ಮಾಡುವುದಕ್ಕೆ ಅವಕಾಶವಿಲ್ಲ. ಈ ಮಸೂದೆ ಯಾವ ಆಧಾರದ ಮೇಲೆ ರಚಿತ ವಾಗಿದೆ ಎಂದು ಜನತೆಗೆ ಹೇಳುತ್ತೀರಾ? ಈ ಪಂಚಾಯಿತಿರಾಜ್ ಬಿಲ್ ಕೊಂಡಜ್ಜಿ ಬಸಪ್ಪ ರಿಪೋರ್ಟಿನ ಆಧಾರದ ಮೇಲೆ ರಚಿತವಾಗಿದೆಯೆ? ಬಲವಂತರಾವ್ ಕಮಿಟಿ ರಿಪೋರ್ಟ್ ಆಧಾರದ ಮೇಲೆ ರಚಿತವಾಗಿದೆಯೋ ಅಥವ ಸಂತಾನಂ ಕಮಿಟಿ ರಿಪೋರ್ಟ್ ಆಧಾರದ ಮೇಲೆ ರಚಿತ ವಾಗಿದೆಯೇ. ಇದು ಒಂದು ಅನಾಥ ಶಿಶು ಇದಕ್ಕೆ ತಂದೆ ಯಾರು, ತಾಯಿ ಯಾರು, ಯಾವ ತಳಹದಿ ಮೇಲೆ ಇದು ರಚಿತವಾಗಿದೆ ಎಂಬುದನ್ನು ಶ್ರೀಮಾನ್ ಹೆಗ್ಗಡೆಯವರು ಹೇಳಿದ್ದರೆ ನಾನು ಅವರಿಗೆ ತಲೆಬಾಗುತ್ತಾ ಇದ್ದೆ. ಇದನ್ನು ಪುಷ್ಟೀಕರಿಸಿ ಅಂದರೆ ಅವರು ನಾವಾದರೂ ಬುದ್ಧಿವಂತರು ಎಂದು ತಿಳಿದುಕೊಂಡಿದ್ದೇವೆ ಅಂದು ಬಿಟ್ಟರೂ ಇಲ್ಲಿ ಯಾರ ಬುದ್ಧಿವಂತಿಕೆಯನ್ನೂ ಪ್ರಶ್ನೆ ಮಾಡಿಲ್ಲ ಇದಕ್ಕೋಸ್ಕರ ಯಾವ ಕಮಿಟಿ ಮಾಡಿದ್ದರೋ ಆ ಕಮಿಟಿ ರಿಪೋರ್ಟ್ ಚರ್ಚೆ ಮಾಡಬೇಕು ಎಂದು, ಈ ಸಭೆಯಲ್ಲಿ ಆ ಕಡೆ ಈ ಕಡೆ ಎರಡೂ ಭಾಗದ ಸದಸ್ಯರೂ ಕೇಳಿದರೂ ಇದಕ್ಕೆ ಅವರು ಅವಕಾಶ ಕೊಡಲಿಲ್ಲ. ಅಧ್ಯಕ್ಷರು ಅಪ್ಪಣೆ ಕೊಡಿಸಿದರು: ಕೊಂಡಜ್ಜಿ ಬಸಪ್ಪ ಸಮಿತಿ ವರದಿಯನ್ನೂ ಮಸೂದೆಯನ್ನೂ, ಎರಡನ್ನೂ ಒಟ್ಟಿಗೆ ಚರ್ಚೆ ಮಾಡಿ ಅಂದರು. ಈಗ ಎರಡರ ಮೇಲೂ ಚರ್ಚೆ ಮಾಡುವುದು ಸಾಧ್ಯವೇ ಅನ್ನುವುದನ್ನು ಸ್ವಲ್ಪ ಯೋಚನೆ ಮಾಡಬೇಕು. ಕೊಂಡಜ್ಜಿ ಬಸಪ್ಪನವರು ಸಮಿತಿ ರಿಪೋರ್ಟನ್ನು ತೆಗೆದುಕೊಂಡು ಹೋಗಿ ಸರಕಾರದ ಮಂತ್ರಿಗಳಿಗೆ ಸಬ್‌ಮಿಟ್ ಮಾಡಿದರು. ಅದು ಪ್ರಕಟವಾದದ್ದು ಮೆ 25, 1963ರಲ್ಲಿ ಎರಡನ್ನೂ ಒಟ್ಟಿಗೆ ಚರ್ಚೆ ಮಾಡುವುದರ ಬದಲು, ಮೊದಲು ವರದಿ ಚರ್ಚೆಗೆ ಬಂದಿದ್ದರೆ, ಸದಸ್ಯರು ಅವರ ಅಭಿಪ್ರಾಯ ಅದರ ಮೇಲೆ ಕೊಡುತ್ತಿದ್ದರು. ಆಮೇಲೆ ಮಂತ್ರಿಗಳು pros and cons, ಒಳ್ಳೆಯದಾವುದು ಕೆಟ್ಟದಾವುದು ಎಂದು ಬಿಲ್ ಡ್ರಾಫ್ಟ್ ಮಾಡುವಾಗ ಯೋಚನೆ ಮಾಡಬಹುದಾಗಿತ್ತು. ಈ ಮಸೂದೆ ಚರ್ಚೆ ಮಾಡುವ ಮೊದಲೇ ಅದನ್ನು ಚರ್ಚೆ ಮಾಡುವುದಕ್ಕೆ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಅವಕಾಶ ಕೊಟ್ಟಿದ್ದರೆ, ಅದರ ಮೇಲೆ ಹೆಚ್ಚಿನಬೆಳಕು ಬೀರುತ್ತಿದ್ದೆವು ; ಅದರಿಂದ ಈ ಬಿಲ್ಲನ್ನು ಸ್ವಚ್ಛವಾಗಿ ತಯಾರು ಮಾಡುವುದಕ್ಕೆ ಮಂತ್ರಿಗಳಿಗೆ ಸಹಾಯಕವಾಗುತ್ತಿತ್ತು. ಯಾವ ಉದ್ದೇಶಕ್ಕೋಸ್ಕರ ಆ ಒಂದು ರಿಪೋರ್ಟ್ ತಯಾರು ಮಾಡಿತ್ತೋ, ಅದರ ಆಧಾರದ ಮೇಲೆ ತಯಾರು ಮಾಡಿದೆ, ಇದು ಒಂದು ಕಲಸು ಮೇಲೋಗರದಂತಿದೆ. ಆ ವರದಿ ಚರ್ಚೆಯಾಗಿದ್ದರೆ, ಈ ಬಿಲ್ಲನ್ನು ದೋಷವಿಲ್ಲದ ರೀತಿಯಲ್ಲಿ ತಯಾರಿಸಬಹುದಾಗಿತ್ತು. ಆತುರಆತುರವಾಗಿ ತರುವ ಕಾನೂನುಗಳ ಅವಸ್ಥೆ ಏನಾಗಿದೆ ಎಂದು ಎಲ್ಲರಿಗೂ ಗೊತ್ತಿದೆ. ಅವು ಇವತ್ತು ರಾಜ್ಯದ ಶ್ರೇಷ್ಠ ನ್ಯಾಯಾಲಯ ಹಾಗೂ ಭಾರತ ದೇಶದಲ್ಲಿರತಕ್ಕಂಥ ಸುಪ್ರೀಂ ಕೋರ್ಟಿಗೆ ಹೋಗಿ ಅವ್ಯವಸ್ತವಾಗಿವೆ. ಆಂಧ್ರ ಪ್ರದೇಶದಲ್ಲಿ ಕೂಡ ಆಂಧ್ರ ಪ್ರದೇಶ ಹೈಕೋರ್ಟು ಅಲ್ಲಿ ಆದ ಪಂಚಾಯತ್‌ರಾಜ್ ಚುನಾವಣೆಗಳು ಕಾನೂನುಬಾಹಿರ ಅಂತ ಹೇಳಿ ಅವನ್ನು ಅನರ್ ಮಾಡಿವೆ ; ಅವನ್ನು ನಲ್ ಅಂಡ್ ವಾಯ್ಡ್ ಅಂತ ಡಿಕ್ಲೇರ್ ಮಾಡಿದ್ದಾರೆ. ಕೋಟ್ಯಾಂತರ ರೂಪಾಯಿ ಖರ್ಚು ಮಾಡಿ. ಸಾವಿರಾರು ಖೂನಿಗಳಾಗಿ, ರಕ್ತದ ಮಡಲಿನಲ್ಲಿ ನಡೆದಂಥ ಆ ಚುನಾವಣೆಗಳನ್ನು ಆ ಶ್ರೇಷ್ಠ ನ್ಯಾಯಾಲಯದವರು ಕಾನೂನು ಬಾಹಿರ ಎಂದು ಡಿಕ್ಲೇರ್ ಮಾಡಿ. ಹೊಸ ಚುನಾವಣೆಗಳನ್ನು ನಡೆಸಬೇಕು ಎಂದು ಹೇಳಿದರೂ ನಿಜ, ಹುಟ್ಟಿದ ಮಗುವಿಗೆ ಮೂರು ವರ್ಷಕ್ಕೂ ನಾಮಕರಣ ಮಾಡಬಹುದು, 9 ದಿನಕ್ಕೂ ನಾಮಕರಣ ಮಾಡಬಹುದು ಹೆತ್ತ ತಾಯಿ ತಂದೆ ನಾಮಕರಣ ಯಾವಾಗಲಾದರೂ ಮಾಡಬಹುದು ಆದರೆ ಜನಗಳ, ಸಾರ್ವಜನಿಕರ ಇಂಗಿತವನ್ನು ಅರಿತು ಈ ಒಂದು ಕಾನೂನನ್ನು ಯಾವ ತರಹ. ತರಬೇಕು ಅನ್ನುವುದನ್ನು ಯೋಚನೆ ಮಾಡಬೇಕು.

(MR. SPEAKER in the Chair.)

Mr. SPEAKER.—How much time does he require ?

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಈ ಬಿಲ್ಲಿನಲ್ಲಿ 309 ಪೇಜುಗಳಿವೆ, 417 ಕ್ಲಾಜುಗಳಿವೆ. ಇಷ್ಟು ಜಾಸ್ತಿ ಕ್ಲಾಜುಗಳು ಅಡಕವಾಗಿರತಕ್ಕಂಥ ಮಸೂದೆಯ ಮೇಲೆ ನಮ್ಮ ಅಭಿಪ್ರಾಯಗಳನ್ನು ಸರಕಾರದ ಗಮನಕ್ಕೆ ತರಬೇಕಾದರೆ, ಇನ್ನೂ ಸ್ವಲ್ಪ ಕಾಲ ಬೇಕಾಗುತ್ತದೆ.

ಇದರಲ್ಲಿ ಗ್ರಾಮ ಸಭಾ, ಪಂಚಾಯತ್‌ರಾಜ್, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡ್ ಮತ್ತು ಜಿಲ್ಲಾ ಪರಿಷತ್ ಎಂದು ನಾಲ್ಕು ಭಾಗಗಳಿವೆ. ಇನ್ನೊಂದು, ನ್ಯಾಯ ಪಂಚಾಯತ್ ಇದೆ. ನಮ್ಮ ಬೈರಪ್ಪಾಜಿಯವರು ಹೇಳಿದ ಹಾಗೆ ಇದು ಮೂರು ಚಕ್ರವಿರತಕ್ಕಂಥ ಗಾಡಿ, ಆಟೋರಿಕ್ಷ. ಇದು Three-tyer system, ಇರುವುದರಿಂದ, ಎಲ್ಲಿಯಾದರೂ ತಲೆಕೆಳಗಾಗಬಹುದು. ಇದು ಮೂರು ಚಕ್ರವಿರತಕ್ಕಂಥ ಗಾಡಿಯಾದ್ದರಿಂದ, ಕಾಡು ಹಾದಿಯಲ್ಲಿ ಹೋಗುವುದಕ್ಕೆ ಬರದು. ಇದು ಟಾರು ರೋಡಿನಲ್ಲಿ ಓಡುವುದಕ್ಕೆ ಸಾಧ್ಯ. ಇದರಲ್ಲಿ ಸರ್ಕಾರ ಏನು ನಿರೀಕ್ಷಣೆ ಮಾಡುವುದೆಂದರೆ, ಇದು ಹಳ್ಳಿ ಜನತೆಗೆ ಸಹಾಯವಾಗಬೇಕೆಂದು. ಆ ಫಲ ಇದರಲ್ಲಿ ಈಡೇರುವುದಿಲ್ಲ. ಇದು ಎಲ್ಲಿಯಾದರೂ ಬಿದ್ದುಹೋಗುತ್ತದೆ. 11 ಖಾತೆಗಳನ್ನು ತೆಗೆದುಕೊಂಡು ಹೋಗಿ ಈ ಜಿಲ್ಲಾ ಪರಿಷತ್ತುಗಳು ಕೈಗೆ ಕೊಡುತ್ತೀರಾ. ಆತಾರಾ ಕಚೇರಿಯಲ್ಲಿ ಸರ್ಕಾರವಿದ್ದಾಗ 18 ಖಾತೆಗಳು ಅದರ ಕೈಯಲ್ಲಿತ್ತು ; ಈಗ ಇಲ್ಲಿ ಜಾಸ್ತಿಯಾಗಿರಬಹುದು. ಈಗ ನೀವು 27ಜನ ಮಂತ್ರಿಗಳು, 26 ಖಾತೆ ಇಟ್ಟುಕೊಂಡು ರಾಜ್ಯಭಾರ ಮಾಡುತ್ತಾ ಬಂದಿರಿ. 11 ಖಾತೆಗಳನ್ನು ಜಿಲ್ಲಾ ಪರಿಷತ್ತು, ಪಂಚಾಯಿತಿ, ತಾಲ್ಲೂಕು ಬೋರ್ಡಿಗೆ ಕೊಟ್ಟಮೇಲೆ, ತಮಗೆ ಉಳಿದಿರುವ ಕೆಲಸವೇನು ? ಆಮೇಲೆ ಈ ಸಭೆಯ 208 ಜನ ಸದಸ್ಯರ ಕೆಲಸವೇನು ? ಈಗ ನಾವು ಏನಾದರೂ ನಿಮ್ಮನ್ನು ಒಳ್ಳೆಯ ಕೆಲಸ ಮಾಡಿರಿ ಅಂದರೆ, ಫೈನಾನ್ಸ್ ಡಿಪಾರ್ಟ್‌ಮೆಂಟ್ ಕಡೆ ಬೆಟ್ಟು ತೋರಿಸುತ್ತೀರಾ. ಈಗಿರುವ ಈ ಜಿಲ್ಲಾ ಪರಿಷತ್ತುಗಳು, ಪಂಚಾಯಿತಿಗಳು, ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳು ಎಷ್ಟರಮಟ್ಟಿಗೆ ಕಾರ್ಯನಿರ್ವಹಣೆ ಮಾಡಿದ್ದಾರೆ ಎಂದು ತಾವು ಬಹಳ ಸೂಕ್ಷ್ಮವಾಗಿ ಪರಿಶೀಲನೆ ಮಾಡಿದರೆ, ರಾಜ್ಯದಲ್ಲಿರತಕ್ಕಂಥ ತಾಲ್ಲೂಕು ಡೆವಲಪ್‌ಮೆಂಟ್ ಬೋರ್ಡುಗಳು, ಪಂಚಾಯಿತಿಗಳು, ಡಿಸ್ಟ್ರಿಕ್ಟ್ ಡೆವಲಪ್‌ಮೆಂಟ್ ಕೌನ್ಸಿಲ್ಲುಗಳು ಯಾವುವೂ ಕೂಡ ಮನಸ್ಸಿಗೆ ಸಮಾಧಾನ ತರುವ ರೀತಿಯಲ್ಲಿ ಕೆಲಸಕಾರ್ಯಗಳನ್ನು ನಡೆಸಿಲ್ಲ. ಶ್ರೀಮಾನ್ ಎಂ. ಸಿ. ಬಸಪ್ಪನವರು ಹೇಳಿದ ಹಾಗೆ ಜನತೆ ಕಲ್ಯಾಣಕ್ಕೋಸ್ಕರ ಸ್ವಲ್ಪ ಮಾಡಿದಂಥ ಒಂದು ಸಂಸ್ಥೆಯೂ ಚೆನ್ನಾಗಿ ಕೆಲಸ ಮಾಡಿಲ್ಲ.

ಅಧ್ಯಕ್ಷರು.—ಮಾನ್ಯ ಸದಸ್ಯರು ಎಷ್ಟು ಟೈಮ್ ತೆಗೆದುಕೊಂಡರು.

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಇದರ ಡಿಸ್ಕಷನ್ನಿಗೆ ಈಗಲೇ ಟೈಮು ಜಾಸ್ತಿ ಬೇಕು. ಇದು ಸೆಲೆಕ್ಟ್ ಕಮಿಟಿಗೆ ಹೋಗಿ ಬಂದ ಮೇಲೆ ಚರ್ಚೆ ಮಾಡಲು ಲಿಮಿಟೆಡ್ ಸ್ಕೋಪ್ ಇರುತ್ತದೆ. ಆದ್ದರಿಂದ ತಾವು ಈಗ ಟೈಮ್ ಸ್ವಲ್ಪ ಜಾಸ್ತಿ ಕೊಡಬೇಕು.

ಇವತ್ತು ಪಂಚಾಯಿತಿಗಳಿಗೆ ಸೆಕ್ರೆಟರಿಗಳನ್ನು ನೇಮಕ ಮಾಡುವುದಕ್ಕೆ ಸರ್ಕಾರಕ್ಕೆ ಆಗಿಲ್ಲ. ಯಾವ ರಾಜ್ಯದಲ್ಲಿ ಪಟೇಲರು ಶಾನುಭೋಗರನ್ನು ಅಪಾಯಿಂಟ್ ಮಾಡುವ ಪದ್ಧತಿಯನ್ನು ಅಬಾಲಿಷ್ ಮಾಡಿದರೋ, ಅಲ್ಲಿ ಸೆಕ್ರೆಟರಿಗಳನ್ನು ನೇಮಕ ಮಾಡುವುದಕ್ಕೆ ಆಗಲಿಲ್ಲ. ಇವತ್ತು 67 ಪಂಚಾಯಿತಿಗಳಲ್ಲಿ ಸೆಕ್ರೆಟರಿಗಳು ಇಲ್ಲ, ಸೆಕ್ರೆಟರಿಗಳಿಲ್ಲದೆ, ಈ ಪಂಚಾಯಿತಿಗಳು ಅವುಗಳ ಕೆಲಸ ಕಾರ್ಯಗಳನ್ನು ಎಷ್ಟರ ಮಟ್ಟಿಗೆ ನಿರ್ವಹಣೆ ಮಾಡಿರಬಹುದು, ಜನತೆಯ ಸೇವೆ ಮಾಡಿರ ಬಹುದು ! ಜನತೆ ಕಲ್ಯಾಣಕ್ಕೋಸ್ಕರ ಇರುವ ಈ ಸಂಸ್ಥೆಗಳ ವಿಷಯದಲ್ಲಿ ಸರಕಾರ ಇನ್ನೂ ವಿಶೇಷ ವಾಗಿ ಯೋಚನೆ ಮಾಡಬೇಕು ಶ್ರೀಮಾನ್ ಕೃಷ್ಣಪ್ಪನವರು ಉತ್ತರ ಹೇಳುವಾಗಲೆಲ್ಲಾ ಅನೇಕಸಾರಿ, ಇವತ್ತು ಮಾಡುತ್ತೇವೆ, ನಾಳೆ ಮಾಡುತ್ತೇವೆ. ಕೇಡರ್ ಅಂಡ್ ರಿಕ್ರೂಟ್‌ಮೆಂಟ್ ರೂಲ್ಸ್ ಮಾಡುತ್ತಾ ಇದ್ದೇವೆ ಎಂದು ಹೇಳುತ್ತಲೇ ಇದ್ದಾರೆ. ಆ ಅಪಾಯಿಂಟ್‌ಮೆಂಟುಗಳನ್ನು ಹೀಗಾದರೆ ಇನ್ನೆಷ್ಟು ವರ್ಷಗಳಲ್ಲಿ ಮಾಡುತ್ತಾರೆ, ಶ್ರೀ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ, ಕೆಳಮಟ್ಟ ದಲ್ಲಿ ತಾಲ್ಲೂಕುಬೋರ್ಡು ಮುಂತಾದುವುಗಳಲ್ಲಿ ರಾಜಕೀಯ ವಿಷ ವೃಕ್ಷ ಬೆಳೆದು ಹೋಗಿದೆ. ಬಾವಿ ತೋಡಿಸುವುದರಿಂದ, ವಿಲೇಜ್ ಲೆವೆಲ್ ವರ್ಕರಿಂದ ಹಿಡಿದು, ಒಬ್ಬ ಮಿಡ್ ವೈಫನ್ನು ಒಂದು ಜಾಗದಿಂದ ಇನ್ನೊಂದು ಜಾಗಕ್ಕೆ ಟ್ರಾನ್ಸ್‌ಫರ್ ಮಾಡುವವರೆಗೆ, ಈ ರಾಜಕೀಯ ಭೂತ ಚೇಷ್ಟೆ ಆಡುತ್ತಾ ಇದೆ. ತಾವು ಕೊಡತಕ್ಕಂಥ ಅಧಿಕಾರ ಸದುಪಯೋಗವಾಗುತ್ತದೆಯೋ ಎಂಬುದನ್ನು ಸರ್ಕಾರ ಸ್ವಲ್ಪ ಮನನ ಮಾಡಬೇಕು, ಎಂದು ಸರ್ಕಾರದಲ್ಲಿ ಹೇಳುತ್ತಾ ಇದ್ದೇನೆ. ಈ ಮೂರು ಸಂಸ್ಥೆಗಳಿರುವುದೂ ಜನತೆಯ ಕಲ್ಯಾಣಕ್ಕೋಸ್ಕರ. ಈಗ ಸರಕಾರದಲ್ಲಿ ಎಷ್ಟು ಹಣವಿರಬೇಕು, ಸಂಸ್ಥೆಗಳಿಗೆ ಎಷ್ಟು ಕೊಡಬೇಕು ಅನ್ನುವುದನ್ನು ಸರಿಯಾಗಿ ನಿರ್ಧರಿಸಬೇಕು. ಈಗ ನೀವು ಈ ಜಿಲ್ಲಾ ಪರಿಸ್ಥಿತಿ ವ್ಯವಸಾಯ, ಸಹಕಾರ, ನೀರಾವರಿ, ಶಿಕ್ಷಣ, ಪಶುಸಂಗೋಪನೆ, ಕೈಗಾರಿಕೆ, ಮೀನುಗಾರಿಕೆ, ಸೋಶಿಯಲ್ ವೆಲ್‌ಫೇರ್ ಸ್ಟ್ಯಾಟಿಸ್ಟಿಕ್ಸ್, ಹಾರ್ಟಿಕಲ್ಚರ್, ಹೆಲ್ತ್ ಸರ್ವಿಸಸ್, ಈ 11 ಖಾತೆಗಳನ್ನು ಕೊಟ್ಟಿದ್ದೀರಿ.

11 ಖಾತೆಗಳನ್ನು ಕೊಟ್ಟಿದ್ದೀರಿ, ಹನ್ನೊಂದು ಖಾತೆಗಳನ್ನು ಕೊಟ್ಟ ಮೇಲೆ ಅವರಿಗೆ. ಕೊಟ್ಟಿರತಕ್ಕ ಅಧಿಕಾರವನ್ನು ನಾವು ಯೋಚನೆ ಮಾಡಿದರೆ ಒಂದು ವಿಷಯ ಎಂದು ಕಾಣುತ್ತದೆ ಡೈರೆಕ್ಟರಿಂದ ಹಿಡಿದು ಇಲ್ಲಿಯವರೆಗೂ ಎಲ್ಲ ಅಧಿಕಾರವನ್ನೂ ಅವರಿಗೆ ಕೊಟ್ಟ ಮೇಲೆ ನೀವು ಕಾನೂನು ಮಾಡತಕ್ಕವರು, ಪಾಲಿಸಿ ಮಾಡತಕ್ಕವರು ಆದರೆ ಸಾಕು ಎಂದು ನನ್ನ ಅಭಿಪ್ರಾಯ. ಮಾನ್ಯ ಸ್ನೇಹಿತರಾದ ಪಾಟೀಲ್ ಅವರು ಎಷ್ಟು ಸೆಸ್‌ಗಳನ್ನು ಜನತೆಯ ಮೇಲೆ ಹಾಕಬೇಕೆಂದು ನಿಶ್ಚಯ ಮಾಡಿದ್ದೀರಿ ಎಂದು ಕೇಳಿದರು. ತಾವು ಕಂದಾಯದಲ್ಲಿ ಕೊಡತಕ್ಕ ಒಂದು ಷೇರು, ಅವರು ಹಾಕಿಕೊಳ್ಳತಕ್ಕ ಸೆಸ್ಸು ಇದನ್ನೆಲ್ಲಾ ಜನತೆಯ ಮೇಲೆ ಹಾಕಿ ಸರ್ಕಾರ ಈ ಮೂರು ಸಂಸ್ಥೆಗಳ ಕೆಲಸ ನಡೆಸುವುದಕ್ಕೆ ಪ್ರಯತ್ನ ನಡೆಸುತ್ತಾ ಇದೆ ಎಂದರೆ ನನಗಾದರೂ ಅನಿಸುತ್ತದೆ ಈ ರಾಜ್ಯದಲ್ಲಿ ಇವತ್ತಲ್ಲ ನಾಳೆ ಎಂದಾದರೂ ಒಂದು ದಿವಸ ಗೊಂದಲ, ಆಂದೋಳನ ನಡೆಯುತ್ತದೆ. ಅಧಿಕಾರವೂ ಬೇಡ, ನಮ್ಮ ಮೇಲೆ ಹಾಕತಕ್ಕ ತೆರಿಗೆಯೂ ಬೇಡ ಎಂದು ಹೇಳತಕ್ಕ ಜನತೆ ನಿಮ್ಮ ಮುಂದೆ ಬರುತ್ತಾರೆ, ಅಂತಹ ಸನ್ನಿವೇಶವನ್ನು ಸೃಷ್ಟಿ ಮಾಡುತ್ತಾ ಇದ್ದೀರಿ. ಇವತ್ತು ಬಹಳ ವಿನಯದಿಂದ ಕೇಳುತ್ತೇನೆ. ಪಂಚಾಯ್ತಿ ಎಲೆಕ್ಷನ್‌ಗೆ ಯಾರಾದರೂ ಕಾನೂನಿನಲ್ಲಿ ಹೇಳಿದ ಹಾಗೆ ಹತ್ತು ದಿನ ಏಳು ದಿನ ನೋಟೀಸ್ ಕೊಟ್ಟು ಸರಿಯಾದ ಬರವಣಿಗೆ ಬರೆದು, ಮೀಟಿಂಗ್ ಕರೆದು, ಜನಾಭಿಪ್ರಾಯ ಪಡೆದು ರೆಸೊಲ್ಯೂಷನ್ ಮಾಡಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೋ ? ಸರ್ಕಾರದವರ ಗಮನಕ್ಕೆ ಬಂದಿದ್ದರೆ ಸರ್ಕಾರದವರ ನೀತಿ, ನಿಟ್ಟು ಏನು ಎಂದು ಕೇಳುತ್ತೇನೆ. ತಾಲ್ಲೂಕು ಬೋರ್ಡು ಪಂಚಾಯ್ತಿ ರೆಸೊಲ್ಯೂಷನ್‌ಗಳನ್ನು ಮೂಟೆ ಕಟ್ಟಿ ಮೂಲೆಗೆ ಹಾಕಿದ್ದೀರಿ. ಅವು ಹಳೇ ರೆಕಾರ್ಡ್ ರೂಮಿನಲ್ಲಿ ಇವೆ. ಪಂಚಾಯ್ತಿಗಳಿಗೆ ಹೆಚ್ಚಿನ ಅಧಿಕಾರ ಕೊಟ್ಟು ಶಾಸನದ ಪ್ರಕಾರ ಕೆಲಸ ಮಾಡತಕ್ಕ ಸೆಕ್ರೆಟರಿಗಳನ್ನು ಅಲ್ಲಿ ಇಟ್ಟು, ನಿರೀಕ್ಷೆ ಮಾಡತಕ್ಕ ಆಡಳಿತ ಎಷ್ಟು ಮಟ್ಟಿನದು ಎಂಬುದನ್ನು ನಾವು ಸ್ವಲ್ಪ ಯೋಚನೆ ಮಾಡಬೇಕಾಗಿದೆ. 1,500ರಿಂದ 5,000 ದ ವರೆಗೂ ಜನ ಸಂಖ್ಯೆ ಇರತಕ್ಕ ಪಾಂಚಾಯ್ತಿ ಇರಬೇಕೆಂದು ಹೇಳಿದ್ದೀರಿ. 1,500 ಜನ ಸಂಖ್ಯೆ ಇರತಕ್ಕ ಒಂದು ಪಂಚಾಯ್ತಿಗೆ ಅಲ್ಲಿ ಕೆಲಸ ಮಾಡತಕ್ಕ ಸೆಕ್ರೆಟರಿಗೆ ಕೊಡಬೇಕಾಗುವಷ್ಟು ಹಣ ಆ ಪಂಚಾಯ್ತಿನಲ್ಲಿ ಉತ್ಪನ್ನ ಇಲ್ಲದೇ ಇದ್ದರೆ ಹೇಗೆ ಮಾಡುತ್ತೀರಿ ಎಂದು ಕೇಳುತ್ತೇನೆ. ಸೆಕ್ರೆಟರಿ ಇರುತ್ತಾರೆ, ಆಫೀಸು ಇರುತ್ತದೆ, ಅಕೌಂಟ್ಸ್ ಆಡಿಟ್ ಮಾಡಿಸಬೇಕು ಇದಕ್ಕೆಲ್ಲಾ ಹಣ ಕೊಡಬೇಕು. ಅದಕ್ಕೆ ಇರತಕ್ಕ 2,000 ರೂಪಾಯಿ ಉತ್ಪನ್ನದಲ್ಲಿ ಅಷ್ಟೆಲ್ಲಾ ಖರ್ಚುಗಳನ್ನು ನಿರ್ವಹಿಸಿ ಚರಂಡಿ ಮಾಡಿಸುವುದೇನು ? ರಸ್ತೆ ಮಾಡಿಸುವುದೇನು ? ಯಾವ ವಿಷಯ ನೋಡಬೇಕು ? ಇದನ್ನೆಲ್ಲಾ ಪೂರೈಸುವುದಕ್ಕಾಗುತ್ತ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ದೆಯೇ ? ಸಹಕಾರ, ವ್ಯವಸಾಯ ಈ ರೀತಿ ಇನ್ನೂ ಅನೇಕ ಬಾಬುಗಳ ಮೇಲೆ ಅವರಿಗ ಅಧಿಕಾರ ಕೊಡಬೇಕೆಂದು ಮಾಡಿದ್ದೀರಿ. 279 ಫಾರ್ಮಿಂಗ್ ಸೊಸೈಟಿಗಳು ಇವೆ ಎಂದು ನಿನ್ನೆದಿವಸ ಹೇಳಿದಿರಿ, ಬಹಳ ಚೆನ್ನಾಗಿ ಕೆಲಸ ಮಾಡುತ್ತಾ ಇವೆ ಎಂದು ಕೂಡ ಹೇಳಿದಿರಿ ಅವುಗಳನ್ನು ಇವರ ಕೈಯಲ್ಲಿ ಕೊಡುತ್ತ ಇದ್ದೀರಿ. ವ್ಯವಸಾಯೋತ್ಪನ್ನ ಹೆಚ್ಚಾಗಲೇಬೇಕು ಎಂದು ಹೇಳತಕ್ಕ ತಮ್ಮ ಫಾರಂಗಳಲ್ಲಿ ಯಾವ ರೀತಿ ನಡೆಯುತ್ತಾ ಇದೆ ಎಂಬುದನ್ನು ತಾವು ನೋಡಿದ್ದೀರಾ? ಬೊಮ್ಮೇಗೌಡರ ಹೊಲದಲ್ಲಿರತಕ್ಕ ಮೆಣಸಿನ ಗಿಡ, ಬದನೆ ಗಿಡ, ತುಂಬೇ ಗಿಡಗಳನ್ನು ತಂದು ತಮ್ಮ ಎಕ್ಸ್‌ಟೆನ್‌ಷನ್ ಫಾರಂಗಳಲ್ಲಿ ಇಟ್ಟು ಇದು ನಮ್ಮ ಫಾರಂನಲ್ಲಿ ಆದದ್ದು ಎಂದು ಹೇಳಿ ಪ್ರದರ್ಶನ ಮಾಡಿ ದೊಡ್ಡದಾಗಿ ಸರ್ಟಿಫಿಕೇಟ್ ತೆಗೆದುಕೊಳ್ಳುವುದು ತಮ್ಮ ಗಮನಕ್ಕೆ ಬಂದಿದೆಯೇ ? ಇಷ್ಟು ಕೋಟಿ ರೂಪಾಯಿಗಳ ಹಣವನ್ನು ಖರ್ಚು ಮಾಡುತ್ತೀರಿ? ಬೇರೆ ದೇಶಗಳಲ್ಲಿ ಅಕ್ಕಿಗಾಗಿ ಭಿಕ್ಷೆ ಬೇಡುತ್ತಾ ಇದ್ದೀರಿ. ತಾಲ್ಲೂಕು ಬೋರ್ಡುಗಳಿಗೆ ಕೊಟ್ಟಿರತಕ್ಕ ಅಧಿಕಾರ ಅಲ್ಲಿ ತಾವು ಇಟ್ಟಿರತಕ್ಕ ಅಧಿಕಾರಿಗಳು ಎಷ್ಟು ಮಟ್ಟಿಗೆ ಕೆಲಸ ಮಾಡಿದ್ದಾರೆ ಎಂಬುದನ್ನು ನೋಡಿದರೆ ಅವರ ಕೈಯಲ್ಲಿ ಮತ್ತೆ ವ್ಯವಸಾಯ ಕ್ಷೇತ್ರವನ್ನು ಕೊಟ್ಟು ವ್ಯವಸಾಯೋತ್ಪನ್ನವನ್ನು ಮಾಡಬೇಕೆಂದು ಹೇಳಿರುವುದನ್ನು ನೋಡಿದರೆ ನೀವೇನೋ ಕನಸು ಕಾಣುತ್ತಾ ಇದ್ದೀರಿ, ಒಳ್ಳೆಯದು ಆಗುತ್ತದೆಯೋ ಇಲ್ಲವೋ–ತಳಹದಿ ಯಾವುದು ಇದೆಯೋ ಅಲ್ಲಿ ಸರಿಯಾಗಿ ನೋಡುವವರು ಇಲ್ಲದೇ ಹೋದರೆ ತಮ್ಮ ನಿರೀಕ್ಷಣೆ ಏನಿದೆಯೋ ಅದು ಸಫಲವಾಗಲಾರದು ಎಂಬ ಭಯ ನನಗೆ ಇದೆ. ಸಾಲ ಸೋಲಗಳನ್ನು ಕೊಟ್ಟಿದ್ದೀರಿ, ಸಹಕಾರ ಸಂಘಗಳಲ್ಲಿ ಶ್ರೀಮಾನ್ ಎ. ಎಸ್. ಪಾಟೀಲ್ ಅವರು ಹೇಳಿದರು ಅವುಗಳ ವ್ಯವಸ್ಥೆಯನ್ನು ನೋಡಿಕೊಳ್ಳುವುದಕ್ಕೆ ಹೆಚ್ಚಿನ ಅಧಿಕಾರ ಇಲ್ಲ ಎಂದು. ತಾವು ಕೊಡತಕ್ಕ ತೀರ್ಮಾನಗಳು, ಹೇಳತಕ್ಕ ಮಾತುಗಳನ್ನು ಕೇಳಿದರೆ ಲಕ್ಷಾಂತರ ರೂಪಾಯಿಗಳ ಹಣ ಸಹಕಾರ ಸಂಘಗಳಲ್ಲಿ ಹೂತು ಹೋಗಿದೆ. ಇದರ ಕಾವಲಿಗೆ, ಇದನ್ನು ಕಾಪಾಡುವುದಕ್ಕೆ ಯಾರನ್ನು ಇಡುತ್ತಾ ಇದ್ದೀರಿ ? ಜಿಲ್ಲಾ ಪರಿಷತ್ತು, ತಾಲ್ಲೂಕು ಬೋರ್ಡುಗಳ ಅಧಿಕಾರ ವ್ಯಾಪ್ತಿಗೆ ಸಹಕಾರ ಸಂಘ ಗಳನ್ನು ವಹಿಸಿದ್ದೇ ಆದರೆ ಸರ್ಕಾರ ದಿವಾಳಿಯಾಗತಕ್ಕ ಪ್ರಸಂಗ ಬಂದೀತು ಎಂಬ ಭಯ ನಮ್ಮಲ್ಲಿ ಮೂಡಿದೆ. ಇನ್ನು ಕೆಲವು ವಿಷಯಗಳು ಎಂದರೆ ಮೈನರ್ ಇರಿಗೇಷನ್ ಅಂತ ಇದೆ, ಎಷ್ಟು ಎಕರೆ ಕೊಡುತ್ತೀರಿ 100—200—300 ಎಕರೆ ಕೊಡುತ್ತೀರಾ ? ಇದನ್ನೆಲ್ಲಾ ತಾವು ತೀರ್ಮಾನ ಮಾಡಬೇಕೆಂದು ಇದ್ದೀರಿ. ಯಾವ ಸರ್ಕಾರಕ್ಕೆ ಸಾಲ ಮಾಡುವುದಕ್ಕೆ ಯೋಗ್ಯತೆ ಇದೆ, ಯಾವ ಸರ್ಕಾರ ಜನತೆಯಿಂದ ತೆರಿಗೆಯನ್ನು ವಸೂಲು ಮಾಡಲು ಇಚ್ಛಿಸುತ್ತಾ ಇದ್ದಾರೆ ಈ ರಾಜ್ಯದಲ್ಲಿ ಅನ್ನ ಮಾರಿ—ಕ್ಷಾಮ ತಲೆದೋರಿರುವಾಗ ಕೇಂದ್ರದಿಂದ ಬಂದಂಥ ಮೂರೂವರೆ ಕೋಟಿ ರೂಪಾಯಿ ಗಳನ್ನು ಹಂಚಿಕೆ ಮಾಡ ನಮ್ಮ ಬೊಕ್ಕಸದಲ್ಲಿ ಹಣ ಇಲ್ಲ ಎಂದು ಹೇಳಿದ ಮೇಲೆ ಇವತ್ತು ಜಿಲ್ಲಾ ಪರಿಷತ್ತು, ತಾಲ್ಲೂಕು ಬೋರ್ಡುಗಳಿಗ ಎಲ್ಲಿಂದ ಹಣವನ್ನು ತರುತ್ತೀರಿ ? ಸಾಲ ಮಾಡಲು ಒಂದು ಕಲಂನ್ನೂ ಕೂಡ ಇಟ್ಟಿದ್ದೀರಿ. ಜಿಲ್ಲಾ ಪರಿಷತ್ತಿನ ಆಸ್ತಿಪಾಸ್ತಿಗಳೇನು ? ಅವರಿಗೆ ಇರತಕ್ಕ ಸೆಕ್ಯೂರಿಟಿ ಏನು ? ಯಾವ ಆಧಾರದ ಮೇಲೆ ಅವರಿಗೆ ಸಾಲಾ ತೆಗೆದುಕೊಳ್ಳಲು ಅನುಮತಿಯನ್ನು ಕೊಡುತ್ತೀರಿ ? ಇದನ್ನೆಲ್ಲಾ ನೋಡಿದರೆ ತಾವು ಬಹಳ ಕಾಲ ಅಧಿಕಾರ ಬೇರೆಯವರ ಕೈಯಲ್ಲಿ ಹೋಗದೆ ಇರುವ ರೀತಿಯಲ್ಲಿ.

You want to perpetuate your own rule and see that nobody will get into the gadi.

ಇದು ಎಷ್ಟು ಚೆನ್ನಾಗಿ ಕಾಣುತ್ತಾ ಇದೆ ಎಂದರೆ ತಾವು ಎಲ್ಲಾ ಕ್ಷೇತ್ರದಲ್ಲೂ ಜನಗಳಿಗೆ ಆಸೆ ತೋರಿಸಿ, ಅವರ ಮೂಗಿಗೆ ತುಪ್ಪ ಹಚ್ಚಿ, ತಾವೇ ಬಹಳ ಕಾಲ ಅಧಿಕಾರದಲ್ಲಿರಬೇಕೆಂಬ ಆಶೋತ್ತರ ವನ್ನು ಇಟ್ಟುಕೊಂಡಿದ್ದೀರಿ.

ಶ್ರೀ ಎನ್. ಶರಣಪ್ಪ (ದೇವದುರ್ಗ).—ಅಧಿಕಾರವನ್ನು ಕೇಂದ್ರೀಕರಣ ಮಾಡಬೇಕೆಂದು ಹೇಳುತ್ತೀರೋ ವಿಕೇಂದ್ರೀಕರಣ ಮಾಡಬೇಕೆಂದು ಹೇಳುತ್ತೀರೋ !

ಶ್ರೀ ಸಿ. ಜೆ. ಮುಕ್ಕಣ್ಣಪ್ಪ.—ಕೇಂದ್ರೀಕರಣ ಮಾಡಬೇಕೋ, ವಿಕೇಂದ್ರೀಕರಣ ಮಾಡಬೇಕೋ ಎಂದು ಶ್ರೀಮಾನ್ ಶರಣಪ್ಪನವರು ಕೇಳಿದರು. ಅದು ಬಹಳ ಉನ್ನತವಾದ ಪ್ರಶ್ನೆಯಾದರೂ ಇವತ್ತಿನ ದಿವಸ ವಿಕೇಂದ್ರೀಕರಣ ಮಾಡುವುದಕ್ಕೆ ಯಾವ ಯಾವ ಕ್ಷೇತ್ರದಲ್ಲಿ ಏನೇನು ಕೆಲಸ ಮಾಡಿ ಜನತೆಯ ನಿರ್ಮಲತೆಯನ್ನು ಸಾಧನೆ ಮಾಡಿದ್ದೀರಿ ಎಂಬುದನ್ನು ದಯಮಾಡಿ ತೋರಿಸಿಕೊಟ್ಟರೆ ತಾವು ವಿಕೇಂದ್ರೀಕರಣ ಮಾಡುವುದು ಸರಿ ಎಂದು ಒಪ್ಪಿಕೊಳ್ಳುತ್ತೇನೆ. ಒಬ್ಬ ತಂದೆಗೆ ಮೂರು ಜನ ಮಕ್ಕಳು ಇದ್ದರೆ ದೊಡ್ಡವನಿಗೆ ಎಷ್ಟು ಕೊಡಬೇಕು, ಮಧ್ಯದವನಿಗೆ ಎಷ್ಟು ಕೊಡಬೇಕು, ಚಿಕ್ಕವನಿಗೆ ಎಷ್ಟು ಕೊಡಬೇಕು, ತನಗೆ ಎಷ್ಟು ಇಟ್ಟುಕೊಳ್ಳಬೇಕು ಎಂಬುದನ್ನು ಚೆನ್ನಾಗಿ ಯೋಚನೆ ಮಾಡ

ತನ್ನ ಆಸ್ತಿಯನ್ನು ಹಂಚಿ ಕೊಡುತ್ತಾನೆಯೇ ಹೊರತು ಎಲ್ಲವನ್ನೂ ತೆಗೆದುಕೊಂಡು ಹೋಗಿ ಕೊಡುವುದಿಲ್ಲ. ಹಾಗೆಯೇ ವಿಕೇಂದ್ರೀಕರಣ ಮಾಡಬೇಕೆಂದು ಹೊರಟು ಎಷ್ಟು ಮಾಡಬೇಕೋ ಅಷ್ಟು ಮಾಡಬೇಕೇ ಹೊರತು ಎಲ್ಲವನ್ನೂ ತೆಗೆದುಕೊಂಡು ಹೋಗಿ ಏನೂ ತಿಳಿಯದ ಜನರ ಕೈಯಲ್ಲಿ ಕೊಟ್ಟು ಎಲ್ಲವನ್ನೂ ಕಲಸು ಮೇಲೋಗರ ಮಾಡತಕ್ಕ ದೃಷ್ಟಿ ಏನು ಇದೆ ಅದು ಸರಿಯಲ್ಲ. ಶ್ರೀಮಾನ್ ಕಡಿದಾಳ್ ಮಂಜಪ್ಪನವರು ಹೇಳಿದ ಹಾಗೆ ಯಾವುದಾದರೂ ಒಂದು ಮಟ್ಟದಲ್ಲಿ ಜನಗಳನ್ನು ತಯಾರು ಮಾಡುವುದಕ್ಕೆ ತಮ್ಮ ಸರ್ವ ಶಕ್ತಿಯನ್ನೂ ವಿನಿಯೋಗ ಮಾಡಿ. ಪಂಚಾಯಿತ್ತಿ, ಜಿಲ್ಲಾ ಪರಿಷತ್ತು, ತಾಲ್ಲೂಕು ಬೋರ್ಡು ಇವುಗಳೆಲ್ಲದರಲ್ಲೂ ಕೈಹಾಕಿ ಎಲ್ಲೂ ಯಾವುದೂ ಸರಿಯಾದ ರೀತಿಯಲ್ಲಿ ನಡೆಯದಂತೆ ಕಲಸು ಮೇಲೋಗರ ಮಾಡಿದರೆ ಹೇಗೆ? ಇನ್ನು ಡೈರೆಕ್ಟ್ ಎಲೆಕ್ಷನ್ ಇರಬೇಕೇ, ಇನ್‌ಡೈರೆಕ್ಟ್ ಎಲೆಕ್ಷನ್ ಇರಬೇಕೇ ಎಂಬ ಪ್ರಶ್ನೆ ಬಂದಿದೆ. ಅನೇಕ ಜನರು ಮಾತನಾಡಿದ ರೀತಿಯಲ್ಲಿ ನಾನು ಕೂಡ ಯಾವಾಗಲೂ ನೇರವಾದ ಚುನಾವಣೆಯೇ ಇರಬೇಕೆಂದು ತಿಳಿದುಕೊಂಡಿದ್ದೇನೆ. ಹಿಂಬಾಗಿಲಿನಿಂದ ಬರುವುದನ್ನು ನಾನು ಒಪ್ಪುವುದಿಲ್ಲ. ಏಕೆಂದರೆ ಈ ಡೈರೆಕ್ಟ್ ಎಲೆಕ್ಷನ್ ಮತ್ತು ಇನ್‌ಡೈರೆಕ್ಟ್ ಎಲೆಕ್ಷನ್ ಎರಡೂ ಇರುವುದಾಗಿ ಈ ವಿಧೇಯಕದಲ್ಲಿ ಉಲ್ಲೇಖ ಇದೆ. ನಾವು ಈ ಸಭೆಯಿಂದ ಚುನಾವಣೆ ನಡೆಯುವುದನ್ನು ನೋಡಿದ್ದೇವೆ, ನೇರವಾಗಿ ಚುನಾವಣೆಯಾಗಿರುವುದನ್ನು ಸಹ ನೋಡಿದ್ದೇವೆ. ನೇರವಾದ ಚುನಾವಣೆಗೆ ನಿಂತವನು ಎಷ್ಟೇ ಶ್ರೀಮಂತನಾಗಿದ್ದರೂ ಕೂಡ ಅಥವ ಬಡವನಾಗಿದ್ದರೂ ಕೂಡ ಚುನಾವಣೆ ಮುಗಿಯುವ ವೇಳೆಗೆ ಅವನ ಬೊಕ್ಕಸ ಬರಿದಾಗುತ್ತದೆ. ನೇರವಾದ ಚುನಾವಣೆ ಇರಬೇಕು ಎಂದು ಹೇಳುತ್ತಿದ್ದಾರೆ. ತಾಲ್ಲೂಕು ಬೋರ್ಡಿಗೆ ಈಗ ಕೊಟ್ಟಿರುವ ಅಧಿಕಾರ ಸಾಕೆ ಸಾಲದೆ ಎಂದು ಯೋಚನೆ ಮಾಡಿ ಅದಕ್ಕೆ ಹೆಚ್ಚಿನ ಅಧಿಕಾರ ಕೊಡಬೇಕೆಂದು ಪ್ರಯತ್ನ ಮಾಡಿರುವ ಹಾಗೆ ಕಾಣುತ್ತದೆ. ಈ ಸಭೆಯಲ್ಲಿ ಮೈನರ್ ಇರಿಗೇಷನ್ನಿಗೆ ಹಣ ಎಷ್ಟು ಕೊಟ್ಟಿರಿ ಹೇಗೆ ಹಂಚಿದಿರಿ ಎಂದು ಈ ದಿವಸ ಕೇಳಿದರೆ, ಯಾವ ತತ್ವದ ಆಧಾರದ ಮೇಲೆ ಮಾಡಿದಿರಿ ಎಂದು ಪ್ರಶ್ನೆ ಮಾಡಿದರೆ ಮೂಗರಂತೆ ಸುಮ್ಮನಿದ್ದರು. ಬಹುಮತವಿರುವ ಕಡೆ ತಮಗೆ ಬೇಕಾದವರಿಗೆ ಮೈನರ್ ಇರಿಗೇಷನ್, ಶಾಲೆ, ಆಸ್ಪತ್ರೆ ಕಟ್ಟಡ ಮುಂತಾದುವುಗಳ ಸಹಾಯ ಮಾಡಿದರು. ಆಸ್ಪತ್ರೆ ಎಲ್ಲಿ ತೆರೆದಿರಿ ಎಂದು ಕೇಳಿದರೆ ಡಾ. ಆಳ್ವರವರು ತಾಲ್ಲೂಕು ಬೋರ್ಡಿನ ಬಹುಮತದ ಅಭಿಪ್ರಾಯವಿರುವ ಕಡೆ ತೆರೆದೆವು ಎಂದು ಹೇಳಿದರು. ಇಂಥ ಊರಿನಲ್ಲಿ ತೆರೆಯಬೇಕು, 12 ಮೈಲಿಗಳ ದೂರ ಸೌಕರ್ಯವಿಲ್ಲ ಎಂದು ಹೇಳಿದರೆ ಅದಕ್ಕೆ ಗಮನ ಕೊಡದೆ ತಮಗೆ ಬೇಕಾದ ಕಡೆ ಬೆಟ್ಟದ ಹಲಸೂರಿನಲ್ಲಿ ತೆರೆದರು. ನಿಜವಾಗಿಯೂ ಜನರಿಗೆ ನ್ಯಾಯ ದೊರಬೇಕಾದರೆ ಹೇಗೆ ಮಾಡಬೇಕೆಂಬ ವಿಚಾರದಲ್ಲಿ ಘೋರ್ಪಡೆಯವರು ಒಂದು ಕಡೆ ಈ ರೀತಿ ಹೇಳಿದ್ದಾರೆ :

There is an excellent case for party politics to get out of Panchayatiraj. Panchayatiraj at the national level and at so many other levels is necessary to throw out ideological differences and decide the socio-econmic philosophy''......

ರಾಜಕೀಯದ ಸೋಂಕಿಲ್ಲದೆ ಸರಿಯಾದ ಕೆಲಸವಾಗುತ್ತಿದೆಯೆ ಎಂಬುದಕ್ಕೆ ಇದನ್ನು ಹೇಳಿದೆ. ಜಿಲ್ಲಾ ಪರಿಷತ್ತಿನ ಅಧ್ಯಕ್ಷರಿಗೆ 500 ರೂಪಾಯಿ ಸಂಬಳ, ಉಪಾಧ್ಯಕ್ಷರಿಗೆ 300 ರೂಪಾಯಿ ಎಂದಿದೆ. ಮಂತ್ರಿಗಳ, ಸಂಬಳ, ಪ್ರವಾಸ ಭತ್ಯಗಳ ವಿಚಾರದಲ್ಲೇ ಪ್ರಶ್ನೆಗಳು ಬಂದು ಈ ಸಭೆಯಲ್ಲಿ ಬಹಳ ಚರ್ಚೆಯಾಗುತ್ತಿರುವಾಗ 500—300 ಹೀಗೆಲ್ಲಾ ಸಂಬಳ ಕೊಡುವುದಾದರೆ ರಾಮಕೃಷ್ಣ ಹೆಗ್ಗಡೆಯವರು ಮತ್ತೆ ವಿಧಾನಸೌಧವನ್ನು ನೋಡಲಾರರು : ಅವರು ಹಿಂದೆ ಉಳಿಯುತ್ತಾರೆ. ಜಿಲ್ಲಾಧ್ಯಕ್ಷ ತನ್ನ ಜಿಲ್ಲೆಯಲ್ಲಿ ಸಣ್ಣ ಪಾಳೆಯಗಾರನಾಗುತ್ತಾನೆ, ಉಪಾಧ್ಯಕ್ಷ ಗ್ರಾಮಗಳಲ್ಲಿರುವ ಉಪಾಧ್ಯಾಯರ ಮೇಲೆ ತನ್ನ ದರ್ಪ ತೋರಿಸುತ್ತಾನೆ, ಅವರನ್ನು ಮತ್ತು ಮಿಡ್‌ವೈಫ್ ಮುಂತಾದವರನ್ನು ತನಗೆ ಇಚ್ಛೆ ಬಂದಂತೆ ವರ್ಗಾಯಿಸುತ್ತಾನೆ. ಇದಕ್ಕೆಲ್ಲಾ ಅವಕಾಶಕೊಡುವುದು ಸರಿಯೆ ಎಂದು ಯೋಚನೆ ಮಾಡಬೇಕು. ಇವತ್ತು ಜಿಲ್ಲಾ ಪರಿಷತ್ತಿನಲ್ಲಿರಬೇಕಾದವರ ಸಂಖ್ಯೆ ವಗೈರೆ ನೋಡಿದರೆ ಈ ಸಭೆಯ ಸದಸ್ಯರ ಸಂಖ್ಯೆಯನ್ನು 104ಕ್ಕೆ ಇಳಿಸಬೇಕಾಗುತ್ತದೆ ಎಂದು ಹೇಳಬೇಕಾಗುತ್ತದೆ. ಯಾವುದಾದರೂ ಮಟ್ಟದಲ್ಲಿ ತಾಲ್ಲೂಕು ಬೋರ್ಡಿಗೆ ಹೆಚ್ಚಿನ ಅಧಿಕಾರ ಬೇಕಾದರೆ ಕೊಟ್ಟು ಜಿಲ್ಲಾ ಪರಿಷತ್ತು ಬರೀ ಅಡ್ವೈಸರಿ ಬಾಡಿಯಾಗಿರುವಂತೆ ಮಾಡುವುದು ಸೂಕ್ತ.

ಇನ್ನು ನ್ಯಾಯ ಪಂಚಾಯಿತಿ ಇರುವುದನ್ನು ನಿಜವಾಗಿಯೂ ಕೂಡ ಒಪ್ಪುವುದಕ್ಕಾಗುವುದಿಲ್ಲ. ಬೇಕಾದಹಾಗೆ ಅಧಿಕಾರವಿಟ್ಟುಕೊಂಡು ಇದನ್ನು ಜಾರಿಗೆ ತರುವುದಾದರೆ ಬಹಳ ತೊಂದರೆಯಾಗುತ್ತದೆ, ಬೆಳಗಾದರೆ ಬಾವಿ ಬಳಿ, ನಲ್ಲಿ ಬಳಿ ನೀರಿಗಾಗಿ ವ್ಯಾಜ್ಯ ಮುಂತಾದುವುಗಳೇನು ಬರುತ್ತವೆ ಅವೆಲ್ಲಾ ಈ ಪಂಚಾಯಿತಿ ಬಳಿಗೆ ಬಂದು ರಾದ್ಧಾಂತವಾಗುತ್ತದೆ. ಅದಕ್ಕಾಗಿ ಈ ನ್ಯಾಯ

(ಶ್ರೀ ಸಿ. ಜೆ. ಮುಕ್ಕಣ್ಣಪ್ಪ)

ಪಂಚಾಯಿತಿಗೆ ಸಂಬಂಧಪಟ್ಟ ಅಧ್ಯಾಯವನ್ನು ಸ್ವಲ್ಪ ಮುಂದೆ ಹಾಕಿ ಜನರ ಸಂಸ್ಕೃತಿ, ನೈತಿಕಬುದ್ಧಿ ಬೆಳೆದಮೇಲೆ ಜಾರಿಗೆ ತರುವುದು ಒಳ್ಳೆಯದು, ಈ ದಿವಸದ ಸ್ಥಿತಿಗತಿಗಳಲ್ಲಿ ಅದನ್ನು ಜಾರಿಗೆ ತರುವುದು ಬೇಡ ಎಂದು ಸೂಚಿಸಿ ನನ್ನ ಮಾತನ್ನು ಮುಕ್ತಾಯ ಮಾಡುತ್ತೇನೆ.

ಶ್ರೀ ಅಣ್ಣಾರಾವ್ ಗಣಮುಖಿ (ಅಫಜಲ್‌ಪುರ).—ಅಧ್ಯಕ್ಷರೆ, ಈ ಮಸೂದೆಯ ಮೇಲೆ ಮಾತ ನಾಡುವಾಗ ಕೆಲವು ವಿಷಯಗಳ ಬಗ್ಗೆ ಸರ್ಕಾರದ ಗಮನ ಸೆಳೆಯುವ ಒಂದು ಸಂದರ್ಭ ಒದಗಿದೆ. ಮೊದಲನೆಯದಾಗಿ ಪಂಚಾಯಿತಿಗಳಿಗೆ ಎಲ್ಲಿಯವರೆಗೆ ಸಾಕಾದಷ್ಟು ಹಣ ಒದಗಿಸುವುದಿಲ್ಲ ಅಲ್ಲಿ ಯವರೆಗೆ ಅವು ಚೆನ್ನಾಗಿ ಕೆಲಸಮಾಡುವುದಿಲ್ಲ; ಯಾರಿಗೂ ಕೂಡ ಪಂಚಾಯಿತಿಗಳು ಕೆಲಸಮಾಡುವ ಬಗ್ಗೆ ಸಮಾಧಾನವಾಗುವುದಿಲ್ಲ. ಜಿಲ್ಲಾ ಪರಿಷತ್ತು ಮಾಡುವ ಕೆಲಸದ ವಿಚಾರದಲ್ಲೂ ಸಮಾಧಾನ ವಾಗುವುದಿಲ್ಲ. ಗ್ರಾಮ ಪಂಚಾಯಿತಿ ಚೆನ್ನಾಗಿ ಕೆಲಸ ಮಾಡುತ್ತಿದ್ದರೆ ಅದರ ಮೇಲಿನ ಹಂತದ ಸಂಸ್ಥೆಗಳು ಚೆನ್ನಾಗಿ ನಡೆಯುತ್ತವೆಯೆಂದು ತಿಳಿಯಬಹುದು. ಹಿಂದಿನಂತೆ ಜಮೀನು ಕಂದಾ ಯದ ಶೇಕಡ 30 ಭಾಗವೇನು ಕೊಡುತ್ತಿದ್ದರು ಅದು ಈಗಲೂ ಇದೆ. ಅದು ಆ ಊರಿನ ಜಮೀನು ಕಂದಾಯಕ್ಕೆ ಮಾತ್ರ ಸಂಬಂಧಪಟ್ಟಿಲ್ಲ, ಆ ಜಿಲ್ಲೆಯದೂ ಅಲ್ಲ, ಇಡೀ ಸಂಸ್ಥಾನದ ಭೂಕಂದಾಯವನ್ನು ತೆಗೆದುಕೊಂಡು ಜನಸಂಖ್ಯೆ ಆಧಾರದಮೇಲೆ ಕೊಡುವಾಗ ಇದಕ್ಕಿಂತ ಕಡಮೆ ಯಾದರೂ ಆಗಬಹುದು. ಆದರಿಂದ ಪಂಚಾಯಿತಿ ರಾಜ್ಯ ಹೇಗೆ ನಡೆಸಲು ಸಾಧ್ಯವೆಂಬುದನ್ನು ಯೋಚನೆಮಾಡಬೇಕು. ಕಾಣದವರು ಒಪ್ಪಿಕೊಳ್ಳಬಹುದು. ಪಂಚಾಯಿತಿಗಳಿಗೆ ಸಂಬಂಧಪಟ್ಟ ವರದಿಯಲ್ಲಿ ಕೆಲವು ನಿಜ ಸಂಗತಿಗಳನ್ನು ತಿಳಿಸಿದ್ದಾರೆ. ಸಿಬ್ಬಂದಿ ಖರ್ಚಿಗೆ ಪರ್ ಕ್ಯಾಪಿಟಾ ಒಂದು ರೂಪಾಯಿ ಕೇಂದ್ರ ಸರ್ಕಾರ ಮತ್ತು ರಾಜ್ಯಸರಕಾರಗಳೆರಡೂ ಗ್ರಾಂಟು ರೂಪದಲ್ಲಿ ಕೊಡ ಬೇಕೆಂದು ತಿಳಿಸಿದ್ದಾರೆ. ಅದಾದನಂತರ ಮುಂದೆ ಕೊಡುವ ಸೆಸ್ಸು, ಜಮೀನು ಕಂದಾಯದಿಂದ ಬರುವುದು ಎಲ್ಲಾ ಕೂಡಿ ಪರ್ ಕ್ಯಾಪಿಟಾ ಕನಿಷ್ಠ 3 ರೂಪಾಯಿಯಾದರೂ ಆಗಬೇಕೆಂದು ತಿಳಿಸಿ ದ್ದಾರೆ. ಆ ಪ್ರಕಾರ ಲೆಕ್ಕ ಮಾಡಿದ್ದೀರಾ? ಪಂಚಾಯಿತಿ ಚೆನ್ನಾಗಿ ನಡೆಯಬಹುದೆಂಬ ಭರವಸೆ ಇದೆಯೇ? ತಾಲ್ಲೂಕು ಬೋರ್ಡಿನಮೇಲೆ ಸರ್ಕಾರ ಇಟ್ಟುಕೊಂಡಿರುವ ಅಧಿಕಾರವನ್ನು ಜಿಲ್ಲಾ ಪರಿಷತ್ತು ಚಲಾಯಿಸುತ್ತದೆ ಅದು ತನಿಖೆ ಮಾಡಬಹುದು. ಶೇಕಡ 30ರಷ್ಟು ಭೂಕಂದಾಯ ಕೊಟ್ಟರೆ ಗ್ರಾಮಪಂಚಾಯಿತಿ ನಡೆಯುವುದು ಹೇಗೆ? ಹಾಗೆ ಮಾಡಿದರೆ ಪಂಚಾಯಿತಿ ರಾಜ್ಯ ಸರಿಯಾಗಿ ಕೆಲಸಮಾಡುವುದಿಲ್ಲ. ಅವರಿಂದೇನೂ ಸರಿಯಾಗಿ ಮಾಡುವುದಕ್ಕಾಗುವುದಿಲ್ಲ. ಈಗ 40 ಪೈಸಾ ಸೆಸ್ ಬೇರೆ ಹೇರುತ್ತಿದ್ದಾರೆ. ಈಗಿನ ಜಮೀನು ಕಂದಾಯವೇನಿದೆ ಅದರಮೇಲೆ 40 ಪೈಸಾ ಹಾಕಿದರೆ ಕಂದಾಯ ಪುನರ್ವಿಮರ್ಶೆಯಾದಾಗ ಕಂದಾಯ ಈಗಿರುವುದರ ಎರಡ

12-00 NOON

ರಷ್ಟಾದರೆ ಸೆಸ್ ಕೂಡ ದ್ವಿಗುಣವಾಗುತ್ತದೆ. 21 ನಯಾಪೈಸಾ ಎಂದು ನಮ್ಮಲ್ಲಿದೆ. ಇದ ರಿಂದ ತೊಂದರೆಯಾಗುತ್ತದೆ. ಇದನ್ನು ಬಿಟ್ಟು ಇದಕ್ಕೆ ಡಬ್ಬಲ್ ಆಗಿ ಏಕೆ ಕೊಡುತ್ತಿದ್ದಾರೆನ್ನು ವುದು ನನಗೆ ಅರ್ಥವಾಗುತ್ತಿಲ್ಲ. ಅಪೋರ್ಷನ್‌ಮೆಂಟನ್ನು ನ್ಯಾಷನಲ್ ಇನ್‌ಕಂ ಪ್ರಕಾರ ನೋಡಿ ದರೆ ಶೇಕಡಾ 75 ಭಾಗದಷ್ಟು ಅದರಲ್ಲಿ ಶೇಕಡಾ 50ರಷ್ಟು ಅಗ್ರಿಕಲ್‌ಚರ್ ಲೇಬರಿಗಾಗಿ ಎನ್ನು ವುದನ್ನು ನೋಡಿದ್ದೇವೆ. ನಾವು ಇಲ್ಲಿ ಸೆಸ್ಸು ಅದರ ಮೇಲೆ ಡಬ್ಬಲ್ ಸೆಸ್ಸು ಎಂದು ಜನರಮೇಲೆ ಎಂದು ಹಾಕಲು ಹೊರಟರೆ ಈಗ ಲ್ಯಾಂಡು ರೆವಿನ್ಯೂವನ್ನು ಎಷ್ಟುಮಟ್ಟಿಗೆ ಏರಿಸುತ್ತಾರೆ ಎನ್ನು ವುದನ್ನು ಹೇಳಿದ್ದಾರೇನು? ಕೆಲವು ಭಾಗಗಳಲ್ಲಿ ಲ್ಯಾಂಡು ರೆವಿನ್ಯೂ ಕಂದಾಯ ಒಂದು ಪರ್ಸೆಂಟಿ ನಷ್ಟು, ಧೀಡು ಪರ್ಸೆಂಟಿನಷ್ಟು ಕೆಲವು ಕಡೆಗಳಲ್ಲಿ ಎರಡು ಪರ್ಸೆಂಟಿನಷ್ಟು ಹೆಚ್ಚಾಗಿ ಬೀಳುತ್ತದೆ. ಆದರೆ ಯಾವ ಮಟ್ಟದಲ್ಲಿ ಜನರ ಮೇಲೆ ಈ ಭಾರ ಬೀಳುತ್ತದೆ ಎನ್ನುವುದು ಇನ್ನೂ ಜನರಿಗೆ ಗೊತ್ತಾ ಗಲಿಲ್ಲ. ಲ್ಯಾಂಡು ರೆವೆನ್ಯೂ ಹೀಗೆ ಡಬ್ಬಲ್, ಟ್ರಿಬ್ಬಲ್ ಎಂದಾದರೆ ನನಗೇನೋ ಇಂತಹ ಪಂಚಾ ಯತಿ ರಾಜ್ಯ ನಮಗೆ ಬೇಕಾಗಿಲ್ಲ ಎಂದು ಖಂಡಿತ ನನಗನಿಸುತ್ತದೆ.

ಇನ್ನು ಇಂಡೈರೆಕ್ಟ್ ಟ್ಯಾಕ್ಸುಗಳೆಂದು ಎಲ್ಲರೂ ಕೊಡುತ್ತಾರೆ. ಅದರಲ್ಲಿ ವಕ್ಕಲು ಮಾಡು ವವರೂ ಕೊಡುತ್ತಾರೆ, ಇಲ್ಲಿ ಎಲ್ಲ ಟ್ಯಾಕ್ಸುಗಳನ್ನು ರಾಜ್ಯದವರು ಹಾಕಿ ವಸೂಲು ಮಾಡಿದರೂ ಕೂಡ ಕೇಂದ್ರ ಸರಕಾರದವರು ರಾಜ್ಯ ಸರಕಾರಕ್ಕೆ ಅದರಲ್ಲಿ ಒಂದು ಷೇರನ್ನೂ ಕೊಡುತ್ತಾರೆ. ಆದುದರಿಂದ ಇದರಲ್ಲಿ ಲ್ಯಾಂಡು ರೆವೆನ್ಯೂ ಮತ್ತು ಸೆಸ್ಸುಗಳು ಎಂದು ಇವೆರಡನ್ನೂ ಬಿಡಬೇಕೆಂದು ಸೂಚನೆ ಮಾಡುತ್ತೇನೆ. ಇದರಲ್ಲೇನೂ ಇಷ್ಟು ಪರ್ಸೆಂಟಿನಷ್ಟು ಎಂದು ವಸೂಲು ಮಾಡಿದರೂ ಅದಕ್ಕೆ ತಕ್ಕ ಹಾಗೆ ಗ್ರಾಂಟುಗಳನ್ನೇನೂ ಕೊಡುತ್ತಿಲ್ಲ. ಆದುದರಿಂದ ಇಂತಹ ಸಂಸ್ಥೆಗಳನ್ನು ನಡೆಸುವುದು ಒಳ್ಳೆಯದಲ್ಲ ಎಂದು ನನಗೆ ತೋರುತ್ತದೆ.

ಇದರಲ್ಲಿ ಸರಕಾರ ಸುಮಾರು ಹನ್ನೊಂದು ಇಲಾಖೆಯ ಅಧಿಕಾರಗಳನ್ನೂ ಇಂತಹ ಸಂಸ್ಥೆಗಳಿಗೆ ಕೊಡುತ್ತೇವೆಂದು ಇದರಲ್ಲಿ ಹೇಳಿದ್ದಾರೆ. ಹಾಗೆ ಇದನ್ನು ಕೊಡುವಾಗ ಅದರ ಖರ್ಚು ಆಗ ಏನಿತ್ತೊ ಅದನ್ನೂ ಅವರಿಗೇ ವಹಿಸಿಕೊಡಬೇಕು, ಇದು ಸೆಕ್ಷನ್ನು 355ರಲ್ಲಿದೆ. ಆದರೆ ಈ ಸಂಸ್ಥೆಗಳ ಕೆಲಸ ಮುಂದೆ ಹೆಚ್ಚಾಗಿ ಅದಕ್ಕೆ ಇನ್ನೂ ಹೆಚ್ಚು ಖರ್ಚು ವಹಿಸಬೇಕಾದ ಸಂದರ್ಭ ಬಂದರೆ ಆ ಖರ್ಚನ್ನೂ ಸರಕಾರದವರೇ ಅವರಿಗೆ ಕೊಡಬೇಕು. ಈಗ ನಮಗೆ ತಿಳಿದಿರುವಂತೆ ಪ್ಲಾನು ಎಕ್ಸ್‌ಪೆಂಡಿಚರಿಗಿಂತ ನಾನ್‌ಪ್ಲಾನು ಎಕ್ಸ್‌ಪೆಂಡಿಚರೇ ಬಹಳ ಹೆಚ್ಚಾಗಿ ಬರುತ್ತದೆ. ಆದರೆ ಒಮ್ಮೆ ಈ ಖರ್ಚು ವರ್ಷಕ್ಕೆಂದು ಕೊಡುತ್ತಾರೆ. ಆದರೆ ವರ್ಷೇ ಇದನ್ನು ರಿವೈಸು ಮಾಡುತ್ತಿಲ್ಲ. ಮುಂದಿನ ವರ್ಷ ಅವರಿಗೆ ಸಿಗತಕ್ಕ ಸೆಸ್ಸು ಹಾಗೂ ಲ್ಯಾಂಡು ರೆವೆನ್ಯೂ ಇವುಗಳಿಂದ ಖರ್ಚುಮಾಡಬೇಕಾಗಿ ಬರುತ್ತದೆ. ಇದಕ್ಕೆ ನಾನು ತಮ್ಮಲ್ಲಿ ಕೇಳಿಕೊಳ್ಳುವುದು ವರ್ಷೇ ವರ್ಷೇ ಎಷ್ಟೆಷ್ಟು ಖರ್ಚುಗಳು ಹೆಚ್ಚಾಗಿ ಬರುತ್ತದೋ ಅಷ್ಟನ್ನೂ ರಿವೈಸು ಮಾಡಿ ಕೊಡುವಂತೆ ಇದರಲ್ಲಿ ಪ್ರಾವಿಷನ್ನು ಇಟ್ಟುಕೊಳ್ಳಬೇಕಾಗುತ್ತದೆ. ಹಾಗೆ ಮಾಡದೇ ಬರೀ ಪವರುಗಳನ್ನು ತಮ್ಮ ಕೈಯಲ್ಲಿಟ್ಟುಕೊಂಡು ಸುಮ್ಮನೆ ಈ ರೀತಿ ಶೃಂಗಾರ ಮಾಡುವುದು ಏನೇನೂ ಉಪಯೋಗವಿಲ್ಲ. ಈಗ ಬೊಂಬಾಯಿಯಲ್ಲಿರುವ ಮಹಾರಾಷ್ಟ್ರದ ಆಕ್ಟನ್ನು ತೆಗೆದುಕೊಳ್ಳಿ, ಅವರೇನು ಹೇಳಿದ್ದಾರೆಂದರೆ, ಅಲ್ಲಿ 20 ಪೈಸೆ ಎಷ್ಟು ಸೆಸ್ಸು ಇದೆ.

Sri RAMAKRISHNA HEGDE (Minister for Development, Panchayati Raj and Co-operation).—That is exactly the idea envisaged in this Bill. Once we transfer the responsibility, the corresponding financial provision also should be transferred. It pre-supposes that as and when the expenditure increases, the allotment also should increase proportionately.

ಶ್ರೀ ಅಣ್ಣಾರಾವ್ ಗಣಮುಖಿ.—ಹಾಗೆ ಪ್ರತಿವರ್ಷವೂ ಕೂಡ ಸೆಸ್ಸನ್ನು ಹಾಕುತ್ತಾರೆ. ಆದರೆ ಆಡಿಟೆಡ್ ಎಕ್ಸ್‌ಪೆಂಡಿಚರು ಮೇಲೆ ಹೆಚ್ಚು ಖರ್ಚುಗಳು ಬಂದರೆ ಅದನ್ನೂ ಸೇರಿಸಿಕೊಡುತ್ತಾರೆ. ಇದನ್ನು ಫೈನಾನ್ಸ್ ಕಮಿಷನ್ನಿನವರೂ ತೋರಿಸಿದ್ದಾರೆ. ಅದರಂತೆ ಸ್ಟೇಟು ಗವರ್ನಮೆಂಟಿನವರೂ ಕೂಡ ಗ್ರಾಂಟುಗಳನ್ನು ಕೊಡುತ್ತಾರೆ. ಬೊಂಬಾಯಿಯಲ್ಲಿರುವ ಪ್ರಾವಿಷನ್ನನ್ನು ತೆಗೆದುಕೊಂಡರೆ ಅವರಿಗೇನಾದರೂ ಖರ್ಚು ಸಾಲದೆ ಕಡಿಮೆ ಬಂದರೆ ಆಗ ಆಕ್ವಿಸಿಷನ್ನು ಗ್ರಾಂಟ್ಸ್ ಎಂದು ಕೊಡುತ್ತಾರೆ. ಅದನ್ನು ತೆಗೆದುಕೊಂಡು ಅವರ ಕೆಲಸಗಳನ್ನು ಮಾಡುತ್ತಾರೆ. ಇಲ್ಲಿರುವ ಹಾಗೆ ಅಲ್ಲಿ ಪಾಪ್ಯುಲೇಷನ್ನು ಬೇಸಿಸ್ಸು, ಏರಿಯಾ ಎಂದು ಮಾಡಿಲ್ಲ. ಅಲ್ಲೇನು ಲ್ಯಾಂಡು ರೆವೆನ್ಯೂ ಬರುತ್ತೊ ಅದನ್ನು ಅವರಿಗೇ ಕೊಟ್ಟುಬಿಡಬೇಕು. ಅಲ್ಲಿರುವ ಗ್ರಾಮ ಪಂಚಾಯತಿಗಳಿಗೆ ಹಾಗೂ ತಾಲ್ಲೂಕು ಬೋರ್ಡುಗಳಿಗೆ ಈಕ್ವಿವಲೈಸೇಷನ್ನು ಗ್ರಾಂಟುಗಳೆಂದು ಅವರಿಗೆ ಕೊಡುತ್ತಾರೆ. ಇದನ್ನು ಜನರಲ್ ರೆವೆನ್ಯೂವಿನಿಂದ ಕೊಡುತ್ತಾರೆ. ಅದರಂತೆ ಇಲ್ಲಿ ವಿಚಾರ ಮಾಡಿಲ್ಲ. ಹಿಂದೆ ಇದ್ದ ತಾಲ್ಲೂಕಾ ಬೋರ್ಡು ಆಕ್ಟಿನಲ್ಲಿ ಏನು ಲ್ಯಾಂಡು ರೆವೆನ್ಯೂ ಬರುತ್ತಿತ್ತೋ ಅದನ್ನು ತಾಲ್ಲೂಕಾ ಬೋರ್ಡುಗಳಿಗೆ ಒಪ್ಪಿಸುತ್ತಿದ್ದರು. ಅದರಂತೆ ಇದರಲ್ಲೂ ಮಾಡಿದ್ದರೆ ನಾನೂ ಒಪ್ಪುತ್ತಿದ್ದೆ. ಲ್ಯಾಂಡು ರೆವೆನ್ಯೂವನ್ನು ಹಂಚಬೇಕೆಂದು ಮಾಡಿರುವುದು ಸರಿಯಾಗಿಲ್ಲ. ಬೊಂಬಾಯಿಯಲ್ಲಿ ಲ್ಯಾಂಡು ಸೆಸ್ಸು 20 ಪೈಸಾ ಎಂದು ಹಾಕುವುವಾದರೂ ಅದನ್ನು ಎಲ್ಲ ಮಟ್ಟದಲ್ಲೂ ಹಾಕಲು ಜಿಲ್ಲಾ ಪರಿಷತ್ತಿಗೆ ಗ್ರಾಮಪಂಚಾಯತಿಗಳವರು 20 ಪೈಸಾದಿಂದ ನೂರು ಪೈಸಾದವರೆಗೆ ಅಡಿಷನಲ್ ಸೆಸ್ಸು ಹಾಕಬೇಕೆಂದು ಒಂದು ರೆಸೊಲ್ಯೂಷನ್ನನ್ನು ಮಾಡಿ ಕಳುಹಿಸಿದರೆ ಅದರ ಮೇಲೆ ಒಪ್ಪಿಗೆ ಕೊಡುತ್ತಿದ್ದರು. ಹೀಗೆ ತಮ್ಮ ತಮ್ಮ ತಾಲ್ಲೂಕಾ ಬೋರ್ಡುಗಳವರು 10 ಪೈಸಾದಿಂದ 20—30 ಪೈಸಾದವರೆಗೆ ಸೆಸ್ಸನ್ನು ಹೆಚ್ಚು ಮಾಡಿಕೊಳ್ಳುವ ಆಪ್ಷನ್ನನ್ನು ಅವರಿಗೇ ಕೊಟ್ಟಿರುತ್ತಾರೆ. ಆದರೆ ಇದರಲ್ಲಿ ಸೆಸ್ಸನ್ನೂ ಹಾಕಬೇಕು ಅದನ್ನೇ ಹಂಚಬೇಕು ಎನ್ನುವುದನ್ನು ಇಲ್ಲಿಗೇ ನಿಲ್ಲಿಸಬೇಕು. ತಾಲ್ಲೂಕಾ ಬೋರ್ಡುಗಳವರು ಜಿಲ್ಲಾ ಪರಿಷತ್ತಿಗೆ ಅವರ ಸ್ಥಿತಿ ನೋಡಿಕೊಂಡು ನಾಲ್ಕು ಪೈಸಾ ಹೆಚ್ಚಿಸಬೇಕೆಂದು ರೆಸಲ್ಯೂಷನ್ನು ಮಾಡಿ ತಂದರೂ ಲ್ಯಾಂಡು ರೆವೆನ್ಯೂವನ್ನು ಡಬ್ಬಲ್ ಎಂದು ಮಾಡಿದರೆ ಅದು ಸುಮಾರು 21 ಪೈಸಾ ಎಂದು ಬರುತ್ತದೆ. ಎಂದರೆ ಒಂದು ಪಂಚಾಯತಿಗೆ ನಾಲ್ಕು ಪೈಸಾ ಬರುತ್ತದೋ ಏನೋ ಹೇಳುವುದಕ್ಕಾಗುವುದಿಲ್ಲ. ಇದರಿಂದ ಇದು ಸರಿಯಾದ ದಾರಿಯಲ್ಲ. ಇದು ಅನುಚಿತ, ಇದನ್ನು ಇಲ್ಲಿ ತೆಗೆಯಬೇಕೆಂದು ನಾನು ಕೇಳಿಕೊಳ್ಳುತ್ತೇನೆ.

ಇನ್ನು ಇದರಲ್ಲಿ ಜಿಲ್ಲಾ ಪರಿಷತ್ತುಗಳಿಗೆ ತಾಲ್ಲೂಕಾ ಬೋರ್ಡುಗಳಿಗೆ ಪವರುಗಳನ್ನು ಕೊಟ್ಟಿರುವುದು ಚೆನ್ನಾಗಿದೆ. ಮಾನ್ಯ ಮಂತ್ರಿಗಳಾದ ಶ್ರೀಮಾನ್ ರಾಮಕೃಷ್ಣ ಹೆಗ್ಗಡೆಯವರು ಇಲ್ಲಿಗೆ ರೆವೆನ್ಯೂ ಸಿಗಲನುಕೂಲವಾಗುವಂತೆ ಒಂದು ಫೈನಾನ್ಷಿಯಲ್ ಕಾರ್ಪೊರೇಷನ್ನನ್ನು ಮಾಡ

(ಶ್ರೀ ಅಣ್ಣಾರಾವ್ ಗಣಮುಖಿ)

ಬೇಕೆಂದು ಹೇಳಿದುದನ್ನು ನಾನೂ ಸಹ ಪುಷ್ಟೀಕರಿಸುತ್ತೇನೆ. ಇದರಲ್ಲಿ ಇವೊತ್ತಿನ ದಿವಸ ಯಾವ ರೆಮ್ಯೂನರೇಟೀವ್ ಅಸೆಟ್ಟುಗಳು ಎಂದು ಯಾವುದೂ ಇದರಲ್ಲಿಲ್ಲ. ಈ ಸಂಸ್ಥೆಗಳು ಕೂಡ ಹಣಕ್ಕಾಗಿ ಯಾವ ದಾರಿ ಎಂದು ಕಾಯುತ್ತಲೇ ಇರುತ್ತವೆ. ಬೊಂಬಾಯಿಯಲ್ಲಿದ್ದ ಮಸೂದೆಯಲ್ಲಿ ಎಷ್ಟು ಲ್ಯಾಂಡು ರೆವೆನ್ಯೂ ಎಂದು ಅವರಿಗೆ ಬರುತ್ತಿತ್ತೋ ಅದನ್ನು ಪೂರ್ತಿಯಾಗಿ ಅವರಿಗೇ ಕೊಟ್ಟುಬಿಡು ತ್ತಿದ್ದರು. ಅದೂ ಸಾಲದೆ ಅವರ ಕೆಲಸ ಕಾರ್ಯಗಳು ನಿಲ್ಲುವ ಸಂದರ್ಭ ಬಂದಾಗ ಈಕ್ವಿವ ಲೈಸೇಷನ್ ಗ್ರಾಂಟು ಎಂದು ಅವರಿಗೆ ಸಮೀಕರಣ ಮಾಡಿ ಗ್ರಾಂಟುಗಳನ್ನು ಸರಕಾರ ಕೊಡು ತ್ತಿದ್ದರು. ಅದರ ಪ್ರಕಾರ ಇದರಲ್ಲೂ ಹಾಕಿ ಬಿಡಿ. ಆದರೆ ಒಮ್ಮೆ ಗ್ರಾಂಟುಗಳು ಕೊಟ್ಟರೂ ಖರ್ಚು ಹೆಚ್ಚಾಗಿ ಬಂದಾಗ ಡೆಫಿಸಿಟ್ಟು ಗ್ರಾಂಟು ಎಂದು ಕೂಡ ಕೊಡುತ್ತಿದ್ದರು. ಇದರಿಂದ ಅಲ್ಲಿ ಕೆಲಸ ಮಾಡಲು ಅನುಕೂಲವಾಗುತ್ತದೆ. ಆದರೆ ಇಲ್ಲಿ ಬರೀ ಮೂರು ಪರ್ಸೆಂಟು ನಾಲ್ಕು ಪರ್ಸೆಂಟು ಎಂದು ಕೊಟ್ಟರೆ ಅದರಿಂದ ಏನೂ ಉಪಯೋಗವಾಗುವುದಿಲ್ಲ. ಕೆಲಸಗಳೂ ಚೆನ್ನಾಗಿ ನಡೆಯುವುದಿಲ್ಲ. ಅಲ್ಲದೆ ಇದರಲ್ಲಿ ಫೈನಾನ್ಸ್ ಬಗ್ಗೆ ನೋಡುವಾಗ ಬಹಳ ಲೂಪ್ ಹೋಲ್ಸ್‌ಗಳಿವೆ ಎನ್ನುವುದು ತಿಳಿಯುತ್ತದೆ. ಇದರ ಬಗ್ಗೆ ಹಣಕಾಸಿನ ಇಲಾಖೆಯವರು ಜನರ ಕುತ್ತಿಗೆಯನ್ನು ಕುಯ್ಯುವ ಕೆಲಸಗಳನ್ನು ಮಾಡುತ್ತಿದ್ದಾರೆಂದು ನನಗನಿಸುತ್ತಿದೆ. ಪಂಚಾಯತಿಗಳಿಗೆ ಬೇಕಾಗುವ ಹಣವನ್ನು ತಾಲ್ಲೂಕಾ ಬೋರ್ಡುಗಳವರು ಮಂಜೂರು ಮಾಡಬೇಕು. ತಾಲ್ಲೂಕಾ ಬೋರ್ಡುಗಳಿಗೆ ಹಾಗುವ ಜಿಲ್ಲಾ ಪರಿಷತ್ತುಗಳಿಗೆ ಬೇಕಾಗುವ ಹಣವನ್ನು ಚೀಫ್ ಎಕ್ಸಿಕ್ಯೂಟೀವ್ ಆಫೀಸರು ಸ್ಯಾಂಕ್ಷನ್ ಮಾಡ ಬೇಕೆಂದರೆ ಇಲ್ಲಿ ಸರಕಾರ ಹಿಡಿತವನ್ನು ತನ್ನ ಕೈಯಲ್ಲಿಟ್ಟುಕೊಂಡಿದೆ. ಇದರಿಂದ ನಾನು ಹೇಳು ವುದು ಇಂತಹ ಪಂಚಾಯತಿ ರಾಜ್ಯ ನಮಗೆ ಬೇಕಾಗಿಲ್ಲ. ಈ ರೀತಿ ಪ್ರತಿಯೊಂದರಲ್ಲೂ ಸರಕಾರ ಬ್ರೇಕ್ ಹಾಕುವುದು ಅಷ್ಟು ಉಚಿತವಾದುದಲ್ಲ. ಏನೋ ಟೆಕ್ನಿಕಲ್ ವಿಚಾರಗಳಲ್ಲಿ ಮಾತ್ರ ಸರಕಾರ ತನ್ನ ಹತೋಟಿಯನ್ನಿಟ್ಟುಕೊಂಡರೆ ಸರಿಯಾಗಿರುತ್ತದೆ. ಉಳಿದ ಎಲ್ಲ ಹಣಕಾಸನ್ನೂ ಈ ಸಂಸ್ಥೆ ಗಳವರೇ ಮಂಜೂರು ಮಾಡಿಕೊಳ್ಳುವಂತೆ ಮಾಡಿದರೆ ಬಹಳ ಚೆನ್ನಾಗಿರುತ್ತದೆ.

ಶ್ರೀ ರಾಮಕೃಷ್ಣ ಹೆಗ್ಗಡೆ.—ಈ ಬಿಲ್ಲಿನಲ್ಲಿ ಆಬಲಿಗೇಟರಿ ಹಾಗೂ ನಾನ್‌ಆಬಲಿಗೇಟರಿ ಎನ್ನುವ ಡಿಸ್ಟಿಂಕ್ಷನ್ನನ್ನು ಮಾಡಿಲ್ಲ.

ಶ್ರೀ ಅಣ್ಣಾರಾವ್ ಗಣಮುಖಿ.—ನಾನು ಇದನ್ನೆಲ್ಲಾ ಹಿಂದಿನ ಅನುಭವದಮೇಲೆ ಹೇಳು ತ್ತಿದ್ದೇನೆ. ಯಾವಾಗ ಇವುಗಳನ್ನೆಲ್ಲಾ ಆಬ್ಲಿಗೇಟರಿ ಡ್ಯೂಟೀಸ್‌ಗಳೆಂದು ಹೇಳಿದಿರೋ ಆಗ ಅವು ಗಳಿಗೆ ಆಗತಕ್ಕ ಹಣವನ್ನು ಕೊಡಲೇಬೇಕು. ಈ ಸ್ಥಳೀಯ ಸಂಸ್ಥೆಗಳವರಿಗೆ ಅವರವರ ಬಡ್ಜೆಟ್ಟನ್ನು ಮಂಜೂರು ಮಾಡಿಕೊಳ್ಳಲು ಅವರವರಿಗೇ ಅಧಿಕಾರವಿರಬೇಕು. ಇಲ್ಲಿಯವರೆಗೂ—ಈ ವಿಚಾರದಲ್ಲಿ ಡಿ.ಡಿ.ಸಿ. ಯವರಿಂದ ಯಾವ ಕಂಪ್ಲೇಂಟುಗಳೂ ಬಂದಿಲ್ಲ. ಅವರಿಗೇ ಈ ಅಧಿಕಾರಗಳನ್ನು ಕೊಟ್ಟರೆ ಅವರ ಕೆಲಸಗಳೆಲ್ಲಾ ಮೂರು ತಾಸಿನಲ್ಲಿ ಸರಾಗವಾಗಿ ಆಗಿಬಿಡುತ್ತವೆ. ಆದರೆ ಇಲ್ಲಿ ಈ ಬಡ್ಜೆಟ್ಟನ್ನು ಒಬ್ಬ ಆಫೀಸರನು ಮಂಜೂರು ಮಾಡಬೇಕೆಂದು ಹೇಳಿರತಕ್ಕದ್ದು ಅಷ್ಟು ಸಮಂಜಸವಾಗಿದ್ದಂತೆ ಕಂಡುಬರುವುದಿಲ್ಲ. ಒಂದು ವೇಳೆ ಆ ಬಡ್ಜೆಟ್ಟನ್ನು ಫ್ರೇಂ ಮಾಡುವುದರಲ್ಲಿ ಏನಾದರೂ ತಪ್ಪು ಗಳಾಗಿದ್ದರೆ ಅದನ್ನು ತಿದ್ದಿ ಕಳುಹಿಸುವಂತೆ ಅವರು ವಾಪಸ್ಸು ಮಾಡಲಿ.

ಇನ್ನು ಅವಿಶ್ವಾಸ ನಿರ್ಣಯದ ಬಗ್ಗೆ ಮೂರನೆ ಎರಡು ಭಾಗದಷ್ಟು ಜನ ಒಪ್ಪಿಗೆಯನ್ನಿತ್ತಲ್ಲಿ ಒಬ್ಬ ಸದಸ್ಯನನ್ನಾಗಲೀ ಅಥವಾ ಅಧ್ಯಕ್ಷನನ್ನಾಗಲೀ ತೆಗೆದುಹಾಕಬಹುದೆಂದು ಇಲ್ಲಿ ಹೇಳಿದೆ. ಆದರೆ ಇದು ಪ್ರಜಾಪ್ರಭುತ್ವ ತತ್ವಕ್ಕೆ ಅನುಗುಣವಾಗಿಲ್ಲ. ಬೊಂಬಾಯಿನಲ್ಲಿ ಅವರು ಹಾಗೆ ಮಾಡಿದ್ದಾರೆಂದು ನಾವು ಅದನ್ನೇ ಇಲ್ಲಿ ಅನುಕರಣೆ ಮಾಡಬೇಕೆಂದು ಹೇಳತಕ್ಕದ್ದು ಅಷ್ಟು ಸರಿ ಯಾಗಿ ಕಾಣುವುದಿಲ್ಲ. ಇದನ್ನು ಸಿಂಪಲ್ ಮೆಜಾರಿಟಿಗೆ ಇಳಿಸುವುದು ಒಳ್ಳೆಯದು. ಆದ್ದರಿಂದ ಈ ಕ್ಲಾಜನ್ನು ಇಲ್ಲಿ ಸರಿಯಾಗಿ ತಿದ್ದುಪಡಿಮಾಡಬೇಕಾಗಿದೆ. ಇತ್ತೀಚೆಗೆ ಜನರು ಬಹಳ ನಾಚಿಗೇಡು ತನಕ್ಕಿಳಿಯುತ್ತಿದ್ದಾರೆ. ಹಾಗಿರುವಾಗ ಇದನ್ನು ಖಂಡಿತ ಬದಲಾವಣೆಮಾಡಬೇಕೆಂದು ಹೇಳು ತ್ತೇನೆ.

ಇನ್ನು ಈ ನ್ಯಾಯಪಂಚಾಯಿತಿಗಳಲ್ಲೂ ಶಾಸನಸಭಾ ಸದಸ್ಯರಿಗೆ ಯಾವ ಸ್ಥಾನಗಳನ್ನೂ ಕೊಟ್ಟಿಲ್ಲ ಆದರೆ ಇವರಿಗಲ್ಲಿ ಓಟ್ ಕೊಡತಕ್ಕ ಅಧಿಕಾರವಿರದಿದ್ದರೂ ಅಲ್ಲಿಯ ಕಾರ್ಯಕಲಾಪಗಳಲ್ಲಿ ಇವರಿಗೆ ಪಾರ್ಟಿಸಿಪೇಟ್ ಮಾಡುವುದಕ್ಕೆ ಒಂದು ಅವಕಾಶವಿರಲೇಬೇಕು. ಅಲ್ಲಿ ಅಂಥಾ ಯಾವ ಪಾಲಿಟಿಕ್ಸಿಗೂ ಅವಕಾಶವಿಲ್ಲ. ನಮಗೂ ಅಲ್ಲಿರತಕ್ಕ ಸದಸ್ಯರಿಗೂ ಯಾವ ಅಂಥಾ ವ್ಯತ್ಯಾಸವೂ ಇರುವುದಿಲ್ಲ. ಇಷ್ಟನ್ನು ಸೆಲೆಕ್ಟ್ ಸಮಿತಿಯವರು ಪರಿಶೀಲಿಸುತ್ತಾರೆಂದು ಆಶಿಸಿ ನಾನು ನನ್ನ ಮಾತುಗಳನ್ನು ಮುಗಿಸುತ್ತೇನೆ.

† ಶ್ರೀ ಜಿ. ರಾಮೇಗೌಡ (ದೊಡ್ಡಬಳ್ಳಾಪುರ).—ಮಾನ್ಯ ಸಭಾಪತಿಗಳೇ : 1959 ರಲ್ಲಿ ಹಿಂದೆ ಒಂದಾವರ್ತಿ ಈ ಪಂಚಾಯಿತಿ ರಾಜ್ಯದ ಶಾಸನವಾದಾಗ್ಗೆ, ರಾಜ್ಯದಲ್ಲಿರತಕ್ಕ ಹಳ್ಳಿಗಾಡಿನ ಜನರಿಗೆ ಹೆಚ್ಚಿನ ಅಧಿಕಾರವನ್ನು ಕೊಟ್ಟು ಅವರ ಸಾಮಾಜಿಕ ಹಾಗೂ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಬೇಕೆಂಬ ಉದ್ದೇಶದಿಂದ ಸರ್ಕಾರದವರ ತಲೆಯಲ್ಲಿ ಅಂದು ಹೊಕ್ಕಿದ್ದ ವಿಕೇಂದ್ರಿಕರಣ ಅಂದರೆ ಅಧಿಕಾರ ವಿಕೇಂದ್ರೀಕರಣ ಇಲ್ಲಿಯವರೆಗೂ ಆಗಲೇ ಇಲ್ಲ. ಆದರೆ ಈಗ ಹೊಸದಾಗಿ ತಯಾರಿಸಿ ನಮ್ಮ ಮುಂದಿಟ್ಟಿರತಕ್ಕ ಮಸೂದೆಯಲ್ಲಾದರೂ ಅದನ್ನು ಜಾರಿಗೆ ತರಬಹುದೆಂದು ಆಶಿಸುತ್ತಿದ್ದೆವು. ಆದರೆ ಇದರಲ್ಲಿಯೂ ಕೂಡ ಅಂಥ ಹೊಸ ಬದಲಾವಣೆಗಳೇನನ್ನೂ ಮಾಡಿಲ್ಲ. ಹಿಂದಿದ್ದ ಶಾಸನದಲ್ಲಿ ಗ್ರಾಮಪಂಚಾಯಿತಿಯ ಸದಸ್ಯರಲ್ಲಿ ಎಷ್ಟು ಮಂದಿ ಸದಸ್ಯರು ಇರತ್ತಿದ್ದರೋ ಈಗ ಆ ಸದಸ್ಯರ ಸಂಖ್ಯೆಗಿಂತ ಒಂದೆರೆಡು ಹೆಚ್ಚಿರಬಹುದು, ಇಲ್ಲವೇ ಕಡಮೆ ಇರಬಹುದು. ಇಷ್ಟನ್ನು ಬಿಟ್ಟರೆ ಇದರಲ್ಲಿ ಇನ್ನಾವ ಬದಲಾವಣೆಗಳೂ ಆಗಿಲ್ಲ. ಹೀಗಾಗಿ ಇಲ್ಲಿಯ ತನಕ ಒಂದು ಪಂಚಾಯಿತಿಯ ಕೆಲಸಕಾರ್ಯಗಳೂ ಸರಿಯಾಗಿ ನಡೆದಿಲ್ಲ.

Mr. SPEAKER.—I find some Members are leaving the House. I do not find fault with them. I wish to tell them that there is a change in the sittings of the Assembly. The Assembly will work till Wednesday. Non-official days have been taken out and that has been agreed to by the Leader of the Opposition and the other members of the Business Advisory Committee. So, members may kindly note that we are sitting till Wednesday.

ಶ್ರೀ ಎಸ್. ಗೋಪಾಲ ಗೌಡ (ತೀರ್ಥಹಳ್ಳಿ).—ಪ್ರತಿದಿನವೂ ಹೀಗೆ ಪ್ರೋಗ್ರಾಮನ್ನು ಬದಲಾವಣೆಮಾಡುತ್ತಾ ಹೋದರೆ ನಾವು ಹೇಗೆ ಇಲ್ಲಿ ನಡೆಯತಕ್ಕ ಚರ್ಚೆಗಳ ಬಗ್ಗೆ ಒಂದು ನಿಲುವಿಗೆ ಬರುವುದಕ್ಕಾಗುತ್ತದೆ ? ನಮಗೆ ಮೊದಲೇ ಒಂದು ಇಂಡಿಕೇಷನ್ ಕೊಡುವುದು ಬೇಡವೇ ?

Mr. SPEAKER.—The Hon'ble Member will have to accept it.

Sri S. GOPALA GOWDA.—According to the whims and fancies of the Business Advisory Committee, things cannot go on like this.

Mr. SPEAKER.—I have heard it. If one Member does not agree, I cannot accommodate every member who wants to differ from us.

ಶ್ರೀ ಜಿ. ರಾಮೇಗೌಡ.—ಈ ಮಸೂದೆಯಲ್ಲಿ ಪಂಚಾಯಿತಿಗಳಿಗೆ ಈಗ ಹೆಚ್ಚಿನ ಅಧಿಕಾರವನ್ನು ಕೊಡಲಾಗಿದೆ ಎಂಬ ಕುರುಹು ಎಲ್ಲಿಯೂ ಕಂಡುಬರುತ್ತಿಲ್ಲ. ಈ ಅಧಿಕಾರ ನಡೆಸತಕ್ಕ ಪರಿಸ್ಥಿತಿ ಹಿಂದೆ ಯಾವ ರೀತಿ ಇತ್ತೋ ಇನ್ನು ಮುಂದಕ್ಕೂ ಅದೇರೀತಿ ಇರುತ್ತದೆ. ಆದ್ದರಿಂದ ಇಂಥ ಮಸೂದೆಗಳಿಂದ ಗ್ರಾಮಾಂತರ ಪ್ರದೇಶಗಳಿಗೇನೂ ಪ್ರಯೋಜನ ವಾಗುವುದಿಲ್ಲ. ಗ್ರಾಮಾಂತರ ಪ್ರದೇಶದ ಜನರ ಆರ್ಥಿಕ ಪರಿಸ್ಥಿತಿಯನ್ನು ಉತ್ತಮಗೊಳಿಸಲು ಇದರಲ್ಲೇನೂ ಅಂಥ ಕಲಂಗಳಿಲ್ಲ. ಕಂದಾಯದ ಹಣದಲ್ಲಿ 15 ಪರ್ಸೆಂಟನ್ನು ಜಾಸ್ತಿ ಕೊಡುತೇವೆಂದು ಹೇಳಿರಬಹುದು. ಆದರೆ ಅದೇನೂ ಅಂಥ ಮಹತ್ವದ ಬದಲಾವಣೆಯಲ್ಲ. ಇಲ್ಲಿ ಕೆಲವನ್ನು ಹಿಂದೆ ಜನರಲ್ ಫಂಕ್ಷನ್ ಎಂದು ಹೇಳಿದ್ದನ್ನು ಈಗ ಆಬ್ಲಿಗೇಟರಿ ಫಂಕ್ಷನ್ ಎಂತ ಹೇಳಿರುವುದನ್ನು ಬಿಟ್ಟರೆ ಇದರಲ್ಲೇನೂ ಅಂಥ ಹೆಚ್ಚಿನ ಬದಲಾವಣೆಗಳಿರುವುದಿಲ್ಲ. ಸರ್ಕಾರಕ್ಕೆ 15 ವರ್ಷಗಳ ಅನುಭವವಾದಮೇಲೂ ಪುನಃ ಅದೇ ಹಳೇಹಾದಿ ಹಿಡಿದಿದ್ದಾರೆ. ಇಲ್ಲಿ 12ನೆಯ ಪುಟದಲ್ಲಿ ಅಧ್ಯಕ್ಷರ ಅಧಿಕಾರಗಳೇನೆಂಬುದನ್ನು ಹೇಳಿದ್ದಾರೆ. ಆತನಿಗೆ ರಿಪೋರ್ಟ್ ಮಾಡತಕ್ಕ ಅಧಿಕಾರ ಒಂದೇ ವಿನಃ ಮತ್ತೇನೂ ಅಧಿಕಾರವಿಲ್ಲ. ಈ ದಿವಸ ತಾಲ್ಲೂಕ್ ಅಧ್ಯಕ್ಷನನ್ನು ಧಿಕ್ಕರಿಸಿ ಕೆಲಸಮಾಡತಕ್ಕ ಅಧಿಕಾರಿಯ ಬಗ್ಗೆ ಕ್ರಮ ಕೈಗೊಳ್ಳಲು ಸರ್ಕಾರಕ್ಕೆ ಶಕ್ತಿಯಿಲ್ಲ. ಇದರಲ್ಲಿ ಪದಗಳನ್ನು ಮತ್ತು ವಾಕ್ಯಗಳನ್ನು ಉಪಯೋಗಿಸಿರುವುದರಲ್ಲಿ ಡೆವಲಪ್‌ಮೆಂಟ್ ಅಧಿಕಾರಿಗಳಿಗೆ ಹೆಚ್ಚು ಶಕ್ತಿ, ಪವರ್ ಇದೆಯೇ ವಿನಹ ತಾಲ್ಲೂಕ್ ಬೋರ್ಡಿನ ಅಧ್ಯಕ್ಷರಿಗೆ ಏನೂ ಇಲ್ಲ. ಇದರಲ್ಲಿ ಇನ್ನೊಂದು ನ್ಯೂನತೆ ಇದೆ. ಈ ಕಾನೂನು ಮಂಜೂರಾದ ತಕ್ಷಣವೇ ಸರ್ಕಾರದಿಂದ ಸರ್ಕ್ಯುಲರ್‌ಗಳು ಬರುವುದಕ್ಕೆ ಪ್ರಾರಂಭವಾಗುತ್ತವೆ. ಆಗ Circular is not an order ಎಂದು ಹೇಳಿ ಅದು ಆರ್ಡರ್ ಅಲ್ಲವೆಂದು ವಿರೋಧವಾಗಿ ಹೋದರೆ ಸೂಚನೆಗಳನ್ನು ಕೊಡುವುದಕ್ಕೆ ಷುರುಮಾಡುತ್ತಾರೆ. ಸರ್ಕಾರದ ಅಧಿಕಾರಿಗಳು ಆ ಸೂಚನೆಗಳ ಪ್ರಕಾರ ವಿರೋಧವಾಗಿ ನಡೆದಿದ್ದೇ ಆದರೆ. ಅಂತಹ ಕೆಲಸಗಳನ್ನು ಮಾಡಿದ್ದರೆ ಅಂತಹವರನ್ನು ಪೇನಲೈಜ್ ಮಾಡುವುದಕ್ಕೆ ಈ ಒಂದು ದೊಡ್ಡ ಪುಸ್ತಕದಲ್ಲಿ ಒಂದು ವಾಕ್ಯವೂ ಇಲ್ಲ. ಈ ಒಂದು ಕಷ್ಟವನ್ನು ಸರ್ಕಾರದ ಮುಂದೆ ಎಷ್ಟೋಸಾರಿ ಹೇಳಿದ್ದೇವೆ. ಅನೇಕ ಸಮ್ಮೇಳನಗಳಲ್ಲಿಯೂ ತಿಳಿಸಿದ್ದೇವೆ, ಅಧ್ಯಕ್ಷರಾಗಿ ಮನವಿಗಳನ್ನು ಮಾಡಿದ್ದೇವೆ. ಆದರೆ ಇದುವರೆಗೂ ಏನೂ ಫಲಕಾರಿ

(ಶ್ರೀ ಜಿ. ರಾಮೇಗೌಡ)

ಕಾಣಲಿಲ್ಲ. ಇದರಲ್ಲಿ ಇನ್ನೊಂದು ದೊಡ್ಡ ನ್ಯೂನತೆ ಏನೆಂದರೆ ಹಳ್ಳಿಯ ಜನಗಳಿಗೆ ಅನುಕೂಲ ಕೊಡುವಾಗ ಪಟ್ಟಣವಾಸಿಗಳಿಗೆ ಏನೂ ತೊಂದರೆಯಾಗಬಾರದು. ಮುನಿಸಿಪಾಲಿಟಿ ಮತ್ತು ಅರ್ಬನ್ ಏರಿಯಾದಲ್ಲಿ ಇರತಕ್ಕ ಕಾನೂನುಗಳಲ್ಲಿ ಮುನಿಸಿಪಾಲಿಟಿ ಅಥವಾ ಕಾರ್ಪೊರೇಷನ್ನಿನಲ್ಲಿ ಆಯಾಸ್ಥಳದಲ್ಲಿಯೇ ವಾಸಮಾಡಬೇಕು ಎಂಬುದಾಗಿದ್ದರೂ ಕೂಡ ತಾಲ್ಲೂಕು ಬೋರ್ಡುಗಳಿಗೆ ಟೌನಿನಲ್ಲಿರತಕ್ಕ ಅವಕಾಶ ಇದರಲ್ಲಿ ಕೊಟ್ಟಿದೆ. ಇದರಿಂದ ಹಣ ಇರುವವರು ಹಣವಿಲ್ಲದವರ ಮೇಲೆ ತಮ್ಮ ಶಕ್ತಿಯನ್ನು ಉಪಯೋಗಿಸಿ compete ಮಾಡುವ ಒಂದು ಅವಕಾಶವನ್ನು ಇದರಲ್ಲಿ ಕೊಟ್ಟಿದ್ದಾರೆ. ಅದನ್ನು ತೆಗೆಯಲಿಲ್ಲ. ಇವರು ಕೊಡತಕ್ಕ ಶೇಕಡ 15ರಷ್ಟು ಹಣದಲ್ಲಿ ಇಂತಹ ಜವಾಬ್ದಾರಿಯನ್ನು ಪಂಚಾಯಿತಿಗೆ ಕೊಡಿಸಿ ಅದರ ಮೇಲ್ವಿಚಾರಣೆಯನ್ನು ಅವರೇ ನೋಡಬೇಕೆಂದು ಹೇಳಿದ್ದಾರೆ. ಆದರೆ ಒಂದು ವರ್ಷಕ್ಕೆ ಅದಕ್ಕೆ ಎರಡು ಲಕ್ಷ ರೂಪಾಯಿಗಳಾದರೂ ಸಾಲದು ಎಂಬುದು ಸರ್ಕಾರಕ್ಕೆ ತಿಳಿದಿದೆ. ಹೀಗಿರುವಾಗ ಈ ಜವಾಬ್ದಾರಿಯನ್ನು ಸಂಪೂರ್ಣವಾಗಿ ಅವರಿಗೆ ಕೊಟ್ಟಿದ್ದಾರೆ. ಪಂಚಾಯಿತಿಗೆ ಕೊಟ್ಟಿರುವ ಕೆಲಸಗಳು ಬಹಳ ಜಾಸ್ತಿ ಇವೆ. ಅವನ್ನು ಬಹಳ ಕಡಿಮೆಮಾಡಬೇಕು. ಮುಖ್ಯವಾದ ಕೆಲವು ಕೆಲಸಗಳ ಜವಾಬ್ದಾರಿಯನ್ನು ಅವರಿಗೆ ವಹಿಸಿದ್ದರೆ ಬಹಳ ಚೆನ್ನಾಗಿತ್ತು. ಹೆಚ್ಚಿಗೆ ಅವರಿಗೆ ಜವಾಬ್ದಾರಿ ಕೊಟ್ಟು ಹಣವಿಲ್ಲದೆಯೇ ತಮ್ಮ ಅಧಿಕಾರ ತೋರಿಸಿ ಎಂದರೆ ಸಾಧ್ಯವೇ ? ಅವರಿಗೆ ನಿಜವಾಗಿ ಆ ಕೆಲಸಗಳನ್ನೆಲ್ಲಾ ಮಾಡುವುದಕ್ಕೆ ಯೋಗ್ಯತೆ ಇದೆಯೇ ಇಲ್ಲವೇ ಎಂಬುದನ್ನು ನೋಡಿ ಸರ್ಕಾರ ಅವರಿಗೆ ಅಧಿಕಾರ ಕೊಡಬೇಕು. ಹಳ್ಳಿಯವರು ತಮ್ಮ ಗ್ರಾಮಾಂತರ ಪ್ರದೇಶಗಳಲ್ಲಿ ಏನಾದರೂ ಅಭಿವೃದ್ಧಿ ಕಾರ್ಯಗಳನ್ನು ಮಾಡಬೇಕಾದರೆ ಸೆಸ್, ತೆರಿಗೆ ಕೊಟ್ಟರೆ ಮಾಡುವುದು, ಇಲ್ಲದೇ ಹೋದರೆ ಇಲ್ಲವೇ ಇಲ್ಲವೆಂದು ಹೇಳಿದರೆ ಹೇಗೆ ? ಇದು ಯಾವನೀತಿ, ಖಂಡಿತವಾಗಿ ಸರ್ಕಾರದ ಈ ಒಂದು ಅಭಿಪ್ರಾಯ ಸರಿಯಲ್ಲ. ಅಲ್ಲಿ ಏನೇನು ಕೆಲಸಗಳು ಆಗಬೇಕೋ ಅವಕ್ಕೆಲ್ಲಾ ಬೇಕಾದ ಹಣವನ್ನು ಜನರಲ್ ಫಂಡಿನಿಂದ ಕೊಡಬೇಕು. ಇವರು ಸೆಸ್‌ಹಾಕಿ, ತೆರಿಗೆ ಹಾಕಿ ಗ್ರಾಮಾಂತರ ಪ್ರದೇಶಗಳಲ್ಲಿ ಗ್ರಾಮಾಭಿವೃದ್ಧಿ ಕಾರ್ಯಗಳನ್ನು ನಡೆಸಿಕೊಡುತ್ತೇವೆ ಎಂಬ ವಿಚಾರವನ್ನು ರೈತರು ಖಂಡಿತವಾಗಿ ಒಪ್ಪುವುದಿಲ್ಲ. ಇದರಿಂದ ಯಾವ ಬದಲಾವಣೆಯೂ ಆಗುವುದಿಲ್ಲ. ಅವರ ಸ್ಥಿತಿಗಳೂ ಸಹ ಉತ್ತಮವಾಗುವುದಿಲ್ಲ.

ಇನ್ನು ಈಗ ಜಿಲ್ಲಾ ಪರಿಷತ್ ಮತ್ತು ನ್ಯಾಯ ಪಂಚಾಯಿತಿ ಎನ್ನುವಂತಹ ಎರಡು ಹೊಸ ವಿಷಯಗಳು ಈ ವಿಧೇಯಕದಲ್ಲಿ ಅಡಕವಾಗಿವೆ. ಆದರೆ ಈ ಜಿಲ್ಲಾ ಪರಿಷತ್ತಿನಿಂದ ಒಂದು ಸೂಪರ್‌ವೈಜರ್ ಕೆಲಸ ನಡೆಯಬಹುದು ಎಂಬುದಾಗಿ ಆಶೆ ಇದ್ದರೂ ಅದಕ್ಕೆ ಕೊಟ್ಟಿರುವ ಕೆಲಸಗಳ ಜವಾಬ್ದಾರಿ ಪಟ್ಟಿಯನ್ನು ನೋಡಿದರೆ ಅದು ಬಹಳ ಜಾಸ್ತಿಯಾಗಿದೆ. ಈಗ ನಾನು ಒಂದು ಉದಾಹರಣೆಯನ್ನು ಕೊಡುತ್ತೇನೆ. ಸುಮಾರು 250 ಎಕರೆಗಳಷ್ಟು ನೀರಾವರಿ ಕೆರೆಗಳ ಅಚ್ಚುಕಟ್ಟನ್ನು ಜಿಲ್ಲಾ ಪರಿಷತ್ ನಡೆಸಬೇಕೆಂದು ಹೇಳುತ್ತಾರೆ. ಇವರ ಕೈಲಿ ಕೇವಲ 50 ಎಕರೆಗಳಷ್ಟು ಅಚ್‌ಕಟ್ಟನ್ನು ನಡೆಸುವುದಕ್ಕಾಗುವುದಿಲ್ಲವೆಂದು ನಾನು ಹೇಳುತ್ತೇನೆ. ಇಂತಹ ಒಂದು ದೊಡ್ಡ ಜವಾಬ್ದಾರಿಯನ್ನು ಅವರಿಗೆ ಕೊಟ್ಟು ಕೇವಲ ಎಕರೆಗೆ 20 ನಯೇಪೈಸೆಯಂತೆ ಸರ್‌ಚಾರ್ಜು ಹಾಕಿ ಈ ಕೆಲಸವನ್ನು ಮಾಡುತ್ತೇವೆಂದು ಹೇಳಿದರೆ ಖಂಡಿತವಾಗಿ ಅದು ಆಗುವುದಿಲ್ಲ. ಆದ್ದರಿಂದ ಇವರಿಗೆ ವಹಿಸಿರುವ ಜವಾಬ್ದಾರಿಯನ್ನು ಕಮ್ಮಿ ಮಾಡಬೇಕು. ಸರ್ಕಾರದಿಂದ ಇವುಗಳಿಗೆ ಜಾಸ್ತಿಯಾಗಿ ಹಣ ಕೊಡಬೇಕು. ಜಿಲ್ಲಾ ಪರಿಷತ್ತಿಗೆ ಇರತಕ್ಕ ಕೆಲಸಕಾರ್ಯಗಳು ಏನೇನಿವೆಯೋ ಅವುಗಳನ್ನು ಆದಷ್ಟು ಕಡಿಮೆಮಾಡಿ ಅವರಿಗೆ ಸೂಪರ್‌ವಿಷನ್ ಜಾಸ್ತಿ ಕೊಟ್ಟರೆ ಸಾಕು. ತಾಲ್ಲೂಕ್ ಬೋರ್ಡ್ ಮತ್ತು ಪಂಚಾಯಿತಿಯವರು ಅವರಿಗೆ ವಹಿಸಿರತಕ್ಕ ಕೆಲಸಗಳನ್ನು ಚೆನ್ನಾಗಿ ಮಾಡಿವೆಯೇ ಎನ್ನುವುದನ್ನು ಅವರು ನೋಡಬಹುದು. ಇದು ಜಿಲ್ಲಾ ಪರಿಷತ್ತುಗಳಿಗೆ ಒಳ್ಳೆಯ ಜವಾಬ್ದಾರಿಯ ಕೆಲಸ. ಯಾವ್ಯಾವ ಅಧಿಕಾರಗಳನ್ನು ಆ ಎರಡು ಸಂಸ್ಥೆಗಳಿಗೂ ಕೊಟ್ಟಿದ್ದೀರೋ ಅವನ್ನೆಲ್ಲಾ ಇಂಪ್ಲಿಮೆಂಟ್ ಮಾಡುವ ಶಕ್ತಿಯನ್ನು ಈ ಪರಿಷತ್ತಿಗೆ ಕೊಟ್ಟರೆ ಮಾತ್ರ ಗ್ರಾಮಾಂತರವಾಸಿಗಳ ಅಭಿವೃದ್ಧಿಗೆ ಸಾಧ್ಯ. ಇದರಲ್ಲಿ ಒಂದು ನ್ಯೂನತೆ. ತಾಲ್ಲೂಕ್ ಬೋರ್ಡಿನಲ್ಲಿ ಇನ್‌ಡೈರೆಕ್ಟ್ ಚುನಾವಣೆ ಬಹಳ ಕಷ್ಟ. ಡೈರೆಕ್ಟ್ ಎಲೆಕ್ಷನ್ ಇರಬೇಕು. ಇಲ್ಲದಿದ್ದರೆ ನಾನಾ ಕಷ್ಟಗಳು ಬರುತ್ತವೆ. ಓಟರುಗಳಿಗೆ ಎರಡು ಸಾರಿ ಅವಕಾಶ ಕೊಡಬೇಕಾಗಿ ಬರುತ್ತದೆ. ಆದ್ದರಿಂದ ಈಗ ಇದನ್ನು ಕೈಬಿಡಬೇಕಾದುದು ಬಹಳ ಮುಖ್ಯ.

ಇನ್ನು ಫೈನಾನ್ಸ್ ವಿಚಾರವಾಗಿ ಒಂದೆರಡು ಮಾತುಗಳನ್ನು ಹೇಳುತ್ತೇನೆ. ನಮ್ಮ ದೇಶದಲ್ಲಿ ಮೂರುವರ್ಷಗಳಿಂದಲೂ $33\frac{1}{3}$ ಭಾಗದಂತೆಯೂ ಈಗ್ಗೆ ಸುಮಾರು ಎರಡು ವರ್ಷಗಳಿಂದಲೂ $1\frac{3}{4}$ ರಂತೆಯೂ [illegible]

Revision of Revenue Classification ಮೇಲೆ ಒಂದಕ್ಕೆ ಮೂರು ನಾಲ್ಕರಷ್ಟು ತೆರಿಗೆಯನ್ನು ಕೊಡುತ್ತಿದ್ದಾರೆ. ನಮಗೆ ಒಂದೆರಡಷ್ಟಾದರೂ ತೆರಿಗೆ ಬೀಳಬಹುದು ಎಂಬ ಭಯವಿದೆ. ಹೀಗಿರುವಾಗ ವರ್ಷೇ ವರ್ಷೇ ಶೇಕಡ 40 ರಷ್ಟು, ಶೇಕಡ 20 ರಷ್ಟು ತೆರಿಗೆ ಜಾಸ್ತಿಯಾಗುತ್ತಾ ಬರುಬರುತ್ತಾ ಶೇಕಡ 100 ರಷ್ಟು ಜಾಸ್ತಿ ಮಾಡಿದ ಹಾಗಾಗುತ್ತದೆ. ಇನ್ನು ಬೆಟರ್‌ಮೆಂಟ್ ಲೆವಿ, ಇರ್ರಿಗೇಷನ್ ಸೆಸ್ ಒಂದಕ್ಕೆ 4 ರಷ್ಟು ಕೊಡಬೇಕೆಂದು ತೀರ್ಮಾನವಾಗಿ ನಮ್ಮ ಮುಂದೆ ಅದು ಬೇರೆ ಬರುತ್ತದೆ. ಕಂದಾಯ ಬೇರೆ ರಿವಿಷನ್ ಆಗುತ್ತದೆ. ಅದರ ಜೊತೆಗೆ ಇದನ್ನು ಬೇರೆ ಹಳ್ಳಿ ಜನಗಳ ಮೇಲೆ ಹೇರಿದರೆ ಹೇಗೆ? ಸರ್ಕಾರದವರು ಈಗಾಗಲೇ ರೈತಾಪಿ ಜನಗಳ ಮೇಲೆ ಹೊರಲಾರದಷ್ಟು ತೆರಿಗೆಗಳನ್ನು ಹಾಕುತ್ತಿದ್ದಾರೆ ಇದರಿಂದ ಪಂಚಾಯಿತಿ ರಾಜ್ಯವೇ ನಮಗೆ ಬೇಡ ಎಂದು ಗ್ರಾಮಾಂತರ ಜನಗಳು ಹೇಳುವ ಪರಿಸ್ಥಿತಿಗೆ ಅಲ್ಲಿನ ಜನಗಳನ್ನು ತಂದು ಇಟ್ಟುಕೊಳ್ಳುತ್ತಿದ್ದಾರೆ. ಇದನ್ನು ಹೇಗೆ ಮಾಡಬೇಕು ಅಂದರೆ ತಮ್ಮ ರೆವಿನ್ಯೂನಲ್ಲಿ ಅಗ್ರಿಕಲ್‌ಚರಲ್ ಇನ್‌ಕಂಟ್ಯಾಕ್ಸ್ ಮತ್ತು ಸೇಲ್ಸ್ ಟ್ಯಾಕ್ಸ್‌ಗಳನ್ನು ಜನ ಕೊಡುತ್ತಿದ್ದಾರೆ. ಹಳ್ಳಿಗಳಲ್ಲಿಯೂ ಇನ್‌ಕಂಟ್ಯಾಕ್ಸನ್ನು ಕೊಡುವವರಿದ್ದಾರೆ. ಯಾವ ರೀತಿಯಲ್ಲಿ ಹಣವನ್ನು ತೆರಿಗೆಯ ರೂಪದಲ್ಲಿ ಸಲ್ಲಿಸುತ್ತಿದ್ದಾರೋ ಅದೇ ರೀತಿಯಾಗಿ ಅವರಿಗೆ ಸಕಲ ಸೌಕರ್ಯಗಳನ್ನು ಕೊಡಬೇಕು. ಅವರ ಭಾಗವನ್ನು ಸರ್ಕಾರದವರು ಕೊಟ್ಟು ಅಲ್ಲಿನ ಕಾರ್ಯಗಳನ್ನು ಕಾರ್ಯರೂಪದಲ್ಲಿ ನಡೆಸುವುದಕ್ಕೆ ಬೇಕಾದ ಅಧಿಕಾರವನ್ನು ಈ ಕಾನೂನಿನಲ್ಲಿ ಕೊಡದೇ ಹೋದರೆ ಏನೂ ಪ್ರಯೋಜನವಿಲ್ಲ. ಈಗಿನಂತೆ ಅಧಿಕಾರ ಕೊಟ್ಟಿರುವುದೂ ಸಹ ಸರಿಯಾಗಿಲ್ಲ. ಹೋದ ಆಕ್ಟ್‌ನಲ್ಲಿ ಏನೇನು ಪದಗಳಿವೆಯೋ ಅವೇ ಪದಗಳು ಈಗಲೂ ಇವೆ.

ಇನ್ನು ಅಧಿಕಾರವರ್ಗ ಕಡಿಮೆ ಇರುವುದು ಬೇಕು. ಏಕೆಂದರೆ ಜಿಲ್ಲಾಮಟ್ಟದಲ್ಲಿ ಇಬ್ಬರು ಸೆಕ್ರೆಟರಿಗಳಿದ್ದಾರೆ. ಒಬ್ಬ ಅಧ್ಯಕ್ಷರು, ಒಬ್ಬ ಉಪಾಧ್ಯಕ್ಷರು ಇದ್ದಾರೆ. ಮುಂದೆ ಇಲ್ಲಿ ಆಗತಕ್ಕ ಅಧ್ಯಕ್ಷರು ನಾಳೆ ಕ್ಯಾಬಿನೆಟ್‌ನಲ್ಲಿ ಬರಲಿ ಎಂದು ಇಟ್ಟಿದ್ದಾರೆಂದು ನನಗೆ ಕಾಣುತ್ತದೆ. ಅವರಿಗೆ 500 ರೂಪಾಯಿಗಳ ಸಂಬಳ. ಓಡಾಡುವುದಕ್ಕೆ ಕಾರು. ಅಷ್ಟರಮೇಲೆ ಟಿ.ಎ. ಮತ್ತು ಡಿ.ಎ. ಇನ್ನು ಅವರನ್ನು ನೇಮಕ ಮಾಡಿದಮೇಲೆ ಏನೇನು ಮಾಡುತ್ತಾರೋ ಗೊತ್ತಿಲ್ಲ. ಇದೆಲ್ಲಾ ಇರುತ್ತದೆ. ಒಬ್ಬನನ್ನು ಜಿಲ್ಲಾಮಟ್ಟದಲ್ಲಿ ಸಾಕಬೇಕೆಂಬ ಅಭಿಪ್ರಾಯದಿಂದ ಅವರನ್ನು ಇಟ್ಟಿದ್ದಾರೆ. ಇವರಿಗೆ ಏನು ಮಾಡಬೇಕೋ ಅದನ್ನು ಮಾಡುವುದಕ್ಕೆ ಸಾಧ್ಯವಿಲ್ಲ.

12-30 P.M.

ಇನ್ನು ಈಗ ನ್ಯಾಯಪಂಚಾಯಿತಿ ಎಂದಿದೆ. ಈ ನ್ಯಾಯಪಂಚಾಯಿತಿ ಎಂಬುದನ್ನು ಸರ್ಕಾರದವರ ಮನಸ್ಸಿಗೆ ಅಥವಾ ಗಮನಕ್ಕೆ ಯಾರು ತಂದಿಟ್ಟರೋ ಗೊತ್ತಿಲ್ಲ. ನ್ಯಾಯವೆಂದರೇನು, ನ್ಯಾಯಾಲಯವೆಂದರೇನು, ನ್ಯಾಯಮೂರ್ತಿ ಎಂದರೇನು ಎಂಬುದೇ ಗೊತ್ತಿಲ್ಲದೆ ಇರುವ ಹಳ್ಳಿಗಳ ಜನಗಳ ಮುಂದೆ ನ್ಯಾಯಪಂಚಾಯಿತಿಯನ್ನು ತಂದಿಟ್ಟರೆ ಏನಾಗುತ್ತದೆ ಎಂಬುದನ್ನು ಸರ್ಕಾರ ಗಮನಿಸಬೇಕು. ಗ್ರಾಮಾಂತರ ಜನಗಳನ್ನು ಯಾರು ಹೋಗಿ ಏನು ಕೇಳಿದರೂ ಕೊಟ್ಟುಬಿಡುತ್ತಾರೆ. ಈ ಪರಿಸ್ಥಿತಿ ಗ್ರಾಮಾಂತರ ಪ್ರದೇಶಗಳಲ್ಲಿರುವಾಗ ಊರಿನೊಳಗೆ ಯಾವುದು ಒಳ್ಳೆಯದು, ಯಾವುದು ಕೆಟ್ಟದು ಎಂಬುದೇ ಅವರಿಗೆ ಗೊತ್ತಾಗುವುದಿಲ್ಲ. ಅಂದಮೇಲೆ ಕೋ-ಆಪ್ಟ್ ಮಾಡಬಹುದು ಎಂಬ ಒಂದು ಸೆಕ್ಷನ್ನನ್ನು ಇಲ್ಲಿ ಕೊಟ್ಟಿದ್ದಾರೆ. ಇದರಲ್ಲಿ ನನಗೆ ಬೇಕಾದವರನ್ನು ಅಲ್ಲಿ ತರಬಹುದು. ನಾನೇ ಏನು ಮಾಡುತ್ತೇನೆಂದರೆ ಎಂ.ಎಲ್.ಎ. ಪದವಿ ಬಿಟ್ಟು ನ್ಯಾಯಾಲಯದ ಚೇರ್‌ಮನ್ ಆಗುವುದಕ್ಕೆ ಇಷ್ಟಪಡುತ್ತೇನೆ. ಆಗ ನನಗೆ ಯಾರ ಮೇಲಾದರೂ ಕ್ರೋಧವನ್ನು ನಿರ್ವಹಿಸಬೇಕಾದರೆ ಅಸ್ಪದವಾಗುತ್ತದೆ. ಅಂತಹ ಮನೋಭಾವವನ್ನು ದೇಶದಲ್ಲಿ ಹುಟ್ಟಿಸುತ್ತಿದ್ದಾರೆ. ಈಗ ಮಾನ್ಯ ಶ್ರೀ ಕಡಿದಾಳ್ ಮಂಜಪ್ಪನವರು ಯಾವ ಊರಿನಲ್ಲಿ ಒಂದು ಪಾರ್ಟಿ ಇದೆಯೋ ಆ ಒಂದೊಂದರ ಮೇಲೂ ಒಂದು ರೀತಿಯಾದಂಥ ಅಭಿಪ್ರಾಯ ಬರುವಂತಾಗಿ ಮಾಡಿದರೆ ಆಗಲಿಲ್ಲ. ಒಂದು ನ್ಯಾಯಾಂಗ ಮಾಡಿಕೊಟ್ಟರೆ ಮಾತ್ರ ಜನಗಳಿಗೆ ಒಂದು ಶಾಂತಿರೂಪ ಪರಿಸ್ಥಿತಿ ತರುವುದಿಲ್ಲ. ಇದರಿಂದ ನಿಜವಾಗಿ ದ್ವೇಷವೇ ಜಾಸ್ತಿಯಾಗುತ್ತದೆ, ಅನೇಕರು ದ್ರೋಹಪೆಸಗುತ್ತಾರೆ, ಅನ್ಯಾಯ ಮಾಡುತ್ತಾರೆ, ಅಲ್ಲದೆ ಅನ್ಯಾಯ ಮಾಡಿದಂಥವರಿಗೆ ಇನ್‌ಫ್ಲುಯೆನ್ಸಿನಿಂದ ಶಿಕ್ಷೆಯಾಗುವುದಿಲ್ಲ. ಆದ್ದರಿಂದ ಈ ನ್ಯಾಯ ಪಂಚಾಯಿತಿಯ ಕರಡು ಶಾಸನವನ್ನು ಈ ವಿಧೇಯಕದಿಂದ ಖಂಡಿತವಾಗಿ ಸಂಪೂರ್ಣವಾಗಿ ತೆಗೆದುಹಾಕಬೇಕೆಂದು ನಾನು ಸರ್ಕಾರದವರನ್ನು ಕೇಳಿಕೊಳ್ಳುತ್ತೇನೆ.

ಯಾವ ರೀತಿಯ ಅಧಿಕಾರವನ್ನು ಕೊಡಬೇಕೆಂದು ಸರ್ಕಾರದವರು ಗಮನದಲ್ಲಿ ಇಟ್ಟುಕೊಂಡಿದ್ದಾರೆಯೋ ಅದನ್ನು ಕೊಡಬೇಕಾದರೆ ಮೊದಲು ಕೆಲವು ಡಿಸ್ಟ್ರಿಕ್ಟ್‌ಗಳನ್ನು ಸೆಲೆಕ್ಟ್‌ಮಾಡಿ ಅಲ್ಲಿ ಅದನ್ನು ಟ್ರಯಲ್ಲಾಗಿ ಇಡಿ. ಅದು ಏನಾದರೂ ಯಶಸ್ವಿಯಾಗುತ್ತದೆ, ಆಶಾದಾಯಕವಾಗಿದೆ ಎನ್ನುವುದು ಕಂಡುಬಂದರೆ ಆಗ ಅದನ್ನು ನಮ್ಮ ದೇಶದಲ್ಲೆಲ್ಲಾ ಇಡುವುದಕ್ಕೆ ಪ್ರಯತ್ನ ಮಾಡೋಣ. ಆದ್ದರಿಂದ ದಯವಿಟ್ಟು ನಾನು ತಮ್ಮನ್ನು ವಿನಯದಿಂದ ಕೇಳಿಕೊಳ್ಳುವುದೇನೆಂದರೆ ಈ ತರಹ ನ್ಯಾಯ

(ಶ್ರೀ ಜಿ. ರಾಮೇಗೌಡ)

ಪಂಚಾಯಿತಿಯನ್ನು ಮಾಡಬೇಡಿ ಎಂದು. ಈಗ ಮತ್ತೊಮ್ಮೆ ಪಂಚಾಯಿತಿಗಳಲ್ಲಿ ತಾಲ್ಲೂಕು ಬೋರ್ಡುಗಳಲ್ಲಿ, ಮತ್ತು ಜಿಲ್ಲಾ ಪರಿಷತ್ತಿನಲ್ಲಿ ಸಲಹೆಗಳನ್ನು ಕೊಡುವುದಕ್ಕೋಸ್ಕರ ಅಸೋಸಿಯೇಟೆಡ್ ಮೆಂಬರುಗಳನ್ನು ಇಟ್ಟುಕೊಂಡಿದ್ದೀರಿ, ಅವರು ಸುಮ್ಮನೆ ಅಲ್ಲಿಗೆ ಬಂದು, ತಮ್ಮ ಅಭಿಪ್ರಾಯವನ್ನು ಹೇಳುವುದಕ್ಕೆ ಅವಕಾಶ ಇದೆಯೇ ಹೊರತು ಅವರಿಗೆ ವೋಟು ಮಾಡತಕ್ಕ ಅಧಿಕಾರವಿಲ್ಲ. ಅವರಿಗೆ ವೋಟು ಮಾಡತಕ್ಕ ಅಧಿಕಾರವನ್ನು ಕೊಡಬೇಕು. ಈಗ ಯಾವುದಾದರೂ ಒಂದು ಚರ್ಚೆಯನ್ನು ಮಾಡಿದರೆ ಅದನ್ನು ಪುಷ್ಟೀಕರಿಸಬೇಕಾದರೆ ಓಟಿಂಗ್ ಪವರ್ ಇಲ್ಲದೆ ಹೋದರೆ ಶಕ್ತಿ ಬರುವುದಿಲ್ಲ. ಆದ್ದರಿಂದ ಅಸೋಸಿಯೇಟೆಡ್ ಮೆಂಬರುಗಳಿಗೆ ಓಟಿಂಗ್ ಪವರನ್ನು ಕೊಡಬೇಕು. ಡಿಸ್ಟ್ರಿಕ್ಟಿನಲ್ಲಿರತಕ್ಕ ಎಲ್ಲಾ ಕೋ-ಅಪರೇಟಿವ್ ಇನ್‌ಸ್ಟಿಟ್ಯೂಷನ್‌ಗಳೂ ಇದರಲ್ಲಿ ಸೇರಬೇಕು ಎಂದ ಹೇಳಿರುವುದು ಸೂಕ್ತವಾಗಿದೆ. ಆದರೆ ಅವರಿಗೆ ಓಟಿಂಗ್ ಪವರ್ ಕೊಟ್ಟು ಅವರ ಅಭಿಪ್ರಾಯಗಳನ್ನು ಧ್ಯೇಯಧೋರಣೆಗಳನ್ನು ಕೊಡುವುದಕ್ಕೆ ಅವಕಾಶವನ್ನು ಕೊಡಬೇಕೆಂದು ನಾನು ಮನವಿಮಾಡಿಕೊಳ್ಳುತ್ತೇನೆ. ಇಷ್ಟು ವಿಷಯಗಳನ್ನು ಹೇಳಿ ತಾವು ಈ ವಿಧೇಯಕವನ್ನು ಕಾರ್ಯರೂಪಕ್ಕೆ ತರುವುದಕ್ಕೆ ಮೊದಲು ಇದನ್ನು ಜಾಯಿಂಟ್ ಸೆಲೆಕ್ಟ್ ಕಮಿಟಿಗೆ ಕಳುಹಿಸಿ ಅಲ್ಲಿ ಮಾನ್ಯ ಸದಸ್ಯರು ಮತ್ತು ಸರ್ಕಾರದವರು ಕೂಲಂಕಷವಾಗಿ ಪರಿಶೀಲನೆಮಾಡಿ ಇದರಲ್ಲಿರತಕ್ಕ ಕಷ್ಟಗಳನ್ನು ತೊಡಕುಗಳನ್ನು ನಿವಾರಣೆಮಾಡಿ, ಹಳ್ಳಿಗಾಡಿನ ಜನರಿಗೆ ಈ ಶಾಸನ ಉಪಯುಕ್ತವಾಗುವಂತೆ ಮಾಡುತ್ತಾರೆಂದು ನಂಬಿ, ನಾನು ನನ್ನ ಮಾತನ್ನು ಮುಗಿಸುತ್ತೇನೆ.

Mr. SPEAKER.—The House will now rise to meet again at 12 NOON on Monday.

The House adjourned at Forty Minutes past Twelve of the Clock to meet again at Twelve of the Clock on Monday, the 13th July 1964.